
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ನವೆಂಬರ್ 17, 2010 ರೂ. 12/-

ಸಂದರ್ಶನಗಳು
ಬಿಜೆಪಿ
ಮತ್ತು
ಪ್ರಜಾಪ್ರಭುತ್ವ




ಸಂಪುಟ ವಿಸ್ತರಣೆ

ಡವಟ್ಟಾಯ್ತು!

ಜ್ಯೋತ್ಸವ ಪ್ರಶಸ್ತಿ
ಂಸ್ಕೃತಿಕ ವಲಯದ
ರೇಷನ್ ಕಮಲ

ನಾರಿಯ ಸೀರೆ ಕದ್ದು
ತನ್ನೂರ ಕೆರೆಯನ್ನೂ
ನುಂಗಿದ ಯಡ್ಡಿ



ಶೆಣೈ ಸೃಷ್ಟಿಸಿದ ಅದ್ಭುತ

ಹೆರಿಟೇಜ್ ವಿಲೇಜ್







ರಾಜ್ಯೋತ್ಸವ ಪ್ರಶಸ್ತಿಗಳು: ಸಾಂಸ್ಕೃತಿಕ ಲೋಕದ 'ಆಪರೇಷನ್ ಕಮಲ'!

"The best lack all conviction, while the worst are full of passionate intensity"

-W.B. Yeates

ಬಿಜೆಪಿ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗಳು ಘೋಷಣೆಯಾಗಿವೆ. ಈವರೆಗೆ ಯಾವ ಸರ್ಕಾರವೂ ಯಾವತ್ತೂ ಕೊಟ್ಟಿರದಷ್ಟು ಜನರಿಗೆ (182) ರಾಜ್ಯೋತ್ಸವ ಪ್ರಶಸ್ತಿಯನ್ನು ಹಂಚಲಾಗಿದೆ. ಈ ಪ್ರಶಸ್ತಿಗಳನ್ನು ಕಾಸಿಗೊಂದು-ಕೊಸರಿಗೊಂದು ಎಂಬಂತೆ ಹಂಚಿರುವ ಭರಾಟೆಯನ್ನು ನೋಡಿದರೆ ಶಾಸನಬದ್ಧ ಮಿತಿ ಇಲ್ಲದಿದ್ದರೆ ಯಡಿಯೂರಪ್ಪನವರು ಮಂತ್ರಿಗಿರಿಯನ್ನೂ ಇದೇ ರೀತಿ 120 ಜನರಿಗೂ ಹಂಚಿ ತಮ್ಮ ಸರ್ಕಾರವನ್ನು ಭದ್ರಗೊಳಿಸಿಕೊಳ್ಳುತ್ತಿದ್ದರೇನೋ?


ಇದು ತಮಾಷೆಯ ಮಾತೇನಲ್ಲ, ಯಡಿಯೂರಪ್ಪನವರ ಬಿಜೆಪಿ ಸರ್ಕಾರ ಮಂತ್ರಿಗಿರಿಯನ್ನು, ನಿಗಮ-ಬೋರ್ಡ್‌ಗಳ ಅಧ್ಯಕ್ಷ ಸ್ಥಾನವನ್ನು, ಸದಸ್ಯ ಸ್ಥಾನಗಳನ್ನು ಮತ್ತು ಇಂಥಾ ಪ್ರಶಸ್ತಿಗಳನ್ನು... ಎಲ್ಲವನ್ನೂ ತನ್ನ ಸರ್ಕಾರದ ಉಳಿವಿಗೆ ಕೊಡುವ ಲಂಚವೆಂದೇ ಪರಿಗಣಿಸಿದೆ. ಹಾಗೆ ನೋಡಿದರೆ ಹಿಂದಿನ ಬಹುಪಾಲು ಸರ್ಕಾರಗಳೂ ಸಹ ನಡೆದುಕೊಂಡು ಬಂದಿದ್ದು ಹೀಗೇ. ಒಂದು ರೀತಿಯಲ್ಲಿ ಇದು ಪ್ರಜಾತಾಂತ್ರಿಕ ರಿವಾಜುಗಳ ಮತ್ತು ಸಂಸ್ಥೆಗಳ ಅಧಃಪತನ. ಆದರೆ ಬಿಜೆಪಿ ಸರ್ಕಾರದ ಹೆಗ್ಗಳಿಕೆಯೇನೆಂದರೆ ಎಲ್ಲ ಬಗೆಯ ರಾಜಕೀಯ ಮತ್ತು ನೈತಿಕ ಅಧಃಪತನಗಳನ್ನು ಪಾತಾಳಕ್ಕೆ ಮುಟ್ಟಿಸಿದ್ದು ಮತ್ತು ಅದರಲ್ಲಿ ತಪ್ಪೇನೂ ಇಲ್ಲವೆಂಬಂತೆ ಭಂಡತನದಿಂದ ನಡೆದುಕೊಂಡು ಅದನ್ನು ಸಾರ್ವಜನಿಕವಾಗಿ ದಕ್ಕಿಸಿಕೊಳ್ಳುತ್ತಿರುವುದು. ಹೀಗಾಗಿ ಬಿಜೆಪಿ ಹಯಾಮಿನಲ್ಲಿ ಭ್ರಷ್ಟತನವು ಸಾಧನೆಗೂ, ಭಂಡತನವು ಧೈರ್ಯಕ್ಕೂ ಸಂವಾದಿಯಾಗಿ ಬಳಸಲ್ಪಡುತ್ತಿದೆ. ಉದಾಹರಣೆಗೆ ಈವರೆಗೆ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಾರುತ್ತಿದ್ದವರು ಕನಿಷ್ಠ ಯಾವುದಾದರೂ ಒಂದು ರಾಜಕೀಯ ಮೌಲ್ಯದ ಅಥವಾ ನೈತಿಕ ಮೌಲ್ಯದ ನೆಪವನ್ನಾದರೂ ಕೊಡುತ್ತಿದ್ದರು. ಏಕೆಂದರೆ ಸಾರ್ವಜನಿಕ ಜೀವನದಲ್ಲಿ ನೈತಿಕತೆ ಮತ್ತು ಮೌಲ್ಯಗಳು ಮುಖ್ಯವಾಗಿದ್ದವು. ಆದರೆ ಬಿಜೆಪಿ ಆಪರೇಷನ್ ಕಮಲ ಪ್ರಾರಂಭಿಸಿದ ಮೇಲೆ ಯಾವುದೇ ಎಗ್ಗೂಸಿಗ್ಗೂ ಇಲ್ಲದೆ ವಿರೋಧ ಪಕ್ಷದಲ್ಲಿದ್ದರೆ "ಅಭಿವೃದ್ಧಿ" ಸಾಧ್ಯ ಇಲ್ಲವಾದ್ದರಿಂದ ಆಡಳಿತ ಪಕ್ಷ ಸೇರಿಕೊಂಡೆ ಎಂದು ಬಹಿರಂಗವಾಗಿಯೇ ಭಂಡತನ ತೋರಿಸಲು ಪ್ರಾರಂಭಿಸಿದರು. ಇನ್ನು ರೇಣುಕಾಚಾರ್ಯರಂಥವರ ವಿಷಯ ವಂತೂ ಬೇಡವೇ ಬೇಡ!



ಹಾಗೆ ನೋಡಿದರೆ ರಾಜಕೀಯ ಕ್ಷೇತ್ರಕ್ಕಿಂತಲೂ ಮುಂಚಿ ಆಪರೇಷನ್ ಕಮಲ ನಡೆದದ್ದು ಸಾಂಸ್ಕೃತಿಕ ಕ್ಷೇತ್ರದಲ್ಲಿ. ಜೆಡಿಎಸ್-ಬಿಜೆಪಿ ಕಾಲದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಗಿರಿ ಹೊಡೆದುಕೊಂಡಿದ್ದ "ಪ್ರಗತಿಪರ" ಮತ್ತು ದಲಿತ ಕವಿ ಸಿದ್ದಲಿಂಗಯ್ಯನವರು ಬಿಜೆಪಿ ಅಧಿಕಾರಕ್ಕೆ ಬಂದಾಗ ತಾತ್ವಿಕ ನೆಲೆಯಲ್ಲಿ ರಾಜೀನಾಮೆ ಕೊಡುವುದರ ಬದಲು ಅದೇ ರಾತ್ರಿ "ತತ್ವಾಂತರ" ಮಾಡಿ "ಕನ್ನಡ ಪುಸ್ತಕ ಪ್ರಾಧಿಕಾರ"ದ ಅಧ್ಯಕ್ಷಗಿರಿ ಪಡೆದುಕೊಂಡು ಬಿಟ್ಟರು. ಅದಕ್ಕೆ ಅವರು ಕೊಟ್ಟ ಸಮಜಾಯಿಷಿ "ಅಧಿಕಾರವಿದ್ದರೆ ಕನ್ನಡ ಸೇವೆ ಮಾಡಬಹುದು" ಎಂಬುದು! ಆಪರೇಷನ್ ಕಮಲದ ಫಲಾನುಭವಿಗಳ ಭಾಷೆಗೂ, ಈ ಭಾಷೆಗೂ ಏನಾದರೂ ವ್ಯತ್ಯಾಸವಿದೆಯೇ?

ಜೆಡಿಎಸ್-ಬಿಜೆಪಿ ಪಕ್ಷಗಳು ಜಂಟಿಯಾಗಿ ಅಧಿಕಾರ ನಡೆಸುವಾಗಲೇ ಸಾಂಸ್ಕೃತಿಕ ಕ್ಷೇತ್ರದ ಮೇಲಿನ ಆಪರೇಷನ್ ಕಮಲದ ಸೂಚನೆಗಳು ಸಿಕ್ಕಿದ್ದವು. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಪಡೆಯುವ ಕನಸನ್ನೇ ಕಾಣದ ಹೊತ್ತಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣವಾದ ಜೆಡಿಎಸ್ ಬಗ್ಗೆ ಪ್ರಾರಂಭದಲ್ಲಿ ಎಲ್ಲಾ ಪ್ರಗತಿಪರ ಬುದ್ಧಿಜೀವಿ ಮತ್ತು ಸಾಹಿತಿಗಳಿಗೂ ಸಿಟ್ಟಿತ್ತು. ಆದರೆ ಈ ಸಿಟ್ಟಿಗೆ ಆಳವಾದ ತಾತ್ವಿಕ ನೆಲೆಯಾಗಲೀ ಅಥವಾ ಬದ್ಧತೆಯಾಗಲೀ ಇರಲಿಲ್ಲವೆಂಬುದು ಬಹಳ ಬೇಗ ಸಾಬೀತಾಗುತ್ತಾ ಹೋಯಿತು. ಅದೇ ಸಮಯದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಸಮ್ಮೇಳನ ನಡೆಯುವುದಿತ್ತು. ಆಗ ಅದರ ಸಂಘಟಕರು ಈ ಬಿಜೆಪಿ ಮಿಶ್ರಿತ ಸರ್ಕಾರದ ಅಡಿಯಲ್ಲಿರುವ ಯಾವುದೇ ಅಕಾಡೆಮಿ, ಸಮಿತಿಗಳಲ್ಲಿ ಬಂಡಾಯದ ಸದಸ್ಯರು ಇದ್ದರೆ ಅವರೆಲ್ಲ ರಾಜೀನಾಮೆ ಕೊಟ್ಟು ಹೊರಬರಬೇಕೆಂಬ ತೀರ್ಮಾನ ತೆಗೆದುಕೊಂಡ ನಂತರವೇ ಶಿವಮೊಗ್ಗದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಸಮ್ಮೇಳನ ನಡೆದಿತ್ತು. ಮುಂದೆ ಈ ಬಿಜೆಪಿ ಮಿಶ್ರಿತ ಸರ್ಕಾರಕ್ಕೆ ಯಾವ ಬಗೆಯ ಪ್ರತಿರೋಧ ವ್ಯಕ್ತಪಡಿಸಬೇಕೆಂಬ ಬಗ್ಗೆ ಆನಂತರ ತೀರ್ಮಾನ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿತ್ತಾದರೂ ಆ ಸಭೆಯೇ ನಡೆಯಲಿಲ್ಲ, ಬದಲಿಗೆ ಹಲವಾರು ಬಂಡಾಯ ಸಾಹಿತಿಗಳು ನಿಧಾನವಾಗಿ ಮೆದುವಾಗತೊಡಗಿದರು. ಕಬ್ಬಿಣ ಕಾದಾಗ ಮೆದುವಾಗುತ್ತದೆ. ಪ್ರಗತಿಪರ ಸಾಹಿತಿಗಳು ಒಳಗೆ ಕಾವನ್ನು ಕಳೆದುಕೊಂಡಾಗ ಮೆದುವಾಗುತ್ತಾರೆ, ರಾಜಿಗೆ ಹದವಾಗುತ್ತಾರೆ. ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಬಿಜೆಪಿ ಮೆದುಳಿನ ಮತ್ತು ಜೆಡಿಎಸ್ ದೇಹದ ಸರ್ಕಾರ ಕೂಡಲೇ ಸಾಂಸ್ಕೃತಿಕ ಕ್ಷೇತ್ರದಲ್ಲಿ 'ಆಪರೇಷನ್ ಕಮಲ'ವನ್ನು ಪ್ರಾರಂಭಿಸಿದರು.

ಕೀರ್ತಿಯ ಅನಸ್ತೇಷಿಯಾ ಕುಡಿದು ಅಮಲಿನಲ್ಲಿದ್ದವರ ಮೇಲೆ ಆಪರೇಷನ್ ಸುಲಭವಾಗಿಯೇ ನಡೆಯುತ್ತದೆ. ಹಲವಾರು ಪ್ರಗತಿಪರರು ಬಿಜೆಪಿ ಮಿಶ್ರಿತ ಸರ್ಕಾರದ ಅಡಿಯಲ್ಲಿದ್ದ ಹಲವು ಅಕಾಡೆಮಿಗಳಿಗೆ, ಸಮಿತಿಗಳಿಗೆ ಸದಸ್ಯರಾದರು. ಇನ್ನೂ ಹಲವರು ರಾಜ್ಯೋತ್ಸವ ಪ್ರಶಸ್ತಿಯ



ಫಲಾನುಭವಿಗಳಾದರು. ಆ ವೇಳೆಗಾಗಲೇ ರಾಜ್ಯೋತ್ಸವ ಪ್ರಶಸ್ತಿಯ ಹಣದ ಜೊತೆಗೆ 20 ಗ್ರಾಂ ಚಿನ್ನದ ಮತ್ತು ಅಗ್ಗದ ಬೆಲೆಯ ಸೈಟಿನ ಪ್ರಲೋಭನೆಯೂ ಹತ್ತಿಕೊಂಡಿತ್ತು. ಹೀಗಾಗಿ ಪ್ರಶಸ್ತಿಯ ನಿರಾಕರಣೆ ಈ ಪ್ರಲೋಭನೆಯನ್ನೂ ಮೀರುವ ಬದ್ಧತೆಯನ್ನು ಕೇಳುತ್ತಿತ್ತು. ಹಲವಾರು ಜನರಿಂದ ಈ ಅಗ್ನಿಪರೀಕ್ಷೆಯನ್ನು ದಾಟಲು ಆಗಲಿಲ್ಲ. ಅಷ್ಟು ಮಾತ್ರವಲ್ಲ, ತಾವು ಸರ್ಕಾರದ ಆಮಿಷಗಳನ್ನು ಒಪ್ಪಿಕೊಂಡಿದ್ದಕ್ಕೆ ಚಿತ್ರವಿಚಿತ್ರ ಕಾರಣಗಳನ್ನು ಕೊಡಲು ಪ್ರಾರಂಭಿಸಿದರು. "ನಾವೂ ಒಳಗೆ ಹೋಗಲಿಲ್ಲ ಎಂದರೆ ಅವರು ತಮಗೆ ಬೇಕಾದವರನ್ನೇ ತುಂಬಿಕೊಳ್ಳುತ್ತಾರೆ. ಆಗ ಪ್ರಗತಿಪರ ವಾತಾವರಣ ಸೃಷ್ಟಿಸುವುದು ಇನ್ನಷ್ಟು ಕಷ್ಟವಾಗುತ್ತದೆ. ಹೀಗಾಗಿ ಒಳಗೆ ಹೋಗಿ ಅಂಥಾ ಕೋಮುವಾದೀಕರಣವನ್ನು ತಡೆಗಟ್ಟುವುದು ಸಹ ಒಂದು ಕೋಮುವಾದಿ ವಿರೋಧಿ ಹೋರಾಟವೇ"... ಹೀಗಿತ್ತು ಅವರ ತರ್ಕ ಸರಣಿ. ಅವಕಾಶವಾದಕ್ಕೂ ಹೋರಾಟದ ಬಿದರನ್ನು ಕೊಡುವ ಭಂಡತನ ಆಗಲೇ ಪ್ರಾರಂಭವಾಗಿತ್ತು, ಆದರೆ ಒಳಗೆ ನಡೆಯುತ್ತಿದ್ದ ಕೋಮುವಾದೀಕರಣವನ್ನು ಇವರು ಹೋರಾಡಿ ತಡೆದದ್ದಕ್ಕಂತೂ ಇದುವರೆಗೆ ಏನೂ ಪುರಾವೆಗಳು ಸಿಕ್ಕಿಲ್ಲ. ಹಾಗೆಯೇ "ಅಕಾಡೆಮಿ ಇತ್ಯಾದಿಗಳು ಸರ್ಕಾರವಲ್ಲ, ಅವಕ್ಕೆ ಸಾಪೇಕ್ಷವಾದ ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಸರ್ಕಾರ ಸೇರುವುದು ಮತ್ತು ಅಕಾಡೆಮಿಗಳನ್ನು ಸೇರುವುದು ಎರಡೂ ಒಂದೇ ಅಲ್ಲ" ಎಂಬ ವಾದಗಳೂ ಹುಟ್ಟಿಕೊಂಡವು. ಅವೆಲ್ಲವೂ ಎಂಥಾ ಪೇಲವ ವಾದಗಳಾಗಿತ್ತೆಂದರೆ ಅದನ್ನು ಅವರೇ ಕೈಬಿಟ್ಟರು. ಅದೇನೇ ಇರಲಿ, ಇವರೆಲ್ಲರೂ ಬಿಜೆಪಿ ಮಿಶ್ರಿತ ಸರ್ಕಾರದ ಪರೋಕ್ಷ ಭಾಗೀದಾರರೇ ಆಗಿ ಆ ಸರ್ಕಾರಕ್ಕೆ ಮಾನ್ಯತೆಯನ್ನು ತಂದುಕೊಟ್ಟದ್ದಂತೂ ನಿಜ.

ಇದರರ್ಥ ಅವರೆಲ್ಲಾ ಕೋಮುವಾದಿಗಳಾಗಿ ಹೋದರು ಎಂದೇನೂ ಅಲ್ಲ, ಏಕೆಂದರೆ ಇವರಲ್ಲಿ ಹಲವರು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಅದರ ವಿರುದ್ಧ ನಿರಂತರ ಸಂಘರ್ಷದಲ್ಲಿ ತೊಡಗಿದ್ದಾರೆ. ಆದರೆ ಆಗ ಸರ್ಕಾರದ ಭಾಗ ವಾಗುವಾಗ ಅವರು ಒದಗಿಸಿದ ತರ್ಕ ಮತ್ತು ಅವರ ಭಾಗೀದಾರಿಕೆ ಸಾಂಸ್ಕೃತಿಕ ಕ್ಷೇತ್ರದ ಅಂಚಿನಲ್ಲಿ ಇರಬೇಕಿದ್ದ ಬಿಜೆಪಿ ಸಿದ್ಧಾಂತಗಳಿಗೆ ಯಾವುದೋ ಒಂದು ಬಗೆಯ ಮನ್ನಣೆಯನ್ನು ತಂದುಕೊಟ್ಟದ್ದಂತೂ ನಿಜ.

ಹೀಗೆ ಬಿಜೆಪಿ ಸರ್ಕಾರವೇ ಅಧಿಕಾರಕ್ಕೆ ಬರುವ ವೇಳೆಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನ್ನ ಹಳಸಿತ್ತು, ನಾಯಿ ಹಸಿದಿತ್ತು. 'ಆಪರೇಷನ್ ಕಮಲ'ದಂಥಾ ಪ್ರಜಾತಂತ್ರದ ಬಹಿರಂಗ ಅತ್ಯಾಚಾರವೂ ನ್ಯಾಯಸಮ್ಮತವಾಗಿ ಹೋಗಿದ್ದು ಬಿಜೆಪಿಯ ವಿರುದ್ಧ ಸಾರ್ವಜನಿಕ ವಲಯದಲ್ಲಿ ಇರಬೇಕಿದ್ದ ಕೆಂಡದಂಥ ಕಾವು ಹೀಗೆ ತಣ್ಣಗಾಗುತ್ತಾ ಬರುತ್ತಿದ್ದರಿಂದಲೇ ಅಲ್ಲವೇ?

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕನ್ನಡದ ಸಾಂಸ್ಕೃತಿಕ ಕ್ಷೇತ್ರದ ಮೇಲೆ ಎರಡು ಬಗೆಯ ದಾಳಿಗಳನ್ನು ನಡೆಸುತ್ತಿದೆ. ಒಂದು-ಅತ್ಯಂತ ನಿರ್ಲಜ್ಜವಾಗಿ ಬ್ರಾಹ್ಮಣ-ಲಿಂಗಾಯತ ಜಾತಿಗಳನ್ನು ಮೆರೆಸುತ್ತಿದೆ; ಬ್ರಾಹ್ಮಣೀಯ ಮತ್ತು ಹಿಂದೂ ಕೋಮುವಾದೀ ಮೌಲ್ಯಗಳನ್ನು ಬಿತ್ತುವ ಸಾಹಿತಿಗಳಿಗೆ ಸಕಲ ಸರ್ಕಾರಿ ಮರ್ಯಾದೆಗಳನ್ನು ನೀಡಿ ಅವರಿಗೆ ಸಾರ್ವಜನಿಕ ಮಾನ್ಯತೆಯನ್ನು ದಕ್ಕಿಸಿಕೊಡುತ್ತಿದೆ. ಎರಡನೆಯದಾಗಿ ಪ್ರಗತಿಪರ ವರ್ತುಲದಲ್ಲಿ ಕೊಳ್ಳಬಲ್ಲ, ಮೌನವಾಗಿಸಬಲ್ಲ ಸರಕುಗಳನ್ನು ಹುಡುಕಿ ಎಷ್ಟು ಬೆಲೆ ತೆತ್ತಾದರೂ ಕೊಂಡುಕೊಳ್ಳುತ್ತಿದೆ. ಆ ಮೂಲಕ ಮೇಲ್ಜಾತಿ ಮತ್ತು ಮೇಲ್ವರ್ಗದ ತನ್ನ ರಥಕ್ಕೆ ಕೆಳವರ್ಗದ ಚಕ್ರಗಳನ್ನು ಜೋಡಿಸಿಕೊಂಡು ಹಿಂದೂತ್ವದ ಸಾರೋಟನ್ನು ತಯಾರು ಮಾಡಿಕೊಂಡಿದೆ. ಈ ಹುನ್ನಾರಕ್ಕೆ ರಾಜ್ಯೋತ್ಸವ ಪ್ರಶಸ್ತಿಗಳೂ ಸಹ ಒಂದು ಸಾಧನವಾಗಿದೆ.

ಈ ಹುನ್ನಾರವನ್ನು ನಮ್ಮ ಸಾಂಸ್ಕೃತಿಕ ಲೋಕದ ಪ್ರಗತಿಪರ ಗಣ್ಯರು ಅರ್ಥಮಾಡಿಕೊಳ್ಳಬೇಕಿತ್ತು. ಆದರೆ ಹತ್ತು ಹಲವು ಕಾರಣಗಳನ್ನು ಮುಂದೆ ಮಾಡಿಕೊಂಡು ಹಲವರು ಈ ಪ್ರಶಸ್ತಿಯನ್ನು - ಆ ಮೂಲಕ ಬಿಜೆಪಿ ಸರ್ಕಾರದ ಮೆಹರ್‌ಬಾನಿಯನ್ನು - ಒಪ್ಪಿಕೊಳ್ಳುತ್ತಿದ್ದಾರೆ. ಕೆಲವರಿಗೆ ಈ ಪ್ರಶಸ್ತಿ ನಿರಾಕರಿಸಲಾಗದಷ್ಟು ಮೌಲಿಕವಾದದ್ದು, ಲೌಕಿಕವಾದದ್ದು. ಏಕೆಂದರೆ ಈಗಾಗಲೇ ಹೇಳಿದಂತೆ ಪ್ರತಿ ರಾಜ್ಯೋತ್ಸವ ಪ್ರಶಸ್ತಿಯ ಜೊತೆಗೆ ಒಂದು ಲಕ್ಷ ನಗದು, 20 ಗ್ರಾಂ ಚಿನ್ನ, ಮತ್ತು ಅಗ್ಗದ ಬೆಲೆಯಲ್ಲಿ ಸೈಟನ್ನು ಪ್ರಾಧಾನ್ಯತೆ ನೀಡಿ ನೀಡಲಾಗುತ್ತದೆ. ಈ ಸೈಟುಗಳು ಕೋಟ್ಯಾಂತರ ರೂ. ಬೆಲೆ ಬಾಳುವುದಾಗಿದ್ದು ಹಲವು

▶▶16

ನೋ ಕಾಮೆಂಟ್ಸ್

"ಭಾರತದ ಮಧ್ಯಮವರ್ಗಕ್ಕೆ ಈ ದೇಶ... ಏನೆಂಬುದರ ಪರಿಚಯವೇ ಇಲ್ಲ, ಟೆಲಿವಿಷನ್‌ಗ... ವಂಥಾ ಮತ್ತು ಸಾಮೂಹಿಕ ದಾರಿದ್ರ್ಯದ ನ... ಸೌಕರ್ಯಗಳ ದ್ವೀಪದಂತಿರುವ ಕೆಲವೇ ಕೆಲವು ... ಭಾರತವೆಂದು ಅವರನ್ನು ನಂಬಿಸಲಾಗಿದೆ. ಆದರೆ ... ಗುಪ್ತಾ ವರದಿ ಸ್ಪಷ್ಟಪಡಿಸಿರುವಂತೆ ಈ ದೇಶದ... ಪ್ರದೇಶದ ಶೇ.77ರಷ್ಟು ಜನರ ದೈನಂದಿನ... ಕೇವಲ 20 ರೂ. ಈ ಅಂಕಿಅಂಶ ಸರಿ... ಇರಬಹುದು. ಶೇ. 5ರಷ್ಟು ಆಚೀಚೆ ಇರಬಹು... ಇದೇ ವಾಸ್ತವ."

- ಜೀನ್...
ರಾಷ್ಟ್ರೀಯ ಸಲಹಾ ಸಮಿತಿ...

"ಹಲವಾರು ಬಾರಿ, ನಾವು ಪತ್ರಿಕಾ ಸ... ಇಡೀ ದೇಶಕ್ಕೇ ಮತ್ತು ಸರ್ಕಾರಕ್ಕೆ ಮಾರ್ಗಸೂಚಿ... ತ್ತಿದ್ದೇವೆಂಬ ಭ್ರಮೆಯಲ್ಲಿರುತ್ತೇವೆ. ಆದರೆ ವಾಸ್ತವ ... ಇರುವುದಿಲ್ಲ. ಸರ್ಕಾರಕ್ಕೆ ಮಾರ್ಗಸೂಚಿ ತೋ... ಬೇರೆಯೇ ಇರುತ್ತಾರೆ. ಇದು ಹೇಗೆಂದರೆ ದೊ... ಕ್ರಿಕೆಟ್ ಟೂರ್ನಮೆಂಟ್ ನಡೆದಾಗ ಪತ್ರಕರ್ತರಿ... ವೀಕ್ಷಕರ ಕೊಠಡಿಯಲ್ಲಿ ಅವಕಾಶ ಮಾಡಿಕೊಡು... ವಾಸ್ತವ. ನಮ್ಮ ಸ್ಥಾನ ವಿಶೇಷ ವೀಕ್ಷಕರದ್ದು ಅಷ್ಟೆ... ನಿರ್ಣಯಿಸುವವರು ನಾವಲ್ಲ."

- ವಿನೋದ...
ಔಟ್‌ಲುಕ್ ಪತ್ರಿಕೆಯ ...

"ನಾವು ಶಾಂತಿಯ ದಾರಿಯಲ್ಲಿ ಹಲವಾರು... ಕಾಲ ಹೋರಾಡಿದೆವು. ಆದರೆ ಭಾರತ ಸರ್ಕಾ... ಮಾತು ಕೇಳಿದ್ದು ನಾವು ಬಂದೂಕ ಕೈಗೆತ್ತಿಕೊಂ...

- ಫುಂತೆಂಗ್ ಶಿಮ್ರೆ...
ಎನ್‌ಎಸ್‌ಸಿಎನ್ ಸಂಘಟನೆಯ...

"ಸ್ವತಂತ್ರ ಕಾಶ್ಮೀರ ಎನ್ನುವುದು ಒಂದು ದೊ... ರಾಷ್ಟ್ರವೇ ಆಗಬಹುದು, ಸ್ವತಂತ್ರ ಭಾರತದಲ್ಲಿ ... ದೋಷವಿಲ್ಲವೇ? ಎಲ್ಲವೂ ಸರಿಯಿದೆಯೇ?"

- ಅರುಂಧತಿ...

ನಂಬಿದ್ರೆನಂಬಿ ಬಿಟ್ರೆಬಿಡಿ...

"ನ್ಯಾಷನಲ್ ಸ್ಯಾಂಪಲ್ ಸರ್ವೆ, ನ್ಯಾಷನಲ್ ಹೆ... ಮತ್ತು ಇಂಡಿಯನ್ ಹ್ಯೂಮನ್ ಡೆವಲಪ್‌ಮೆಂ... ಗಳು ಸ್ಪಷ್ಟಪಡಿಸಿದಂತೆ 2005ರ ವೇಳೆಗೂ ಗ್ರಾಮೀಣ... ಶೇ.50ರಷ್ಟು ಮನೆಗಳು ಬಿಪಿಎಲ್ ಕಾರ್ಡನ್ನು ಹೊಂ...

- ಜೀನ್ ಡ್ರೆಜ್, ರಾಷ್ಟ್ರೀಯ...
ಸಮಿತಿಯ...

ಬಲಾತ್ಕಾರವನ್ನು ತಡೆಯಲಾಗ... ಎಂದರೆ ಅದನ್ನು ಸಂತೋಷ... ಅನುಭವಿಸು ಎಂದಂತೆ!

"ಅಲಹಾಬಾದ್ ಕೋರ್ಟಿನ ತೀರ್ಮಾನ ... ಒಳ್ಳೆಯದೇ ಎನಿಸಿದೆ. ನ್ಯಾಯಾಲಯವು ಮೊಟ್ಟ... ಬಾರಿಗೆ ಜನರ ನಂಬಿಕೆಗೆ ಗೌರವ ನೀಡಿದೆ ಮತ್ತು... ವಿವಾದಗಳನ್ನು ಬಗೆಹರಿಸಿಕೊಳ್ಳಲು ನ್ಯಾಯಾಲಯ... ಸ್ಥಳೀಯ ಸಮುದಾಯಗಳೇ ಉತ್ತಮವಾದವೆಂ... ಕೊಂಡಿವೆ. ಆದ್ದರಿಂದ ನಾನು ನ್ಯಾಯಾಲ... ಅಭಿನಂದಿಸುತ್ತೇನೆ."

- ಆಶೀಶ್ ನಂದಿ, ಸಾಮಾಜಿಕ...

ಜನರು ಇಲ್ಲಿ ಮೂಲಭೂತ... ಆದ್ದರಿಂದಲೇ ಅವರಿಗೆ ಸೌಕರ್ಯವಿಲ್ಲ!

"ದೇಶದ ಎಲ್ಲಾ ಜನರಿಗೂ ಬಿಪಿಎಲ್ ... ಆಹಾರವನ್ನು ಒದಗಿಸಲು ತಮ್ಮ ಬಳಿ ಹಣವಿ... ಸರ್ಕಾರ ಹೇಳುತ್ತದೆ. ಆದರೆ ಯೋಜನಾ ಆ... ಅತ್ಯುತ್ಸಾಹದ ಯೋಜನೆಯಾದ 'ಮೂಲಭೂತ ... ಹೂಡಿಕೆ'ಗೆ ಒಂದು ಟ್ರಿಲಿಯನ್ ಡಾಲರ್ ಬೇಕು... 50 ಲಕ್ಷ ಕೋಟಿ ರೂಪಾಯಿಗಳು ಬೇಕು. ... ಅರ್ಧಪಾಲು ಅಂದರೆ 25 ಲಕ್ಷ ಕೋಟಿ ರೂಪಾಯಿ... ಸರ್ಕಾರವೇ ಹೂಡಬೇಕು. ಇದಕ್ಕೆ ಸರ್ಕಾರದ ಬಳಿ ಹ... ಆದರೆ ಇದರ ಶೇ.10ರಷ್ಟು ಭಾಗವನ್ನು ವೆಚ್ಚ ಮಾ... ದೇಶದ ಹಸಿವು ನೀಗುತ್ತದೆ. ಅದಕ್ಕೆ ಸರ್ಕಾರದ ಬಳಿ ಹ...

ಮತ್ತೊಂದು ಅಪಾಯ!

"ನನಗೆ ಬಯಸದೇ ಬಂದ ಸಚಿವ ಸ್ಥಾನ ಹೋ... ಪರವಾಗಿಲ್ಲ, ಅದರ ಬಗ್ಗೆ ಚಿಂತಿಸುವುದಿಲ್ಲ, ... ಮೊದಲಿನಂತೆ ಸಾಹಿತ್ಯ ರಚನೆಯಲ್ಲಿ ಮುಂದುವರೆ...

- ಮಮ್ತಾಜ್ ಅಲಿ...

...ಸ್ ಇನ್ ದಿ ಹೋಲ್ : ಸ್ಕೂಪ್‌ನ್ಯೂಸ್ ಹಿಂದಿನ ಅಮಾನವೀಯತೆ



ಕಂಡಹಾಗೆ

■ ಗೌರಿ ಲಂಕೇಶ್

...ಕಿಂಗ್ ನ್ಯೂಸ್', 'ಲೈವ್ ನ್ಯೂಸ್', 'ಎಕ್ಸ್‌ಕ್ಲೂಸಿವ್ ...ಂತಹ ವಿವಿಧ ಹೆಸರುಗಳಡಿ ಇವತ್ತು ಮಾಧ್ಯಮ ...ಡೆ ನಡೆಯುತ್ತಿರುವ ತೀವ್ರ ಪೈಪೋಟಿಯಲ್ಲಿ ...ಅಲ್ಲದ್ದೂ ಸುದ್ದಿಯಾಗುತ್ತದೆ, ಸುದ್ದಿಗಳು ಸೃಷ್ಟಿ ... ಸುದ್ದಿ ಆಗಬೇಕಾದ್ದು ನಿರ್ಲಕ್ಷಿಸಲ್ಪಡುತ್ತದೆ. ...ನೋ ಟಿಆರ್‌ಪಿ ರೇಟಿಂಗ್‌ಗಳಿಗಾಗಿ, ಆ ...ಜಾಹೀರಾತುಗಳು ತರುವ ಹಣಕ್ಕಾಗಿ ಇಂತಹ ...ಸುದ್ದಿ ತೊಡಗುತ್ತವೆ. ಆದರೆ ಮಾಧ್ಯಮಗಳು ... ಇಂತಹ 'ನ್ಯೂಸ್'ಗಳನ್ನು ನೋಡುವ, ಆ ...ಚಾನೆಲ್‌ಗಳ ರೇಟಿಂಗ್‌ಗಳನ್ನು ಹೆಚ್ಚಿಸುವ ಜನರ ...ಬೇಕು?

...ಮಗಳು ಉದ್ರೇಕಿಸಿ ಬಿತ್ತರಿಸುವ ಸುದ್ದಿಗಳನ್ನು ...ಇಲ್ಲದೇ ನೋಡುತ್ತಿದ್ದಾರೆಯೇ? ಅಥವಾ ಜನರಿಗೆ ...ದನ್ನೇ ಮಾಧ್ಯಮಗಳು ಬಿತ್ತರಿಸು... ಸೂಕ್ಷ್ಮತೆಯನ್ನು, ಸಾಮಾಜಿಕ ಪ್ರಜ್ಞೆಯನ್ನು ...ಡಿರುವುದು ಯಾರು? ಮಾಧ್ಯಮ ...ಥವಾ ಜನಸಮೂಹವೋ? ಒಳ್ಳೆ ಸುದ್ದಿ ...ಕೆಟ್ಟ ಸುದ್ದಿ ಮತ್ತು ಸೆನ್‌ಸೇಷನಲೈಸ್ ...ರುವ ಸುದ್ದಿಯತ್ತಲೇ ಯಾಕೆ ಜನ ...ಗುತ್ತಾರೆ? ಜನರ ಇಂತಹ ಕುತೂಹಲ ...ಷಣೆಯನ್ನು ತಣಿಸಲು ಮಾಧ್ಯಮಗಳು ...ಮಾಜಿಕ ಜವಾಬ್ದಾರಿಯನ್ನು ತೊರೆಯು... ...ಷ್ಟು ಸರಿ?

...ಷನಲ್ ಸುದ್ದಿಗಳು ಹೇಗೆ ಸಮಾಜದ ...ಮೂಹ ಸನ್ನಿಯನ್ನು ಬೀರಬಲ್ಲದೋ, ...ಅದೇ ಸಮಾಜವನ್ನು ಸಂಪೂರ್ಣವಾಗಿ ...ಸಬಹುದು ಎಂದು ತೋರುವ 'ಏಸ್ ಇನ್ ...' ಎಂಬ ಇಂಗ್ಲಿಷ್ ಚಿತ್ರವನ್ನು ಮೊನ್ನೆ ನೋಡಿದೆ. ...ತ್ರ ನಿರ್ಮಾಣಗೊಂಡು ಈಗ್ಗೆ ವರ್ಷಗಳಾಗು... ...ದರಲ್ಲಿನ ಕಥೆ ಪ್ರಸ್ತುತ ಭಾರತದ ಮಾಧ್ಯಮಗಳಿಗೂ ...ತ್ತದೆ. ಉದಾಹರಣೆಗೆ ಕಳೆದ ವಾರ ಖ್ಯಾತ ಲೇಖಕಿ ... ರಾಯ್ ಅವರ ದೆಹಲಿ ಮನೆಯ ಮೇಲೆ ... ಜನತಾ ಪಕ್ಷದ ಮಹಿಳಾ ಮೋರ್ಚಾದ ...ಸದಸ್ಯೆಯರು ದಾಳಿ ಮಾಡಿದರು. ಆ ದಾಳಿಯನ್ನು ...ತ್ರಿಕಾ ಹೇಳಿಕೆ ನೀಡಿದ ರಾಯ್ "ಈ ದಾಳಿಗೆ ...ಹಲವು ಟಿವಿ ಚಾನೆಲ್‌ಗಳ ಓಬಿ ವ್ಯಾನ್‌ಗಳು ...ನೆಯ ಮುಂದೆ ಹಾಜರಾಗಿದ್ದು ಆ ದಾಳಿಯನ್ನು ... ಬಿತ್ತರಿಸಲು ಸಜ್ಜಾಗಿದ್ದವು. ಕಳೆದ ಜೂನ್ ... ಮೋಟಾರ್ ಸೈಕಲ್‌ಗಳ ಮೇಲೆ ಬಂದಿದ್ದ ...ಮ್ಮ ಮನೆಯ ಮೇಲೆ ಕಲ್ಲು ತೂರಿದಾಗಲೂ ...ಗೆ ಟಿವಿ ಚಾನೆಲ್‌ಗಳ ಕ್ಯಾಮೆರಾಮೆನ್‌ಗಳು ...

...ಸಕ್ಕಾಗಿ ಇಂತಹ ಕ್ರಿಮಿನಲ್ ಗುಂಪುಗಳ ನಡುವೆ ...ಗಳು ಮಾಡಿಕೊಂಡಿರುವ ಒಡಂಬಡಿಕೆ ಯಾವ ... ಇಂತಹ ಗುಂಪುಗಳು ನಡೆಸುವ ದಾಳಿಗಳು ...ಕದಾಗಿರುತ್ತದೆ ಎಂಬ ಗ್ಯಾರಂಟಿ ಮಾಧ್ಯಮ ...ದೆಯೇ? ಅಥವಾ ಇಂತಹ ಗುಂಪುಗಳು ನಡೆಸುವ ... ಕೃತ್ಯಗಳಲ್ಲಿ ಮಾಧ್ಯಮಗಳೂ ಹೊಣೆಯನ್ನು ...ದೆಯೇ?

...ಯನ್ನು ಸೆನ್‌ಸೇಷನಲೈಸ್ ಮಾಡುವ ಪೈಪೋಟಿ ...ದ್ದಿಯನ್ನು ವರದಿ ಮಾಡುವ ಮತ್ತು ಸುದ್ದಿಯನ್ನು ...ಕ್ರಿಯೆಗಳ ನಡುವಿನ ವ್ಯತ್ಯಾಸವೇ ಅಳಿಸಿಹೋಗು... ...ಪಿಗಾಗಿನ ಮಾಧ್ಯಮಗಳ ನಡುವಿನ ಪೈಪೋಟಿ ...ನ್ನೇ ಬಲಿ ಕೊಡಲಾಗುತ್ತಿದೆ" ಎಂದು ಸರಿಯಾಗಿ ...ದ್ದಾರೆ.

... ಇನ್ ದಿ ಹೋಲ್' ಚಿತ್ರದಲ್ಲಿ ಆಗುವುದೂ ...ಂದು ಬಲಿ. ಈ ಚಿತ್ರದ ನಾಯಕ ಚಕ್ ... (ಕರ್ಕ್ ಡಗ್ಲಾಸ್ ಅವರಿಂದ ಅದ್ಭುತ ನಟನೆ) ...ತ್ರಕರ್ತ. ರಸ್ತೆಬದಿಯಲ್ಲಿ ಪತ್ರಿಕೆ ಮಾರುವವನಾಗಿ ...ಜೀವನವನ್ನು ಆರಂಭಿಸಿದ್ದ ಟಾಟುಮ್ ಆನಂತರ ...ದು ಪ್ರತಿಷ್ಠಿತ ಪತ್ರಿಕೆಗಳಲ್ಲಿ ವರದಿಗಾರನಾಗಿ ...ದಿದ್ದಾನೆ. ಆದರೆ ಅಧಿಕ ಪ್ರಸಂಗಿಯೂ, ಕುಡುಕನೂ ...ಭಿಚಾರಿಯೂ ಆದ ಟಾಟುಮ್ ತನ್ನ ನಡವಳಿಕೆ ...ಯೇ ಸುಮಾರು ಹನ್ನೆರಡು ಪತ್ರಿಕೆಗಳಿಂದ ಒದ್ದೋ... ...ತ್ತಾನೆ. ಕಿಸೆಯಲ್ಲಿ ಕಾಸಿಲ್ಲ, ಕೈಯಲ್ಲಿ ಕೆಲಸವಿಲ್ಲ ...ಯಲ್ಲಿ ಟಾಟುಮ್ ಅಮೆರಿಕದ ಒಂದು ಪುಟ್ಟ ... ಆಲ್ಬುಕರ್ಕ್‌ಗೆ ಆಗಮಿಸುತ್ತಾನೆ. ತನ್ನ ವಾಕ್ ...ದಿಂದ ಸ್ಥಳೀಯ ಒಂದು ಪುಟ್ಟ ಪತ್ರಿಕೆಯ ...ನ ಮೇಲೆ ಪ್ರಭಾವ ಬೀರಿ ಒಂದು ಕೆಲಸ ...ಕ್ಕುತ್ತಾನೆ.

...ಸ್ ಸ್ವಾರ್ಥಿಯೂ, ಮಹತ್ವಾಕಾಂಕ್ಷಿಯೂ ಆದ ...ನ ಗುರಿ ಇಂತಹ ಒಂದು ಪುಟ್ಟ ಊರಿನಲ್ಲೂ ...ದ್ದು ಏನಾದರೊಂದು ಘಟಿಸಿ, ಅದರ ಬಗ್ಗೆ ...ಯುವ ಮೂಲಕ ತಾನು ಮತ್ತೊಮ್ಮೆ ದೊಡ್ಡ ...ದೊಡ್ಡ ಪತ್ರಿಕೆಯಲ್ಲಿ ಸ್ಥಾನ ಗಿಟ್ಟಿಸುವುದು. ಆದರೆ

ಟಾಟುಮ್ ಆಲ್ಬುಕರ್ಕ್‌ನಲ್ಲಿ ಒಂದು ವರ್ಷ ಕಳೆದರೂ ಅಲ್ಲಿ ಯಾವೊಂದೂ ಮಹತ್ತರ ಘಟನೆ ಸಂಭವಿಸುವುದಿಲ್ಲ. ಟಾಟುಮ್ ರೋಸಿ ಹೋಗುತ್ತಾನೆ. ಆಗ ಬುಡಬುಡಿಕೆ ಹಾವುಗಳ ಪಂದ್ಯವನ್ನು ವರದಿ ಮಾಡಲು ಟಾಟುಮ್ ಮತ್ತು ಹರ್ಬಿ ಎಂಬ ಯುವ ಛಾಯಾಗ್ರಾಹಕನನ್ನು ಸಂಪಾದಕ ಬೂಟ್ ಕಳುಹಿಸುತ್ತಾನೆ.

ರಸ್ತೆ ಮಾರ್ಗದಲ್ಲಿ ``Good news in no news. Bad news in good news. ಅದನ್ನೇ ಜನ ಮುಗಿಬಿದ್ದು ಓದುವುದು" ಎಂದೆಲ್ಲ ಪತ್ರಿಕೋದ್ಯಮ ಬಗೆಗಿನ ತನ್ನ ಸಿದ್ಧಾಂತವನ್ನು ಹರ್ಬಿಗೆ ಟಾಟುಮ್ ಹೇಳಿಕೊಡುತ್ತಾನೆ. ಅವರಿಬ್ಬರು ಪೆಟ್ರೋಲ್‌ಗೆಂದು ಒಂದು ನಿರ್ಜನ ಬಂಕ್ ಕಂ ಹೋಟೆಲ್‌ನಲ್ಲಿ ನಿಲ್ಲಿಸುತ್ತಾರೆ. ಆಗ ಹತ್ತಿರದಲ್ಲೇ ಇರುವ ಗುಹೆಯಲ್ಲಿ ಆ ಪೆಟ್ರೋಲ್ ಬಂಕ್‌ನ ಮಾಲೀಕ ಲಿಯೋ



ಸಿಕ್ಕಿ ಹಾಕಿಕೊಂಡಿದ್ದಾನೆಂದು ಅವರಿಬ್ಬರಿಗೆ ಗೊತ್ತಾಗುತ್ತದೆ. ಏನಾಗಿದೆ ಎಂದರೆ ಆ ಗುಹೆಯಲ್ಲಿ ರೆಡ್ ಇಂಡಿಯನ್ನರು ತಮ್ಮ ಸಮುದಾಯದ ಶವಗಳನ್ನು ಮತ್ತು ಅವುಗಳೊಂದಿಗೆ ಹಲವಾರು ವಸ್ತುಗಳನ್ನು ಹೂತಿರುತ್ತಾರೆ. ಆ ವಸ್ತುಗಳನ್ನು ಕದ್ದು ತನ್ನ ಪೆಟ್ರೋಲ್ ಬಂಕ್‌ನಲ್ಲಿ ಲಿಯೋ ಮಾರುತ್ತಿರುತ್ತಾನೆ. ಲಿಯೋ ಸಿಕ್ಕಿ ಹಾಕಿಕೊಂಡಿರುವ ಗುಹೆಯಲ್ಲಿ ತಮ್ಮ ಪೂರ್ವಜರ ಆತ್ಮಗಳೂ ಇವೆ ಎಂದು ರೆಡ್ ಇಂಡಿಯನ್ನರು ನಂಬಿರುವುದರಿಂದ ಆತನನ್ನು ಹೊರತರಲು ಅವರು ನಿರಾಕರಿಸುತ್ತಾರೆ.

ತಾನು ಇಷ್ಟು ದಿನಗಳ ಕಾಲ ನಿರೀಕ್ಷಿಸುತ್ತಿದ್ದ ಮಹತ್ವದ ಘಟನೆ ಇದೇ ಯಾಕಾಗಿರಬಾರದು ಎಂದು ಭಾವಿಸುವ ಟಾಟುಮ್ ಗುಹೆಯನ್ನು ಪ್ರವೇಶಿಸುತ್ತಾನೆ. ಆಗ ಹರ್ಬಿ "ಒಬ್ಬ ಮಾತ್ರ ಸಿಕ್ಕಿ ಹಾಕಿಕೊಂಡಿದ್ದಾನೆ. ಹತ್ತಾರು ಜನ ಸಿಕ್ಕಿ ಹಾಕಿಕೊಂಡಿದ್ದರೆ ಅದು ದೊಡ್ಡ ಸುದ್ದಿ ಆಗುತ್ತಿತ್ತು" ಎನ್ನುತ್ತಾನೆ. ಆದರೆ ಟಾಟುಮ್ ಹರ್ಬಿಯನ್ನು ಲೇವಡಿ ಮಾಡುತ್ತಾನೆ. "ಸಹಸ್ರಾರು ಜನ ಸಿಕ್ಕಿ ಹಾಕಿಕೊಂಡಿದ್ದರೆ ಅದೊಂದು ಸಂಖ್ಯೆ ಮಾತ್ರ. ಆದರೆ ಒಬ್ಬನೇ ಒಬ್ಬ ಸಿಕ್ಕಿಹಾಕಿಕೊಂಡಿದ್ದರೆ ಅದು ಹ್ಯೂಮನ್ ಇಂಟರೆಸ್ಟ್. ಅವನ ಬಗ್ಗೆ ಎಲ್ಲಾ ವಿವರಗಳನ್ನೂ ಜನ ಬಯಸುತ್ತಾರೆ" ಎನ್ನುತ್ತಾನೆ ಟಾಟುಮ್.

ಗುಹೆಯ ಅಂತರಾಳದಲ್ಲಿ ಎರಡೂ ಕಾಲುಗಳು ಸಿಕ್ಕಿ ಹಾಕಿಕೊಂಡಿರುವ ಸ್ಥಿತಿಯಲ್ಲಿ ಲಿಯೋ ಟಾಟುಮ್‌ಗೆ ಸಿಗುತ್ತಾನೆ. ಆದಷ್ಟು ಬೇಗ ಆತನನ್ನು ಅಲ್ಲಿಂದ ರಕ್ಷಿಸುವುದಾಗಿ ಭರವಸೆ ನೀಡಿ ಹೊರಬರುವ ಹೊತ್ತಿಗೆ ಲಿಯೋನ ದುರಂತವನ್ನೇ ಉಪಯೋಗಿಸಿಕೊಂಡು ತಾನು ಹೇಗೆ ಹಣ ಮತ್ತು ಖ್ಯಾತಿಯನ್ನು ಪಡೆಯಬಹುದು ಎಂದು ಟಾಟುಮ್ ಮನಸ್ಸಿನಲ್ಲೇ ಲೆಕ್ಕ ಹಾಕುತ್ತಾನೆ. ಟಾಟುಮ್‌ನ ಈ ಯೋಜನೆ ಸಫಲಗೊಳ್ಳಬೇಕೆಂದರೆ ಲಿಯೋ ಆದಷ್ಟು ಹೆಚ್ಚುದಿನ ಆ ಗುಹೆಯಲ್ಲೇ ಬಂಧಿತನಾಗಿರಬೇಕು.

ಟಾಟುಮ್‌ನ ಈ ಯೋಜನೆಯೊಂದಿಗೆ ಸ್ಥಳೀಯ ಭ್ರಷ್ಟ ಷರೀಫ್ ಕೂಡ ಕೈಜೋಡಿಸುತ್ತಾನೆ. ಲಿಯೋನ ದುರಂತಗಾಥೆ ಹೆಚ್ಚು ದಿನ ಜಗ್ಗಿದಷ್ಟೂ ತಾನು ಹೆಚ್ಚು ಪ್ರಚಾರ ಪಡೆದು ಮುಂದಿನ ಚುನಾವಣೆಯಲ್ಲಿ ಸಲೀಸಾಗಿ ಗೆಲ್ಲಬಹುದೆಂಬ ದುರಾಲೋಚನೆ ಷರೀಫನದ್ದು. ಟಾಟುಮ್ ಮತ್ತು ಷರೀಫ್ ಜೊತೆಗೂಡಿ ಒಂದು ತಂತ್ರವನ್ನು ಉಪಯೋಗಿಸುತ್ತಾರೆ. ಅದೇನೆಂದರೆ ಗುಹೆಯ ಸುರಂಗವನ್ನು ಭದ್ರಪಡಿಸಿ ಹಲವೇ ಗಂಟೆಗಳಲ್ಲಿ ಲಿಯೋನನ್ನು ಹೊರತರಬಹುದಾದರೂ ಅದರ ಬದಲಾಗಿ ಹಲವು ದಿನಗಳ ಕಾಲ ಗುಹೆಯೊಳಗೆ ಪ್ರತ್ಯೇಕ ಕೊಳವೆಯನ್ನು ಕೊರೆದು ಆತನನ್ನು ಹೊರತರುವುದು.

ಇವರಿಬ್ಬರ ಈ ಷಡ್ಯಂತ್ರವನ್ನು ಅರಿಯದ ಲಿಯೋನ ಅಮಾಯಕ ತಂದೆ ಇವರಿಬ್ಬರು ತನ್ನ ಮಗನ ಹಿತೈಷಿಗಳೆಂದು ಭಾವಿಸುತ್ತಾನೆ. ಆದರೆ ಟಾಟುಮ್‌ನ ಸ್ವಾರ್ಥವನ್ನು ಲಿಯೋನ ಹೆಂಡತಿ ಲೊರೇನ್ ಅರ್ಥ ಮಾಡಿಕೊಳ್ಳುತ್ತಾಳೆ. ಏಕೆಂದರೆ ಆಕೆಯೂ ಆತನಷ್ಟೇ ಸ್ವಾರ್ಥಿ! ಗುಹೆಯೊಳಗೆ ತನ್ನ ಗಂಡ ಹಲವು ದಿನಗಳ ಮಟ್ಟಿಗೆ ಬಂಧಿತನಾಗಿರುತ್ತಾನೆ ಎಂದು ಅರಿತ ಕೂಡಲೇ ಆಕೆ ಮನೆಯಲ್ಲಿರುವ ಹತ್ತಾರು ಡಾಲರ್‌ಗಳನ್ನು ತೆಗೆದುಕೊಂಡು ಓಡಿಹೋಗಲು ಸಿದ್ಧಳಾಗುತ್ತಾಳೆ.

ಆದರೆ ಅಷ್ಟು ಹೊತ್ತಿಗಾಗಲೇ ಲಿಯೋ ಬಗ್ಗೆ ಟಾಟುಮ್ ದೊಡ್ಡ ವರದಿ ಮಾಡಿರುವುದರಿಂದ ಸಾಮಾನ್ಯ ಜನರು ಆ ಗುಹೆಯನ್ನು ನೋಡಲು ಬರಲಾರಂಭಿಸುತ್ತಾರೆ. ಅವರನ್ನೆಲ್ಲ ಲೊರೇನ್‌ಗೆ ತೋರಿಸಿ "ನೋಡು, ಇವರೇ ಮಿಸ್ಟರ್ ಮತ್ತು ಮಿಸೆಸ್ ಅಮೆರಿಕ. ಇವರಂತಹ ಸಾವಿರಾರು ಜನ ನಿನ್ನ ಈ ಪೆಟ್ರೋಲ್ ಬಂಕ್-ಹೋಟೆಲ್‌ಗೆ ಬರಲಿದ್ದಾರೆ. ಈಗಿರುವ ಹತ್ತಾರು ಡಾಲರ್‌ಗಳನ್ನು ತೆಗೆದುಕೊಂಡು ಏನು ಮಾಡುತ್ತೀಯಾ? ನೀನು ಇಲ್ಲೇ ಉಳಿದುಕೊಂಡರೆ ನಿನ್ನ ಗಂಡನ ದುರಂತದಿಂದ ನೀನು ಸಾವಿರಾರು ಡಾಲರ್‌ಗಳನ್ನು ಸಂಪಾದಿಸುತ್ತೀಯಾ" ಎಂದು ಟಾಟುಮ್ ಹೇಳುತ್ತಾನೆ. ಲೊರೇನ್ ಉಳಿದುಕೊಳ್ಳುತ್ತಾಳೆ.

ಟಾಟುಮ್ ಹೇಳಿದಂತೆ ಸಾವಿರಾರು ಜನ ಆಗಮಿಸಿ ಅಲ್ಲೊಂದು ದೊಡ್ಡ ಜಾತ್ರೆಯೇ ತಲೆ ಎತ್ತುತ್ತದೆ. ದಿನ ಕಳೆದಂತೆ ಜನ ವಿಶೇಷ ರೈಲುಗಳಲ್ಲೂ ಬಂದಿಳಿದು, ಗುಹೆಯ ಸುತ್ತ ಟೆಂಟ್‌ಗಳನ್ನು ಹಾಕಿಕೊಳ್ಳಲಾರಂಭಿಸುತ್ತಾರೆ. ಇದೆಲ್ಲದರಿಂದಾಗಿ ಲೊರೇನ್‌ಗೆ ಕೈ ತುಂಬಾ ಕೆಲಸ, ಜೇಬು ತುಂಬ ಹಣ. ಭ್ರಷ್ಟ ಷರೀಫನಿಗೂ ರಾಷ್ಟ್ರಾದ್ಯಂತ ಪುಕ್ಕಟೆ ಪ್ರಚಾರ. ಇನ್ನು ಗುಹೆಯೊಳಗಿನ ಲಿಯೋನೊಂದಿಗೆ ಟಾಟುಮ್ ಒಬ್ಬನಿಗೇ ನೇರಸಂಪರ್ಕ ಇರುವುದರಿಂದ ಆತನ ವರದಿಗಳಿಗೆ ಇನ್ನಿಲ್ಲದ ಬೇಡಿಕೆ ಶುರುವಾಗುತ್ತದೆ. ಅಮೆರಿಕದ ಪ್ರಮುಖ ಪತ್ರಿಕೆಯೊಂದು ಆತನಿಗೆ ಒಂದು ದಿನಕ್ಕೆ ಒಂದು ಸಾವಿರ ಡಾಲರ್ ಸಂಭಾವನೆ ನೀಡಲು ಪ್ರಾರಂಭಿಸುತ್ತದೆ. ಯಶಸ್ಸಿನ ಮದ್ಯದಲ್ಲಿ ಟಾಟುಮ್ ಮಿಂದೇಳುತ್ತಾನೆ.

ಟಾಟುಮ್‌ನಿಂದಾಗಿ ಯುವ ಛಾಯಾಗ್ರಾಹಕ ಹರ್ಬಿ ಕೂಡ ತನ್ನ ಎಲ್ಲ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ಯಶಸ್ಸಿನ ಕನಸು ಕಾಣಲಾರಂಭಿಸುತ್ತಾನೆ. ಇದೆಲ್ಲದರ ಮಧ್ಯೆ ಲೋರೇನ್ ಮತ್ತು ಟಾಟುಮ್ ನಡುವೆ ಅಕ್ರಮ ಸಂಬಂಧವೂ ಏರ್ಪಡುತ್ತದೆ.

ಹೀಗೆ ಗುಹೆಯೊಳಗಿರುವ ಲಿಯೋನ ಯಾತನೆ ಹೆಚ್ಚಾದಷ್ಟೂ ಹೊರಗಿರುವವರ ಅನೈತಿಕತೆ, ಭ್ರಷ್ಟಾಚಾರ, ಲಾಭಲೋಭಗಳು ಹೆಚ್ಚಾಗುತ್ತಾ ಹೋಗುತ್ತವೆ.

ಬಂಧಿತನಾಗಿರುವ ಲಿಯೋನ ಆರೋಗ್ಯ ಹದಗೆಡುತ್ತದೆ. ಆತ ಸತ್ತರೆ ತನಗೆ ಸಿಕ್ಕಿರುವ ಯಶಸ್ಸೂ ಸತ್ತಂತೆ ಎಂದು ಅರಿಯುವ ಟಾಟುಮ್ ಗುಹೆಯೊಳಗೆ ಹೊಸ ಕೊಳವೆಯನ್ನು ಕೊರೆಯುವ ಬದಲಾಗಿ ಮೊದಲೇ ಸೂಚಿಸಲಾಗಿದ್ದ ಸುಲಭ





ಮಾರ್ಗವನ್ನು ಅನುಸರಿಸಿ ಆತನನ್ನು ಹೊರತರಬೇಕೆಂದು ಷರೀಫ್‌ಗೆ ಸೂಚಿಸುತ್ತಾನೆ. ಆದರೆ ಕೊಳವೆಯನ್ನು ಕೊರೆಯುತ್ತಿರುವುದರಿಂದ ಗುಹೆಯೊಳಗಿನ ಕಲ್ಲುಬಂಡೆಗಳಲ್ಲಿ ಸಡಿಲಗೊಂಡಿದ್ದು ಸುರಂಗವನ್ನು ಭದ್ರಪಡಿಸಿ ಲಿಯೋನನ್ನು ರಕ್ಷಿಸುವುದು ಅಸಾಧ್ಯ ಎಂದು ಗೊತ್ತಾಗುತ್ತದೆ. ಆಗ ತನ್ನ ಲಾಭಕ್ಕಾಗಿ, ಯಶಸ್ಸಿಗಾಗಿ ಒಬ್ಬ ವ್ಯಕ್ತಿಯನ್ನೇ ತಾನು ಬಲಿಕೊಡುತ್ತಿರುವುದು ಟಾಟುಮ್‌ಗೆ ಗೊತ್ತಾಗುತ್ತದೆ. ಈ ಬೇಗುದಿಯಲ್ಲೇ ಟಾಟುಮ್ ಮತ್ತು ಲೊರೇನ್ ನಡುವೆ ಜಗಳ ನಡೆದು ಆಕೆ ಆತನ ಹೊಟ್ಟೆಗೆ ಕತ್ತರಿಯಿಂದ ಇರಿಯುತ್ತಾಳೆ.

ಟಾಟುಮ್‌ಗೆ ಈಗ ತನ್ನ ಪಾಪಕೃತ್ಯದಿಂದ ಮುಕ್ತಿ ಬೇಕಾಗಿದೆ. ಆದ್ದರಿಂದ ತಾನು ಚಿಕಿತ್ಸೆ ಪಡೆಯುವ ಬದಲು ಪಾದ್ರಿಯೊಬ್ಬನನ್ನು ಗುಹೆಯೊಳಗೆ ಕರೆದುಕೊಂಡು ಹೋಗಿ ಅಲ್ಲಿಯೇ ಲಿಯೋನ ಅಂತ್ಯಸಂಸ್ಕಾರಗಳನ್ನು ಮುಗಿಸುತ್ತಾನೆ. ಅಹಾದ ನಂತರ ಹೊರಗೆ ಬಂದು ಸುತ್ತಲೂ ನೆರೆದಿರುವ ಜನಸ್ತೋಮ, ಅವರು ಸಂತೋಷದಿಂದ ಭಾಗಿಯಾಗಿರುವ ಜಾತ್ರೆಯನ್ನು ನೋಡಿ ಅಸಹ್ಯ ಪಟ್ಟುಕೊಳ್ಳುತ್ತಾನೆ. ಗುಹೆಯನ್ನು ಏರಿ ಕೊಳವೆ ಕೊರೆಯುತ್ತಿರುವ ಯಂತ್ರಗಳನ್ನು ನಿಲ್ಲಿಸುತ್ತಾನೆ. ಜನರತ್ತ ತಿರುಗಿ "ನಿಮ್ಮ ಗದ್ದಲ ನಿಲ್ಲಿಸಿ. ನನ್ನ ಮಾತು ಕೇಳಿ. ಲಿಯೋ ತೀರಿಕೊಂಡ. ಈಗ ನೀವೆಲ್ಲ ಹೊರಟು ಹೋಗಿ. ಸರ್ಕಸ್ ಮುಗಿಯಿತು" ಎಂದು ಚೀರುತ್ತಾನೆ.

ಲಿಯೋನ ಸಾವಿನ ಸುದ್ದಿ ಕೇಳುತ್ತಿದ್ದಂತೆ ಇತರೆ ಪತ್ರಕರ್ತರೆಲ್ಲ ತಮ್ಮ ವರದಿಯನ್ನು ಕಳುಹಿಸಲು ಧಾವಿಸುತ್ತಾರೆ. ಜನಸ್ತೋಮವೂ ಕೆಲ ಕ್ಷಣಗಳಲ್ಲೇ ಕರಗಿಹೋಗುತ್ತದೆ. ಲಿಯೋನ ಹೆಂಡತಿ ಹಣವನ್ನೆಲ್ಲ ತೆಗೆದುಕೊಂಡು ಓಡಿ ಹೋಗುತ್ತಾಳೆ.

ಇದೆಲ್ಲದರ ಮಧ್ಯೆ ಟಾಟುಮ್ ಲಿಯೋನ ಸಾವಿನ ಸುದ್ದಿಯನ್ನು ಸ್ಕೂಪ್ ಮಾಡದೆ ಎಲ್ಲರಿಗೂ ಘೋಷಿಸಿದ್ದರಿಂದ ಪ್ರತಿಷ್ಠಿತ ಪತ್ರಿಕೆಯ ಸಂಪಾದಕನಿಗೆ ಟಾಟುಮ್ ಮೇಲೆ ಕೋಪ ಬಂದು ಆತನನ್ನು ವಜಾಗೊಳಿಸುತ್ತಾನೆ. ಆಗ ಟಾಟುಮ್ "ಲಿಯೋ ಸಾಯಲಿಲ್ಲ, ಬದಲಾಗಿ ವರದಿಗಾರನೊಬ್ಬ ಆತನನ್ನು ಕೊಂದು ಹಾಕಿದ. ಅದು ನಿಜವಾದ ಸುದ್ದಿ. ಅದನ್ನು ಬರೆದು ಕಳುಹಿಸುತ್ತೇನೆ" ಎಂದು ಎಷ್ಟೇ ಹೇಳಿದರೂ ಸಂಪಾದಕ ಕೇಳುವುದಿಲ್ಲ. ಏಕೆಂದರೆ ನಿಜವಾದ ಸುದ್ದಿ ಆತನಿಗೂ ಬೇಕಿಲ್ಲ!


ಈಗ ಟಾಟುಮ್‌ನ ಹೊಟ್ಟೆಯಿಂದ ರಕ್ತ ಹರಿಯುತ್ತಿದೆ. ಆದರೂ ಅದನ್ನು ಅಲಕ್ಷಿಸಿದ ಹರ್ಬಿ ಜೊತೆ ಮತ್ತು ಆಲ್ಬುಕರ್ಕ್‌ನಲ್ಲಿನ ಪುಟ್ಟ ಪತ್ರಿಕೆಯ ಕಚೇರಿಗೆ ವಾಪಸ್ ಬರುತ್ತಾನೆ. ಅಲ್ಲಿ ಸಂಪಾದಕ ಬೂಟ್‌ಗೆ "ನಾನು ದಿನಕ್ಕೆ ಒಂದು ಸಾವಿರ ಡಾಲರ್ ಸಂಭಾವನೆ ಪಡೆಯುತ್ತಿದ್ದ ಪತ್ರಕರ್ತ. ಈಗ ನಿಮಗೆ ಪುಕ್ಕಟೆಯಾಗಿ ದುಡಿಯಲು ಬಂದಿದ್ದೇನೆ" ಎಂದು ಹೇಳುತ್ತಲೇ ನೆಲಕ್ಕುರುಳಿ ಸಾಯುತ್ತಾನೆ.

'ಏಸ್ ಇನ್ ದಿ ಹೋಲ್' ಚಿತ್ರವನ್ನು ನಿರ್ದೇಶಿಸಿದ್ದು ಖ್ಯಾತ ನಿರ್ದೇಶಕ ಬಿಲ್ಲಿ ವೈಲ್ಡರ್. ಈ ಚಿತ್ರದಲ್ಲಿ ವೈಲ್ಡರ್ ಅಮೆರಿಕದ ಮಾಧ್ಯಮಗಳನ್ನು ಮತ್ತು ಅಮೆರಿಕದ ಸಾಮಾನ್ಯ ಪ್ರಜೆಗಳನ್ನು ಸೂಕ್ಷ್ಮಪ್ರಜ್ಞೆ ಇಲ್ಲದ ವ್ಯಕ್ತಿಗಳಂತೆ ತೋರಿಸಿದ್ದರಿಂದ ಅಂದು ಈ ಚಿತ್ರ ಬಾಕ್ಸಾಫೀಸಿನಲ್ಲಿ ಸೋತಿತ್ತು. ಮಾಧ್ಯಮಗಳಂತೂ ವೈಲ್ಡರ್‌ನ ವಿರುದ್ಧ ಕೆಂಡಕಾರಿದ್ದವು. ಆದರೆ ವೈಲ್ಡರ್ ಮಾತ್ರ "ನಾನು ವಾಸ್ತವವಾದದ್ದನ್ನೇ ನನ್ನ ಚಿತ್ರದಲ್ಲಿ ತೋರಿಸಿದ್ದೇನೆ. ಇಡೀ ಅಮೆರಿಕಕ್ಕೆ ಕನ್ನಡಿ ಹಿಡಿದಿದ್ದೇನೆ" ಎಂದು ವಾದಿಸಿದ್ದರು. ಅವರ ವಾದ ಪ್ರಸ್ತುತ ಭಾರತದ ಮಾಧ್ಯಮಗಳಿಗೂ ಅನ್ವಯಿಸುತ್ತದೆ. ಹಿಂದೆಲ್ಲ ಪತ್ರಿಕೆಗಳ ಫೋಟೋಗ್ರಾಫರ್‌ಗಳು ಹಾಜರಾದ ನಂತರವೇ ವಾಟಾಳ್ ನಾಗರಾಜರಂತಹ ಹೋರಾಟಗಾರರು ತಮ್ಮ ಧಿಕ್ಕಾರವನ್ನು ಕೂಗಿ ಪ್ರಚಾರ ಪಡೆಯುತ್ತಿದ್ದರು. ಅದನ್ನೇ ಆಗ ಹಲವಾರು ಜನ ಲೇವಡಿ ಮಾಡುತ್ತಿದ್ದರು. ಆದರೆ ಈಗ? ಮಹಿಳೆಯರ ಮೇಲೆ, ಲೇಖಕರ ಮೇಲೆ, ಕಲಾ ಪ್ರದರ್ಶನಗಳ ಮೇಲೆ, ಸಂಸ್ಥೆಗಳ ಮೇಲೆ ರೌಡಿ ಗುಂಪುಗಳು ಅಮಾನುಷ ದಾಳಿಗಳನ್ನು ನಡೆಸಲಿದ್ದಾರೆ ಎಂದು ಗೊತ್ತಿದ್ದರೂ ಮಾಧ್ಯಮಗಳು 'ಎಕ್ಸ್‌ಕ್ಲೂಸಿವ್' ದೃಶ್ಯಗಳನ್ನು ಸೆರೆಹಿಡಿಯಲು ಪೈಪೋಟಿ ನಡೆಸುತ್ತಿವೆ. ಇನ್ನಷ್ಟು ಗಲಾಟೆ ನಡೆಯಲಿ ಎಂದು ವರದಿಗಾರರು ಗುಂಪುಗಳನ್ನು ಪ್ರಚೋದಿಸುತ್ತಾರೆ. ಭಾರತದಲ್ಲಿ ಈಗಾಗಲೇ ಹಲವು ಕಡೆ ನಡೆದಿರುವಂತೆ ಕೆಲ ವರದಿಗಾರರು ಮತ್ತು ಮಾಧ್ಯಮಗಳು ಅಮಾಯಕ ಜನರನ್ನೇ ಸಾವಿಗೆ ದೂಡುತ್ತಿದ್ದಾರೆ. ಅಂಥವರೆಲ್ಲ ಟಾಟುಮ್‌ನ ನಿಜ ಸ್ವರೂಪಗಳಲ್ಲವೇ?

ಪ್ರಜಾತಂತ್ರದಲ್ಲಿ ಬಹುಮುಖ್ಯ ಅಂಗವಾಗಿರುವ ಮಾಧ್ಯಮವೇ ಇವತ್ತು ವಿವಿಧ 'ಸರ್ಕಸ್'ಗಳ ತಾಣವಾದರೆ ದೇಶದ ಉದ್ಧಾರ ಎಂತು? ●

ಅರಣ್ಯಾಧಿಕಾರಿ ಎತ್ತಂಗಡಿ ಪಾಲಿಟಿಕ್ಸ್

ತೊಲಗಿದ ಪಾಲಿಕೆ ಪೀಡೆಗೆ ಅಶೋಕ್ ಕುಮ್ಮಕ್ಕು?




'ತೊಲಗಿದೆಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ' ಎಂಬಂತೆ ಪಾಲಿಕೆಯ ಅರಣ್ಯ ಸಂರಕ್ಷಣಾಧಿಕಾರಿ ಶಾಂತಕುಮಾರ್ ಮತ್ತೆ ವಕ್ಕರಿಸಿದ್ದಾನೆ!

ಕಳೆದ ಸಂಚಿಕೆಯಲ್ಲಿ 'ಮೇಯರ್ ತಲೆಗೇ ಟೊಪ್ಪಿ ಇಟ್ಟ ಅರಣ್ಯಾಧಿಕಾರಿ' ವರದಿಯಲ್ಲಿ ಹೇಗೆ ಬೆಂಗಳೂರಿನ ಹಸಿರೀಕರಣದ ಹೆಸರಲ್ಲಿ ಕೋಟಿಗಟ್ಟಲೇ ಲೂಟಿಗೆ ಅರಣ್ಯ ಸಂರಕ್ಷಣಾಧಿಕಾರಿ ಶಾಂತಕುಮಾರ್ ಏನೆಲ್ಲಾ ಕೈಚಳಕ ಮಾಡುತ್ತಿದ್ದಾನೆ ಎಂಬುದನ್ನು ಪತ್ರಿಕೆ ಬಯಲಿಗೆಳೆದಿತ್ತು. ಕೊಟ್ಟ ಸಾಕ್ಷ್ಯಾಧಾರಗಳನ್ನು ಆಧರಿಸಿಯೇ ಮೇಯರ್ ಎಸ್.ಕೆ. ನಟರಾಜ್ ತಲೆ ಕೆಡಿಸಿಕೊಂಡು ಶಾಂತಕುಮಾರ್‌ನನ್ನು ಬಲಿಹಾಕಿದ್ದರು.

ಇಂಥಾ ಖದೀಮನ ಸೇವೆ ಪಾಲಿಕೆಗೆ ಅಗತ್ಯವಿಲ್ಲವಾದ್ದರಿಂದ ಆತನನ್ನು ಮಾತೃ ಇಲಾಖೆಗೇ ಒದ್ದೋಡಿಸುವಂತೆ ಮೇಯರ್ ಆದೇಶವೂ ಹೊರಬಿತ್ತು. ಬೆನ್ನಲ್ಲೇ ಶಾಂತಕುಮಾರ್‌ನನ್ನು ಬಿಬಿಎಂಪಿಯಿಂದ ಬಿಡುಗಡೆ ಮಾಡಿದ್ದೂ ಆಯ್ತು. ಆದರೆ ಭಂಡ ಶಾಂತಕುಮಾರ್ ಬಿಡಬೇಕಲ್ಲ-ಹೋಗಿದ್ದೇ ಮಂತ್ರಿ ಆರ್. ಅಶೋಕ್ ಕಾಲಿಗೆ ಬಿದ್ದ. ತಾನು ಬೆಂಗಳೂರು ನಿರ್ಮಾತೃ ಕೆಂಪೇಗೌಡರ ವಂಶಸ್ಥನೆಂದೂ ದಲಿತರೆಲ್ಲ ಸೇರಿ ತನ್ನ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆಂದೂ ಅಶೋಕ್ ಕಿವಿ ಕಚ್ಚಿದ.

ತನ್ನ ಜಾತಿಬಾಂಧವನೆಂಬುದು ಗೊತ್ತಾಗಿದ್ದೇ ಅಶೋಕ್ ಪಾಲಿಕೆ ಕಮೀಷನರ್ ಸಿದ್ಧಯ್ಯನವರಿಗೆ ಫೋನೆತ್ತಿಕೊಂಡಿದ್ದೇ 'ಏನ್ರೀ, ಆತ ಒಕ್ಕಲಿಗನಾಗಿ ಹುಟ್ಟಿದ್ದೇ ತಪ್ಪೇನ್ರಿ?' ಎಂದು ಝಾಡಿಸಿದ್ದಾರೆ. ಇಷ್ಟಾಗಿದ್ದೇ ತಡ ಗಂಟುಮೂಟೆ ಕಟ್ಟಿದ್ದ ಶಾಂತಕುಮಾರ್ ನವೆಂಬರ್ 2 ರ ಅಪರಾಹ್ನ ಏಕಾಏಕಿ ತನ್ನ ಪಾಲಿಕೆಯ ಛೇಂಬರಿಗೆ ನುಗ್ಗಿದ್ದಾನೆ. ಏನೇನೋ ಫೈಲುಗಳನ್ನು ತರಿಸಿಕೊಂಡು ಸಹಿ ಹಾಕುವುದು, ಬಿಲ್ಲು ಹಾಕುವುದು ಮಾಡಿದ್ದಾನೆ. ಇದು ರಾತ್ರಿ 10 ರ ತನಕ ಮುಂದುವರಿದಿದೆ. ಅದೇನು ಕಾರಸ್ಥಾನ ಮಾಡಿದನೋ ಗೊತ್ತಿಲ್ಲ, ಒಂದಷ್ಟು ಫೈಲು ಬಿಲ್ಲುಗಳನ್ನು ತನ್ನ ಕಾರಿಗೆ ತುಂಬಿಸಿಕೊಂಡಿದ್ದೇ ರಾತ್ರಿ ಕತ್ತಲಲ್ಲಿ ಪರಾರಿಯಾಗಿದ್ದಾನೆ.






ಶಾಂತಕುಮಾರ್‌ನ ಇಂಥದೊಂದು ಕಳ್ಳಾಟದ ಅಸಲೀ ಮರೆಮ್ಮತ್ತೇ ಬೇರೆಯಿತ್ತು. ಅದು 50 ಲಕ್ಷದ ಮತ್ತೊಂದು ದರೋಡೆ. ಬೆಂಗಳೂರಿನ ರಸ್ತೆಗುಂಟ ಸಸಿಗಳನ್ನು ನೆಟ್ಟು ಅದಕ್ಕೆ ಟ್ರೀಗಾರ್ಡ್ ಅಂದರೆ ವೃಕ್ಷ ಕವಚಗಳನ್ನು ಅಳವಡಿಸಬೇಕಲ್ಲ-ಈ ಥರದ ಕಬ್ಬಿಣದ ಟ್ರೀಗಾರ್ಡ್ ಒಂದಕ್ಕೆ ಹೆಚ್ಚೆಂದರೆ ಸಾವಿರದ ನೂರೈವತ್ತು ರೂಪಾಯಿ ಬೆಲೆಯಿದೆ. ಕಳೆದ ವರ್ಷ ಇದೇ ರೇಟು ಕೊಟ್ಟು ಪಾಲಿಕೆ ಸಾವಿರಾರು ಟ್ರೀಗಾರ್ಡುಗಳನ್ನು ಖರೀದಿಸಿತ್ತು.

ಆದರೆ ದುಡ್ಡು ದೋಚಲು ಈ ರೇಟನ್ನೇ ಹಾಕಿದರೆ ಪ್ರಯೋಜನವಿಲ್ಲ. ಅದಕ್ಕೆ ಮತ್ತೆ ಬೋಗಸ್ ಟೆಂಡರ್ ಕೈಚಳಕ ಮೆರೆದ ಶಾಂತಕುಮಾರ್ ತನ್ನ ಬೇನಾಮಿಗಳ ಮೂಲಕ ಟ್ರೀಗಾರ್ಡ್ ಒಂದಕ್ಕೆ 2350 ರೂಪಾಯಿಯಂತೆ ಅರ್ಜಿ ಹಾಕಿದ. ಕಮಿಷನರ್ ಅನುಮೋದನೆಯೇ ಇಲ್ಲದೆ, ಪಾರದರ್ಶಕ ಟೆಂಡರನ್ನೂ ನಡೆಸದೆ; ತಾನೇ ಸರ್ವಾಧಿಕಾರಿಯಂತೆ ಒಂದಕ್ಕೆ ದುಪ್ಪಟ್ಟು ರೇಟಿನ ಟ್ರೀಗಾರ್ಡ್‌ಗಳನ್ನು ಖರೀದಿಸಲು ಆದೇಶ ಕೊಟ್ಟು ಒಂದು ಕೋಟಿ ಮೊತ್ತದ ಬಿಲ್ಲನ್ನೂ ಜಡಿದುಬಿಟ್ಟ.

ಈ ಪ್ರಕಾರವೇ ಆಗಿದ್ದರೆ ಕಮ್ಮಿಯೆಂದರೂ 50 ಲಕ್ಷದ ಪಾಲಿಕೆ ರೊಕ್ಕ ಆತನ ಜೇಬು ಸೇರಬೇಕಿತ್ತು. ಇದಕ್ಕೊಂದು ಪಾಲಿಕೆ ದಕ್ಷಿಣ ವಲಯದ ಡಿಎಫ್‌ಓ ಪುಟ್ಟಸ್ವಾಮಿ ಎಂಬ ತನ್ನ ಛೇಲಾನನ್ನೇ ಶಾಂತಕುಮಾರ್ ಛೂಬಿಟ್ಟಿದ್ದ. ಯಾವತ್ತು ಸಸಿ ಖರೀದಿ, ಬಿದ್ದ ಮರಗಳ ಸಾಗುವಳಿ, ಬೋಗಸ್ ಟೆಂಡರ್, ಕಳ್ಳಬಿಲ್ಲುಗಳ ಕರ್ಮಕಾಂಡವೆಲ್ಲ ಪತ್ರಿಕೆಯಲ್ಲಿ ಬಯಲಾಗಿ ಒದ್ದೋಡಿಸುವಂತೆ ಮೇಯರ್ ಆದೇಶ ಕೊಟ್ಟರೋ ಶಾಂತಕುಮಾರ್ ಹುಷಾರಾಗಿದ್ದಾನೆ.

ಪಾಲಿಕೆ ಹುದ್ದೆಯಿಂದ ಉಚ್ಚಾಟನೆಗೊಂಡ ನಂತರವೂ ಅನಧೀಕೃತವಾಗಿ ತನ್ನ ಛೇಂಬರಿಗೆ ನುಗ್ಗಿ ಟ್ರೀಗಾರ್ಡ್ ಖರೀದಿಯ ಫೈಲುಗಳನ್ನು ಹೊತ್ತೊಯ್ದಿದ್ದಾನೆ. ಇದಕ್ಕೆ ಪಾಲಿಕೆ ಲೆಕ್ಕಾಧಿಕಾರಿ ಅಶೋಕ್ ಕೂಡ ಕೈಜೋಡಿಸಿದ್ದಾನೆ. ಹಾಕಿದ್ದ ಕಳ್ಳಬಿಲ್ಲುಗಳನ್ನು ಮತ್ತೆ ಶಾಂತಕುಮಾರ್ ಕೈಗೊಪ್ಪಿಸಿದ್ದರಿಂದಲೇ ಅದನ್ನು ಕದ್ದು ಸಾಗಿಸುವುದು ಆತನಿಗೆ ಸಾಧ್ಯವಾಗಿದೆ. ಆದರೆ ಪಾಲಿಕೆಯ ಉತ್ತರ ವಲಯದ ಡಿಎಫ್‌ಓ ವ್ಯಾಪ್ತಿಯಲ್ಲಿ ಇದೇ ಟ್ರೀಗಾರ್ಡ್ ಒಂದಕ್ಕೆ 1150 ರೂಪಾಯಿಯಂತೆ ಇವತ್ತಿಗೂ ಖರೀದಿಸುತ್ತಿರುವಾಗ ಶಾಂತಕುಮಾರ್ ಇದರ ದುಪ್ಪಟ್ಟು ರೇಟಿಗೆ ಹೇಗೆ ಆಪಾಟ ಕಳ್ಳಬಿಲ್ಲು ಜಡಿದಿದ್ದ?

ಇದು ಶಾಂತಕುಮಾರ್‌ನ ಖದೀಮ ಬುದ್ಧಿಗೆ ಒಂದು ಸ್ಯಾಂಪಲ್ಲಷ್ಟೆ. ಇಷ್ಟಾಗ್ಯೂ ಮೇಯರ್ ಆದೇಶವನ್ನು ಧಿಕ್ಕರಿಸಿ ಮಂತ್ರಿ ಅಶೋಕ್ ಮೂಲಕ ಮತ್ತೆ ಪಾಲಿಕೆಗೆ



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

27-10-2010


ಮೇಯರ್ ಹೊರಡಿಸಿದ ಆದೇ

ವಕ್ಕರಿಸಿ ಕಾರ್ಯಾಚರಣೆಗಿಳಿದ ಶಾಂತಕುಮಾ
ತನ್ನ ಜಾತಿಯನ್ನೇ ಆಯುಧವಾಗಿ ಬಳಸುತ್ತಿದ್ದಾ
ಮಂತ್ರಿ ಅಶೋಕ್ ಜಾತಿಬುದ್ಧಿಗೆ ಇಂಥ ಖದಿ
ಬೇಕೆ? ಹಾಗೊಮ್ಮೆ ನಿಜಕ್ಕೂ ಈತ ಕೆಂಪೇಗೌ
ವಂಶಸ್ಥನೇ ಆಗಿದ್ದರೆ ಬೆಂಗಳೂರಿನ ಹಸಿರೀಕರ
ಹೆಸರಲ್ಲಿ ಏಕೆ ವಸೂಲಿಗಿಳಿಯುತ್ತಿದ್ದ? ಹೇಗೆ
ಬೆಂಗಳೂರು ಸುತ್ತಮುತ್ತಲ ಅರಣ್ಯ ಪ್ರದೇಶಗ
ಕ್ವಾರಿಗಳಿಗೆ ಪರವಾನಗಿ ಕೊಟ್ಟ? ದೇವನಹಳ್ಳಿ
ಏರ್‌ಪೋರ್ಟ್ ಹೆಸರಲ್ಲಿ ಸಾವಿರಾರು ಎಕರೆ
ಭೂಮಿಯನ್ನು ಲಪಟಾಯಿಸಿದ ದುಡ್ಡನ್ನೂ ಎ
ಹಾಕಿದ?

ಬೆಂಗಳೂರಿಗೇ ಕೊಳ್ಳಿಯಿಟ್ಟು ಈಗ
ಒಕ್ಕಲಿಗನೆಂದರೆ ಅದನ್ನು ನಂಬಿ ಮತ್ತೆ ಈತನನ್ನು
ಗುದುಮಲು ಹೊರಟ ಅಶೋಕ್‌ಗೆ ಒಕ್ಕಲಿಗರಲ್ಲ
ಅಧಿಕಾರಿಗಳು ಸಿಗುವುದಿಲ್ಲವೆ? ಇಷ್ಟೆಲ್ಲ ಲೂಟಿ
ನಂತರವೂ ಆ ಬಗ್ಗೆ ಸಣ್ಣದೊಂದು ತನಿ
ನಡೆಸುತ್ತಿಲ್ಲವೆಂದರೆ, ಮತ್ತೆ ಈತನನ್ನೇ
ಬೆಂಬಲಿಸುತ್ತಾರೆಂದರೆ; ಶಾಂತಕುಮಾರ್‌ನ ದರೋ
ಅಶೋಕ್‌ರ ಪಾಲಾದರೂ ಎಷ್ಟು?

ಇದೆಂಥ ಮನೆಹಾಳು ಜಾತಿಬುದ್ಧಿ? ಈ
ಅಶೋಕ್‌ಗೆ ಜ್ಞಾನೋದಯವಾಗಲಿ.
ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಅವರ ಯಾವ
ಅರ್ಥ ಉಳಿಯುವುದಿಲ್ಲ.

ಭ್ರಷ್ಟಾಚಾರವೇ 'ಆದರ್ಶ'ವಾಗುತ್ತಿರುವ ದೇಶದಲ್ಲಿ...



ಕಾರ್ಗಿಲ್ ಯುದ್ಧದಲ್ಲಿ ಮೃತರಾದ ಯೋಧರನ್ನು ಸಾಗಿಸಲೆಂದು ಖರೀದಿಸಿದ ಶವಪೆಟ್ಟಿಗೆಗಳಲ್ಲಿ ಸೆಗಣಿ ತಿಂದ 'ಆ' ಸರ್ಕಾರ....

ಕಾರ್ಗಿಲ್ ಹುತಾತ್ಮರ ವಿಧವೆ ಪತ್ನಿಯರು ಮತ್ತು ಸಂಬಂಧಿಕರಿಗೆಂದು ನಿರ್ಮಿಸಿದ ವಸತಿಗೃಹಗಳನ್ನು ತಮ್ಮವರಿಗೆ ಕೊಟ್ಟು ಕೆಸರು ಮೆತ್ತಿಕೊಂಡ ಇನ್ನೊಂದು ಸರ್ಕಾರ...

ಅವತ್ತು 'ದೇಶಭಕ್ತ' ಬಿಜೆಪಿ. ಇವತ್ತು 'ರಾಷ್ಟ್ರ ನಿರ್ಮಾತೃ' ಕಾಂಗ್ರೆಸ್. ಮಧ್ಯದಲ್ಲಿ ಬರುವ ಬಿಎಸ್‌ಪಿ, ಎಸ್‌ಪಿ, ಟಿಡಿಪಿ, ಜೆಡಿಎಸ್... etc..etcಗಳೂ ಸಿಕ್ಕಷ್ಟು ಬಾಚಿಕೊಂಡ ಪಕ್ಷಗಳೇ. ಒಟ್ಟಿನಲ್ಲಿ ಭ್ರಷ್ಟಾಚಾರವೇ 'ಆದರ್ಶ'ವಾಗುತ್ತಿರುವ ದೇಶದಲ್ಲೀಗ ಮೊನ್ನೆಯೊಂದು 'ಆದರ್ಶ' ಹಗರಣ ಬಯಲಿಗೆ ಬಿದ್ದಿದೆ. ಮುಂದೆ ಏನಾಗುತ್ತದೆ? ಒಬ್ಬ ಮುಖ್ಯಮಂತ್ರಿಯ ತಲೆದಂಡ, ಒಂದಿಷ್ಟು ಅಧಿಕಾರಿಗಳ ಸಸ್ಪೆನ್ಸನ್ ಇತ್ಯಾದಿ ನಾಟಕಗಳು ನಡೆಯುತ್ತವೆ. ವಿರೋಧ ಪಕ್ಷಗಳು ಚುನಾವಣೆ ಲಾಭಕ್ಕಾಗಿ ಬೀದಿ ರಂಪ ಮಾಡುತ್ತವೆ. ಈ ಹೊತ್ತಲ್ಲೇ ಮತ್ತೊಂದಿಷ್ಟು ಹಗರಣಗಳು ಸದ್ದಿಲ್ಲದೆ ಜರುಗಿ ಹೋಗಿರುತ್ತವೆ.

ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ಕಾರ್ಗಿಲ್ ಹುತಾತ್ಮರಿಗೆಂದು ನಿರ್ಮಿಸಿರುವ ಬಹುಕೋಟಿ ವಸತಿಗೃಹ ಸಂಕೀರ್ಣದಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ಧುರೀಣರ ಸಂಬಂಧಿಕರು ಫ್ಲಾಟ್ ಗಿಟ್ಟಿಸಿದ್ದಾರೆ. ಸ್ವತಃ ಮಹಾರಾಷ್ಟ್ರದ ಮುಖ್ಯಮಂತ್ರಿ ಅಶೋಕ್ ಚವ್ಹಾಣ ಸಂಬಂಧಿಕರಿಗೇ ಮೂರು ಫ್ಲಾಟ್‌ಗಳನ್ನು ಮಂಜೂರು ಮಾಡಲಾಗಿದೆ.

ಇದೆಲ್ಲಕ್ಕೂ ಮುಖ್ಯವೆಂದರೆ, ದೇಶ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಭಾರತೀಯ ಸೈನ್ಯದ ಕೆಲ ಅಧಿಕಾರಿಗಳೂ ಈ ಹಗರಣದಲ್ಲಿ ಪಾಲುದಾರರು! ಪಾಪ ದೇಶವನ್ನು ನೆನೆದಾಗ ರಾಷ್ಟ್ರಧ್ವಜ, ಭಾರತಮಾತೆಗಳ ಜೊತೆ ನಮ್ಮ ಸೈನ್ಯವನ್ನು ಕಣ್ಮುಂದೆ ತಂದುಕೊಳ್ಳುವ ಮುಗ್ಧ ಜನತೆಗೆ ವ್ಯವಸ್ಥೆಯ ಬೆನ್ನೆಲುಬುಗಳೇ ಚೂರಿ ಹಾಕಿವೆ.

ಮಹಾರಾಷ್ಟ್ರದ ಈಗಿನ ಮುಖ್ಯಮಂತ್ರಿಯಲ್ಲದೇ, ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳೂ ಇದರಲ್ಲಿ ಪಾಲುದಾರರಾಗಿದ್ದಾರೆ. ಕಟ್ಟಡ ನಿರ್ಮಾಣದ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಎದ್ದು ನಿಂತ ಬಹುಮಹಡಿಯ ಗಗನಚುಂಬಿ ಆದರ್ಶ ವಸತಿಗೃಹ ಭಾರತದಲ್ಲಿ ನಡೆಯುತ್ತಿರುವ 'ಅಭಿವೃದ್ಧಿ' ಹೆಸರಿನ ಲೂಟಿಗಳಿಗೆ ಸಂಕೇತವಾಗಿ ತಲೆಎತ್ತಿ ನಿಂತಿದೆ.

2003ರಲ್ಲೇ ಈ ಹಗರಣದ ಸುಳಿವುಗಳು ದೊರೆಯಲಾರಂಭಿಸಿದ್ದರೂ, ಯಾವ ಪಾರ್ಟಿಯೂ ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಲೇ ಇಲ್ಲ. ಏಕೆಂದರೆ ಎಲ್ಲೆಲ್ಲಿ ಏನೇನೋ ತಿನ್ನಿಸಬೇಕೋ ಅದನ್ನು ಸರಿಯಾಗಿಯೇ ತಿನ್ನಿಸಿಕೊಂಡು ಬಂದಿದರು. ಆದರ್ಶ ಹೌಸಿಂಗ್ ಸೊಸೈಟಿಯ ಕಿರಾತಕರು. 2009ರಲ್ಲೇ ಕೇಂದ್ರ ಪರಿಸರ ಇಲಾಖೆ ಆದರ್ಶ ಸೊಸೈಟಿಗೆ ನೋಟೀಸ್ ಜಾರಿ ಮಾಡಿ, ಕರಾವಳಿ ನಿಯಂತ್ರಣ ವಲಯ (CRZ)ದ ನಿಯಮಗಳನ್ನು ಉಲ್ಲಂಘಿಸುತ್ತಿರುವುದರ ಕುರಿತು ಎಚ್ಚರಿಕೆ ನೀಡಿತ್ತು. ಈಗ ನೋಡಿ, ಕಾನೂನುಪ್ರಕಾರ ಹೋದರೆ ಈ ಇಡೀ ಕಟ್ಟಡವನ್ನು ಧ್ವಂಸ ಮಾಡಲೇಬೇಕು.

ಇದಕ್ಕೂ ಮುಂಚೆಯೇ ಅಂದರೆ, 2008ರಲ್ಲಿ ಮೇಧಾ ಪಾಟ್ಕರ್‌ರವರ ನ್ಯಾಷನಲ್ ಅಲಾಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ (NAPM) ಆದರ್ಶ ಸೊಸೈಟಿಯ ಕರ್ಮಕಾಂಡವನ್ನು ಬಯಲಿಗೆಳೆದಿತ್ತು. ಅಂದೇ ಸರ್ಕಾರಗಳು, ರಾಜಕೀಯ ಪಕ್ಷಗಳು ಎಚ್ಚೆತ್ತುಕೊಳ್ಳಬಹುದಿತ್ತು. ಆದರೆ ಹೆಚ್ಚುಕಡಿಮೆ ಎಲ್ಲ ಪಾರ್ಟಿಯವರೂ ಮತ್ತು ಸೇನೆಯ ಕೆಲ ಮುಖ್ಯಸ್ಥರು ಇದರಲ್ಲಿ ಫಲಾನುಭವಿಗಳೇ ಆಗಿದ್ದರಿಂದ ಈ ವಂಚನೆಗೆ ಅಡೆತಡೆಯೇ ಬರಲಿಲ್ಲ.

ವಿಧವೆಯರ ಹೆಸರಲ್ಲಿ....

ಕಾರ್ಗಿಲ್ ಯುದ್ಧದ ಹುತಾತ್ಮರ ವಿಧವೆಯರಿಗೆಂದು ನಿರ್ಮಿಸಲಾದ ಈ ವಸತಿ ಸಂಕೀರ್ಣದಲ್ಲಿ ಫಲಾನುಭವಿಗಳಾದವರು ಮಾತ್ರ ರಾಜಕಾರಣಿಗಳು, ಅವರ ಸಂಬಂಧಿಕರು, ಕೆಲವು ಸೇನಾ ನಾಯಕರು.



ಹಿಂದೆ ಕಂದಾಯ ಸಚಿವನಾಗಿದ್ದ, ಈಗ
ಮಂತ್ರಿಯಾಗಿರುವ ಅಶೋಕ್ ಚವ್ಹಾಣ ಕುಟ
ಸದಸ್ಯರಿಗೆ ಮೂರು ಫ್ಲಾಟುಗಳು ಸಿಕ್ಕಿವೆ. ಕೇಂದ್ರ
ಖಾತೆಯ ಮಾಜಿ ಮಂತ್ರಿ ಸುರೇಶ್ ಪ್ರಭು,
ಎಂಎಲ್‌ಎ ಜಿತೇಂದ್ರ ಅವ್ಹಾದ್, ಕಾಂಗ್ರೆಸ್ಸಿನ
ಲಾಲ್ ಗಿದ್ವಾನಿ ಮತ್ತು ಆತನ ಇಬ್ಬರು ಮ
ಹೀಗೆ ಫಲಾನುಭವಿ ರಾಜಕಾರಣಿಗಳ ಪಟ್ಟಿ ಬೆಳೆ
ಹೋಗುತ್ತದೆ.

ಮುಂಬೈನ ಮಾಜಿ ಕಲೆಕ್ಟರ್ ಪ್ರದೀಪ್
ಪತ್ನಿ, ಐಎಎಸ್ ಅಧಿಕಾರಿಣಿ ಸೀಮಾ ವ್ಯಾಸ್,
ರಾಷ್ಟ್ರ ಸರ್ಕಾರದ ಡೆಪ್ಯೂಟಿ ಸೆಕ್ರೆಟರಿ ಕುಂದನ್,
ದಳದ ನಿವೃತ್ತ ಚೀಫ್ ಅಡ್ಮಿರಲ್ ಮಾಧವೇಂದ್ರ
ನಿವೃತ್ತ ಸೇನಾ ಮುಖ್ಯಸ್ಥರಾದ ಎನ್.ಸಿ.ವಿಜ್
ದೀಪಕ್ ಕಪೂರ್.... ಇದು ಫ್ಲಾಟು ಪಡೆದ ಅ
ಗಳು, ಸೇನಾಧಿಕಾರಿಗಳ ಪಟ್ಟಿ... ಹೀಗೆ ಎಲ್ಲರನ್ನು ತ
ಸಾಗಿದ ಆದರ್ಶ ಸೊಸೈಟಿಗೆ ಕಾನೂನುಗಳನ್ನು ಲೆಕ್ಕಿಸ
ಎಲ್ಲ ಪರವಾನಗಿಗಳನ್ನು ಕೊಡುತ್ತ ಬರಲಾಗಿತ್ತು...


ಅಂದಂತೆ ಒಟ್ಟು 103 ಫ್ಲಾಟಿನಲ್ಲಿ ಕಾ
ಯೋಧರ ಕುಟುಂಬಗಳಿಗೆ ಸಿಕ್ಕಿದ್ದು ಮೂರೇ ವ
ಫ್ಲಾಟುಗಳು ಮಾತ್ರ!

ಹಗರಣ ಭಾರೀ ಸುದ್ದಿಯಾಗಿ ಹತ್ತು-ಹದಿ
ದಿನ ಆಗುತ್ತಾ ಬಂದರೂ ಕಾಂಗ್ರೆಸ್ ಹೈಕಮಾ
ಅಶೋಕ್ ಚವ್ಹಾಣನನ್ನು ಕಿತ್ತೊಗೆಯಲಾಗಿಲ್ಲ!
ದರೋಡೆಕೋರರ ಯುದ್ಧಿ ಮುಂದುವರೆದಿರುವಂತ
ಚವ್ಹಾಣ್ ಮುಂದುವರೆದಿದ್ದಾನೆ.

ಭ್ರಷ್ಟಾಚಾರವೇ ಆದರ್ಶವಾಗುತ್ತಿರುವ ದೇಶ
ಇವೆಲ್ಲ ಮಾಮೂಲಿ ಘಟನೆಗಳೇ?

● ಪಿ.ಕೆ.ಮಲ್ಲನಗೌ


ವಣಕರ್ ಕುಟುಂಬ ಜೈಲಿಗೆ
ಡ್ಡಿ ಗ್ಯಾಂಗ್‌ನ
ಲೀಸ್ ಗೂಂಡಾಗಿರಿ


ಧರಣಿ ನಿರತರ ಮೇಲೆ ಪೊಲೀಸ್ ಅಟ್ಟಹಾಸ

ಡ್ಡಿ ಕುಟುಂಬದ ಪಾಳೇಗಾರಿ ಅಟ್ಟಹಾಸದ ದೇಶದ ಕಾನೂನುಗಳೆಲ್ಲ ಹೇಗೆ ಕಾಲು ಕಸದಂತಾ ಯುದಕ್ಕೆ ಮೊನ್ನೆ ಶಿಕಾರಿಪುರದಲ್ಲಿ ನಡೆದ ಸರ್ಕಾರಿ ವೊಂದೇ ಸಾಕು.

ಡ್ಡಿ ಒಡೆತನದ ಇಂಗ್ಲಿಷ್ ಕಾನ್ವೆಂಟಿಗಾಗಿ ಶಿಕಾರಿ ರ್ಗತಿಕ ರೇವಣಕರ್ ಕುಟುಂಬದ ಐದೂಕಾಲು ಮಿಯನ್ನು ಮಗ ರಾಘು ಕಿತ್ತುಕೊಂಡಿದ್ದು, ಈ ದ್ಧ ವಿರುದ್ಧ ರೇವಣಕರ್ ಕುಟುಂಬ ಕಳೆದ ಮೂರು ನ ಶಿಕಾರಿಪುರದ ತಹಶೀಲ್ದಾರ್ ಕಚೇರಿಯೆದುರು ಕೂತಿದ್ದು ಮತ್ತು ಧರಣಿ ಕೂತವರಿಗೆ ಮುಖ್ಯಮಂತ್ರಿ ರಾಘು ಸತ್ಯಾಗ್ರಹದ ವೇದಿಕೆಗೇ ನುಗ್ಗಿ ಬೆದರಿಕೆ ವಿರುದ್ಧ ಕಳೆದ ವಾರವಷ್ಟೇ ಪತ್ರಿಕೆ ವರದಿ ಲ್ಲವೆ?

ಕ್ಕೇ ವಿಷ ನೆತ್ತಿಗೇರಿದಂತೆ ಬುಸುಗುಟ್ಟಿದ ಯಡ್ಡಿ ಪತ್ರಿಕೆಯ ಒಂದೇ ಒಂದು ಪ್ರತಿ ಕೂಡ ಶಿಕಾರಿ ರದಂತೆ ಕೈಚಳಕ ಮೆರೆದದ್ದು ಯಾದರೆ; ಮತ್ತೊಂದೆಡೆ ರೇವಣ ಟುಂಬದ ಮೇಲೆ ನಡೆಸಿದ ದೌರ್ಜನ್ಯವಿದೆಯಲ್ಲ; ಬಹುಶಃ ರಾಜ್ಯವಾಳಿದ ಯಾವೊಬ್ಬ ಮಂತ್ರಿಯೂ ಇಷ್ಟೊಂದು ಲಜ್ಜೆ ನಿರ್ಗತಿಕರ ಮೇಲೆ ಯುದ್ಧ ಲ್ಲ!


ಶಿವಕುಮಾರ್


ರಿಪುರ-ಶಿವಮೊಗ್ಗ ರಸ್ತೆಯಲ್ಲಿರುವ ಕಟ್ಟೆ ಕೆರೆಗೆ ಹೊಂದಿಕೊಂಡಂತಿದ್ದ ರ್ ಕುಟುಂಬದ ಐದೂಕಾಲು ಯನ್ನು ಆಕ್ರಮಿಸಿಕೊಂಡೇ ಮ ಸಿಬಿಎಸ್‌ಇ ಶಾಲೆ ಮತ್ತು ಕುಮುದ್ವತಿ ಶಿಕ್ಷಣ ಕಟ್ಟಡ ಎಬ್ಬಿಸಿದವನು ಯಡ್ಡಿ ಮಗ ರಾಘು. ರ್ ಕುಟುಂಬದ ಒಂದಿಬ್ಬರು ಸಂಬಂಧಿಕರನ್ನು ಹಾಕಿಕೊಂಡು ಪುಡಿಕಾಸು ಕೊಟ್ಟು ಆಸ್ತಿಗೆ ಯಡ್ಡಿ ಕುಟುಂಬ ಈ ಪಾಪಕ್ಕೆ ಬಳಸಿಕೊಂಡಿದ್ದು ರದ ತಹಶೀಲ್ದಾರ್‌ನನ್ನು.

ಣಕರ್ ವಂಶಸ್ಥರು ತಕರಾರು ಅರ್ಜಿ ಕೊಟ್ಟಾಗಲೂ ಮುಚ್ಚಿಟ್ಟು ಯಡ್ಡಿಯ ಶಿಕ್ಷಣ ಸಂಸ್ಥೆಗೆ ಭೂಮಿಯ ಟೇಶನ್ ವರ್ಗಾಯಿಸಲಾಯ್ತು. ಸಬ್ ರಿಜಿಸ್ಟ್ರಾರ್ ಕಬಳಿಕೆಗೆ ನೆರವಾದ. ಶಿವಮೊಗ್ಗದ ಜಿಲ್ಲಾಧಿಕಾರಿ ಡಿದು ರಾಜ್ಯಪಾಲರ ತನಕ ಮುಖ್ಯಮಂತ್ರಿಯ ದ ವಿರುದ್ಧ ದೂರು ಕೊಟ್ಟು ಹೈರಾಣಾದ ರ್ ಮಕ್ಕಳು ಕೊನೆಗೆ ವಿಧಿಯಿಲ್ಲದೇ ತಹಶೀಲ್ದಾರ್ ಎದುರು ಧರಣಿ ಕೂತರು.

ಮಧ್ಯೆಯೇ ಸಂಸದ ರಾಘು ನಡುರಾತ್ರಿ ತನ್ನ ನ್ನು ಕಟ್ಟಿಕೊಂಡು ಸತ್ಯಾಗ್ರಹದ ವೇದಿಕೆಗೇ ವಣಕರ್ ಮಕ್ಕಳಿಗೆ ಧಮಕಿ ಹಾಕಿದ್ದ. ಇದರ ರೇವಣಕರ್ ಮಕ್ಕಳು ಕೊಟ್ಟ ದೂರಿಗೆ ಶಿಕಾರಿಪುರ ಸು ಕೇಸು ಕೈಗೊಳ್ಳುವ ಮಾತಿರಲಿ, ದೂರಿಗೊಂದು ರಸೀದಿ ಕೂಡ ಹುಟ್ಟಲಿಲ್ಲ.


ಕೊನೆಗೆ ರೋಸತ್ತ ರೇವಣಕರ್ ಕುಟುಂಬ ಧರಣಿ ಎದ್ದು ತಹಶೀಲ್ದಾರ್ ಕಚೇರಿಗೆ ನುಗ್ಗಿತು. ತಹಶೀಲ್ದಾರ್ ಶಿವಕುಮಾರ್ ಛೇಂಬರಿನ ಎದುರೇ ಕೂತು ತಮಗೆ ನ್ಯಾಯ ಕೊಡಿಸುವಂತೆ ರೇಗಾಡಿತು. ಇದಾಗಿದ್ದು ಅಕ್ಟೋಬರ್ 27 ರಂದು.

ಬಹುಶಃ ಪೊಲೀಸರಿಗೂ ಇದೇ ಬೇಕಿತ್ತೇನೊ. ಪತ್ರಿಕೆ ವರದಿ ಪ್ರಕಟಿಸಿದ ವಾರದೊಳಗೇ ಸತ್ಯಾಗ್ರಹದ ತಾಣಕ್ಕೆ ಬಂದು ರೇವಣಕರ್ ಕುಟುಂಬದವರ ಮೇಲೆ ರೇಗಿಹೋಗಿದ್ದ ಮುಖ್ಯಮಂತ್ರಿ ಯಡ್ಡಿ ಆವತ್ತೇ ಡಿವೈಎಸ್‌ಪಿ ವಿದ್ಯಾಶಂಕರ್‌ರನ್ನು ಕರೆದು ಇನ್ನೆರಡು ದಿನದೊಳಗೆ ಅಲ್ಲಿ ಸತ್ಯಾಗ್ರಹವೇ ಇರಕೂಡದು ಎಂದು ದಬಾಯಿಸಿದ್ದರಲ್ಲ.


ವಿಜಯೇಂದ್ರ

ಇನ್ನು ಪೊಲೀಸರು ಕೇಳಬೇಕೆ? ಮುಖ್ಯಮಂತ್ರಿಯಿಂದಲೇ ಸುಪಾರಿ ಪಡೆದ ವರಂತೆ ಅಕ್ಟೋಬರ್ 27 ರಂದು ತಹಶೀಲ್ದಾರ್ ಛೇಂಬರ್ ಎದುರು ಕೂತು ದಿಕ್ಕಾರ ಕೂಗಿದ್ದನ್ನೇ ನೆಪಮಾಡಿಕೊಂಡರು. ತಹಶೀಲ್ದಾರ್ ಶಿವಕುಮಾರ್‌ನಿಂದ ಒಂದು ದೂರು, ಅದೇ ಕಟ್ಟಡದಲ್ಲಿದ್ದ ಪುರಸಭೆ ಮುಖ್ಯಾಧಿಕಾರಿ ರವೀಂದ್ರನಿಂದ ಮತ್ತೊಂದು ದೂರು ಪಡೆದು, ತಾಲ್ಲೂಕು ಕಚೇರಿ ಒಳಗೆ ರೇವಣಕರ್ ಕುಟುಂಬದವರು ಪ್ರತಿಭಟನೆ ನಡೆಸಿದ್ದರಿಂದ ತಮ್ಮ ಕರ್ತವ್ಯ ನಿರ್ವಹಣೆಗೆ ಧಕ್ಕೆ ತಂದರೆಂದೂ, ತಮಗೆ ಕೊಲೆ ಬೆದರಿಕೆ ಹಾಕಿದರೆಂದೂ, ಅವಾಚ್ಯ ಶಬ್ದಗಳಿಂದ ನಿಂದಿಸಿದರೆಂದೂ ಖೊಟ್ಟಿ ದೂರು ಬರೆಸಿಕೊಂಡ ಪೊಲೀಸರು ಅಕ್ಟೋಬರ್ 30 ರಂದು ಅಮಾನುಷ ಕಾರ್ಯಾಚರಣೆ ಯೊಂದಕ್ಕೆ ಕೈಯಿಟ್ಟರು.

ಒಂದು ಸಶಸ್ತ್ರ ಸಜ್ಜಿತ ಡಿಎಆರ್ ವ್ಯಾನು, ಜೊತೆಗೊಂದು ಜೀಪು, ಮುಂಚೂಣಿಯಲ್ಲಿ ಡಿವೈಎಸ್‌ಪಿ ವಿದ್ಯಾಶಂಕರ್, ಜೊತೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಸುರೇಶ್, ಬೆನ್ನಲ್ಲೇ ಸಬ್ ಇನ್ಸ್‌ಪೆಕ್ಟರ್‌ಗಳಾದ ಸೋಮಶೇಖರ್ ಮತ್ತು ಗುರುರಾಜ್ ಮೈಲಾರಿ ಸಮೇತ ಮೂವತ್ತಕ್ಕೂ ಅಧಿಕ ಪೊಲೀಸ್ ಪೇದೆಗಳಿದ್ದ ಸರ್ಕಾರಿ ಖಾಕಿ ಪಡೆ ಏಕಾಏಕಿ ಶಿಕಾರಿಪುರದ ಜನರ ಎದುರೇ ಧರಣಿ ಕೂತವರನ್ನು ಎತ್ತಿ ವ್ಯಾನಿಗೆ ದಬ್ಬಲಾರಂಭಿಸಿತು. ಯಾವ ಪ್ರಚೋದನೆಯೂ ಇಲ್ಲದೇ ಏಕಾಏಕಿ ನಡೆದ ದಾಳಿಯಿಂದ ಕಂಗಾಲಾದ ರೇವಣಕರ್ ಸಂಬಂಧಿಕರು 'ಏನಿದು ಅನ್ಯಾಯ?' ಎಂದು ಪ್ರಶ್ನಿಸುತ್ತಿದ್ದಂತೆಯೇ ಲಾಠಿ ಏಟುಗಳು ಬದ್ದಿವೆ. ಹೆಂಗಸರು ಮಕ್ಕಳೆನ್ನದೇ ಎಳೆದೆಳೆದು ಸತ್ಯಾಗ್ರಹದ ವೇದಿಕೆಯಿಂದ ಹೊರದಬ್ಬಿದ ಪೊಲೀಸರು ಜನ ನೋಡುನೋಡುತ್ತಿದ್ದಂತೆಯೇ ಸತ್ಯಾಗ್ರಹದ ಶಾಮಿಯಾನಾ, ಕಂಬಗಳನ್ನು ಕಿತ್ತೆಸೆದಿದ್ದಾರೆ. ಹಾಕಿದ್ದ ಬ್ಯಾನರ್, ಪೀಠೋಪಕರಣಗಳನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿದ್ದಾರೆ.


ರವೀಂದ್ರ

ಕಣ್ಣೀರಿಡುತ್ತಲೇ ಧಿಕ್ಕಾರ ಹಾಕುತ್ತಿದ್ದ ಗೃಹಿಣಿ ಅನಸೂಯ, ವೆಂಕಟೇಶ್ ಮತ್ತು ಸುಬ್ರಹ್ಮಣ್ಯರನ್ನು ಎಳೆದೊಯ್ದು ವ್ಯಾನಿಗೆ ತುರುಕಿಕೊಂಡಿದ್ದೇ ಉಳಿದವರ ಮೇಲೆ ಲಾಠಿಚಾರ್ಜ್ ಮಾಡಿ ಓಡಿಸಿದ್ದಾರೆ. ನಂತರ ಬಂಧಿತರನ್ನು ಶಿಕಾರಿಪುರ ಪೊಲೀಸ್ ಠಾಣೆಯ ಲಾಕಪ್ಪಿಗೆ ದಬ್ಬಿ ಅಲ್ಲಿಂದ ಕೋರ್ಟಿಗೆ ಸಾಗಿಸಲಾಗಿದೆ. ಕೆಲವು ಬಂಧಿತರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸುತ್ತಿದ್ದಂತೆ ಮೂವರನ್ನೂ ಶಿವಮೊಗ್ಗದ ಜೈಲಿಗೆ ದಬ್ಬಿದ್ದಾರೆ.

ಹಾಗಂತ ಬಂಧಿತ ರೇವಣಕರ್ ಸಂಬಂಧಿಗಳು ತಮ್ಮ ಹೋರಾಟ ನಿಲ್ಲಿಸಿಲ್ಲ, ಇವತ್ತಿಗೂ ಶಿವಮೊಗ್ಗ ಜೈಲಲ್ಲೇ ದಿನಕ್ಕೊಬ್ಬರಂತೆ ಉಪವಾಸ ಮಾಡುತ್ತಿದ್ದಾರೆ. ಇದು ಅಕ್ಟೋಬರ್ 30 ರ ಘಟನೆಯಾದರೆ, ಅದರ ಮರುದಿನವೇ ಮತ್ತೆ ರೇವಣಕರ್ ಕುಟುಂಬದ ಸದಸ್ಯರು ತಹಶೀಲ್ದಾರ್ ಕಚೇರಿ ಎದುರು ಸೇರಿ ಧಿಕ್ಕಾರ ಕೂಗುತ್ತಾ ಧರಣಿ ಕೂತರೇ ಕ್ಷಣಾರ್ಧದಲ್ಲೇ ಮತ್ತೆ ಡಿಎಆರ್ ವ್ಯಾನು ಮತ್ತು ಜೀಪಿನ ತುಂಬ ಪೊಲೀಸರು ದಾಳಿಯಿಟ್ಟಿದ್ದಾರೆ. ಧರಣಿ ಕೂತವರ ಮೇಲೆ ಎರ್‍ರಾಬಿರ್‍ರಿ ಲಾಠಿ ಬೀಸಿ ಆ ಪೈಕಿ ಮಹಿಳೆಯರಾದ ಗೀತಾ, ಪದ್ಮಾ ಮತ್ತು ರೇವಣಕರ್ ಪುತ್ರ ಚಂದ್ರಕಾಂತ್‌ರನ್ನು ವ್ಯಾನಿಗೆ ತುರುಕಿದ್ದಾರೆ. ಕೋರ್ಟು ಈ ಮೂವರರನ್ನೂ ಮತ್ತೆ ನ್ಯಾಯಾಂಗ ಬಂಧನ ಕ್ಕೊಪ್ಪಿಸಿದೆ. ಸದ್ಯ ರೇವಣಕರ್ ಕುಟುಂಬದ ಈ ಆರೂ ಮಂದಿ ಶಿವಮೊಗ್ಗ ಜೈಲಿನಲ್ಲಿ ಕಂಬಿ ಎಣಿಸಬೇಕಾಗಿದೆ.


ಬಿಡುಗಡೆಯಾಗುವುದು ಇನ್ನು ಯಾವ ಕಾಲಕ್ಕೊ? ಮುಖ್ಯಮಂತ್ರಿಯ ಇಂಥ ನಿರ್ಲಜ್ಜ ಅಟ್ಟಹಾಸದ ವಿರುದ್ಧ ಕಾಂಗ್ರೆಸ್ ನಾಯಕಿ ವಿಜಯಲಕ್ಷ್ಮಿ ಕಂಚುಗಾರ ಪೊಲೀಸ್ ಠಾಣೆಗೆ ಧಾವಿಸಿ ಕೂಗಾಡಿದ್ದಾಗಲೀ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಗೋಣಿ ಮಾಲತೇಶ್ ಖಂಡನಾ ಹೇಳಿಕೆ ಕೊಟ್ಟಿದ್ದಾಗಲಿ ಪೊಲೀಸರಿಗೆ ಯಾವ ಲೆಕ್ಕ?

ಪ್ರತಿಭಟಿಸುವುದು, ಸತ್ಯಾಗ್ರಹ ನಡೆಸುವುದು ಪ್ರತಿಯೊಬ್ಬ ಪ್ರಜೆಯ ಸಂವಿಧಾನದತ್ತ ಹಕ್ಕು. ಹಾಗೊಮ್ಮೆ ರೇವಣಕರ್ ಕುಟುಂಬ ತಹಶೀಲ್ದಾರ್ ಛೇಂಬರಿಗೇ ನುಗ್ಗಿ ಧಿಕ್ಕಾರ ಕೂಗಿದ್ದರೂ ಅದು ಯಾವ ಅಪರಾಧ? ಇದು ನಡೆದ ಮೂರು ದಿನಗಳ ನಂತರ ದೂರು ಪಡೆದು, ಗಂಭೀರ ಪ್ರಕರಣಗಳನ್ನು ದಾಖಲಿಸಿದ ಪೊಲೀಸರಿಗೆ ಘಟನೆಯಲ್ಲಿ ಭಾಗವಹಿಸದೇ ಇದ್ದವರು ಸತ್ಯಾಗ್ರಹ ನಡೆಸಬಹುದೆಂಬ ವಿವೇಕವಾಗಲಿ, ಧರಣಿಗೆ ಹಾಕಿದ್ದ ಶಾಮಿಯಾನಾ ಕೀಳುವುದೇ ಅಕ್ರಮವೆಂಬ ಕಾನೂನು ಪ್ರಜ್ಞೆಯಾಗಲಿ, ಅಪ್ಪಿತಪ್ಪಿಯೂ ಮೂಡಲಿಲ್ಲ.

ಅಷ್ಟಕ್ಕೂ ಸತ್ಯಾಗ್ರಹದ ವೇದಿಕೆಗೆ ನುಗ್ಗಿ ಧಮಕಿ ಹಾಕಿದ ಸಂಸದ ರಾಘು ಮೇಲಿನ ದೂರನ್ನಾದರೂ ಕಣ್ಣೆತ್ತಿ ನೋಡಬೇಕಿತ್ತಲ್ಲವೇ? ಕಾನೂನಿಗಿಂತಲೂ ಮುಖ್ಯಮಂತ್ರಿಯ ರಾಜಾಜ್ಞೆಯೇ ಇಲ್ಲಿನ ತಹಶೀಲ್ದಾರ್, ಡಿವೈಎಸ್‌ಪಿ, ಪೊಲೀಸರಿಗೆ ಪರಮಗುರಿಯಾಯ್ತು. ಹೋಗಲಿ, ಮುಖ್ಯಮಂತ್ರಿಗಾದರೂ ಬಡವರ ಭೂಮಿ ಕಬಳಿಸಬಾರದೆಂಬ, ಅದಕ್ಕೆ ತಕ್ಕ ಬೆಲೆಯನ್ನಾದರೂ ಕೊಡಬೇಕೆಂಬ ಕನಿಷ್ಠ ಪ್ರಜ್ಞೆಯಿರಬೇಕಿತ್ತು. ಹೆಚ್ಚೆಂದರೆ ಇಪ್ಪತ್ತೋ ಮೂವತ್ತೋ ಲಕ್ಷ ರೂಪಾಯಿಗಳಷ್ಟು ದುಡ್ಡು ಕೈಬಿಡುತ್ತಿತ್ತು. ಅದಕ್ಕೆ ಪ್ರತಿಯಾಗಿ ಭೂಮಿ ಗಿಟ್ಟುತ್ತಲ್ಲವೆ?

ಯಾರ್‍ಯಾರೋ ಕಾಂಗ್ರೆಸ್-ಜೆಡಿಎಸ್‌ನ ಎಮ್ಮೆಲ್ಲೇಗಳಿಗೆ ಕೋಟಿಗಟ್ಟಲೇ ಕೊಟ್ಟು 'ಕಮಲ ಸರ್ಜರಿ' ಮಾಡುವ ಮುಖ್ಯಮಂತ್ರಿ ನ್ಯಾಯ ಕೇಳಿದ ಬಡವರ ರೊಕ್ಕ ಪಾವತಿಸಲಾಗದೇ ಅವರನ್ನು ಜೈಲಿಗೆ ಹಾಕಿಸುತ್ತಾನೆಂದರೆ; ಇದಕ್ಕಿಂತ ನಾಚಿಕೆಗೇಡು ಬೇಕೆ? ಯಾರದೋ ಸೈಟಿಗೆ ಬೇಲಿ ಹಾಕಿ ಗೂಂಡಾಗಿರಿ ನಡೆಸುವ ಬೆಂಗಳೂರಿನ ರೌಡಿಗಳಿಗೂ ಮುಖ್ಯಮಂತ್ರಿಗೂ ಏನು ವ್ಯತ್ಯಾಸ ಬಂತು?

• ರಾ. ಸೋಮನಾಥ್



ಎಐಸಿಸಿ ಸದಸ್ಯತ್ವ ಮಂಗಳೂರು ಮೋಹನ್‌ಗೆ ಮನ್ನಣೆ

ರಾಜ್ಯದ ಕಾಂಗ್ರೆಸ್‌ನ ಇತ್ತೀಚಿನ ಹೀನಾಯಸ್ಥಿತಿಗೆ ಸಂಘಟನಾತ್ಮಕ ಲೋಪವೇ ಕಾರಣವೆಂದು ಕೊನೆಗೂ ಅರಿತಂತಿರುವ ಹೈಕಮಾಂಡ್ ಇತ್ತೀಚೆಗೆ ಹಲವು ಪ್ರಮುಖ ಬದಲಾವಣೆಗಳಿಗೆ ಕೈಹಾಕಿದೆ.

ಸಿದ್ದರಾಮಯ್ಯರನ್ನು ವಿರೋಧಪಕ್ಷದ ನಾಯಕರನ್ನಾಗಿ ಮಾಡಿದ ನಂತರ ಸದನದಲ್ಲಿ ಕಾಂಗ್ರೆಸ್ಸಿಗೊಂದಿಷ್ಟು ಕಸುವು ಬಂದಿದೆ. ಆದರೆ ಪಕ್ಷದ ಚಟುವಟಿಕೆಗಳು ಮಾತ್ರ ಕುಂಟುತ್ತಲೇ ನಡೆದಿದ್ದವು. ಕೊನೆಗೂ ಎಚ್ಚೆತ್ತುಕೊಂಡ ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷ ನಿದ್ರಾಶೂರ ದೇಶಪಾಂಡೆಯನ್ನು ತೊಲಗಿಸಿ, ಆ ಸ್ಥಾನಕ್ಕೆ ಮೂಲ ಕಾಂಗ್ರೆಸ್ಸಿಗ ಜಿ.ಪರಮೇಶ್ವರರನ್ನು ತಂದಿತು.

ಈಗ ಎಐಸಿಸಿ ಸದಸ್ಯರನ್ನು ಆರಿಸುವಾಗಲೂ ಕೊಂಚ ಜಾಗೃತಗೊಂಡಿರುವ ಹೈಕಮಾಂಡ್ ಮತ್ತೆ ಮತ್ತೆ ಅವೇ ಅವೇ ಮಾಸಿಹೋದ ಮುಖಗಳಿಗೆ ಮಣೆ ಹಾಕುವುದನ್ನು ಸ್ವಲ್ಪ ಕಡಿಮೆ ಮಾಡಿ ಹೊಸಮುಖಗಳಿಗೆ ಅವಕಾಶ ನೀಡಿದೆ. ಸಿದ್ದರಾಮಯ್ಯ ಜನಾರ್ದನ ಪೂಜಾರಿಯಂತಹ ಹಿರಿಯರ ಜೊತೆಗೆ ಹಲವಾರು ಯುವಕರಿಗೂ ಎಐಸಿಸಿ ಸದಸ್ಯತ್ವ ನೀಡಲಾಗಿದೆ.


ಅಂತಹ ಹೊಸಮುಖಗಳ ಪೈಕಿ ಮಂಗಳೂರಿನ ಪಿ.ವಿ. ಮೋಹನ್ ಕೂಡಾ ಒಬ್ಬರು. ಬಹು ಪರಾಕ್ ಹೇಳುವುದನ್ನೇ ಕಾಯಕ ಮಾಡಿಕೊಂಡಿರುವ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಪಿ.ವಿ. ಮೋಹನ್ ತಮ್ಮ ಕ್ರಿಯಾಶೀಲತೆಯಿಂದ ಮುನ್ನಡೆಗೆ ಬಂದವರು. ಮಂಗಳೂರು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿರುವ ಮೋಹನ್ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಸ್ಥಳೀಯ ಮಟ್ಟದಲ್ಲಿ ಹಲವು ಹೋರಾಟ ನಡೆಸಿದವರು.

ಮೊನ್ನೆಯ ಬಳ್ಳಾರಿ ಪಾದಯಾತ್ರೆಯಲ್ಲಿ ತುಂಬಾ ಆಕ್ಟೀವ್ ಆಗಿದ್ದ ಮೋಹನ್, ಈ ಹಿಂದೆ ಬಾಬಾಬುಡನ್ ಗಿರಿಯ ಹೋರಾಟದಲ್ಲಿ ಜೈಲು ಕಂಡಿದ್ದರು. ಮಂಗಳೂರಿನಲ್ಲಿ ವಿದ್ಯಾರ್ಥಿ ಸಂಘಟನೆಯ ನಾಯಕನಾಗಿ ಮಂಗಳೂರು ವಿವಿಯ ಸೆನೆಟ್, ಸಿಂಡಿಕೇಟ್‌ಗಳ ಸದಸ್ಯರಾಗಿ ಕೆಲಸ ಮಾಡಿರುವ ಮೋಹನ್ ಮೂಲತಃ ಚಳವಳಿಯ ಹಿನ್ನೆಲೆಯಿಂದ ಬಂದವರು. ರೈತ, ದಲಿತ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಮೋಹನ್, ಪಿ.ಲಂಕೇಶರ 'ಪ್ರಗತಿರಂಗ'ದ ಮಂಗಳೂರು ಸಂಚಾಲಕರಾಗಿ ಹಲವಾರು ಸಭೆಗಳನ್ನು ಹಮ್ಮಿಕೊಂಡಿದ್ದರು.

ತೃತೀಯ ಶಕ್ತಿ ಹುಡುಕಾಟದಲ್ಲಿ ಸುಸ್ತಾದ ಮೋಹನ್ ಕಳೆದ ದಶಕದಲ್ಲಿ ಕಾಂಗ್ರೆಸ್ ಸೇರಿ, ಅಲ್ಲೂ ತಮ್ಮ ಹೋರಾಟದ ಹಾದಿಯಲ್ಲೇ ಸಾಗಿದವರು. ಎರಡೂ ಬಾರಿ ಎಮ್ಮೆಲ್ಲೆ ಟಿಕೆಟ್ ತಪ್ಪಿಸಿಕೊಂಡಿರುವ ಮೋಹನ್‌ಗೆ ಕಾಂಗ್ರೆಸ್‌ನಲ್ಲಿ ಪ್ರಮುಖ ಗೌರವ ಎಂದೇ ಪರಿಗಣಿಸಲ್ಪಟ್ಟಿರುವ ಎಐಸಿಸಿ ಸದಸ್ಯತ್ವ ದೊರಕಿದೆ.

ಕರಾವಳಿಯ ಕಾಂಗ್ರೆಸ್ ನಾಯಕರು ಅಲ್ಲಿನ ಬಿಜೆಪಿಯನ್ನು ಮುಖಾಮುಖಿ ಎದುರಿಸದೇ ದೆಹಲಿಯಲ್ಲೇ ಠಿಕಾಣಿ ಹೂಡಿರುವಾಗ, ಮೋಹನ್‌ನಂತಹ ಯುವಕರು ದಿಲ್ಲಿ, ಕರಾವಳಿ ಎರಡರಲ್ಲೂ ಇನ್ನೂ ಸಕ್ರಿಯರಾಗಬೇಕಿದೆ. ಕಾಂಗ್ರೆಸ್ಸಿನ ಸಂಘಟನಾ ಕೆಲಸಕ್ಕೆ ಹೊಸ ಕಸುವು ತುಂಬಬೇಕಾಗಿದೆ.


ಮೋಹನ್‌ಗೆ ಪತ್ರಿಕೆಯ ಶುಭಾಶಯಗಳು ●



ಉತ್ತರ ಕನ್ನಡ: ಅಯ್ಯೋ..... ಅಸ್ನೋಟಿಕರ್... ಪಾಪ....!!


ಬಿಜೆಪಿಯಲ್ಲಿ ಕಷ್ಟ-ನಷ್ಟವಾ
ಅಸ್ನೋಟಿಕರ್ "ನನ್ನ ಫೇ
ಹೀರೋ ಜೆಡಿಎಸ್ ಯು
ಕುಮಾರಸ್ವಾಮಿ...."
ಅಂತರಂಗ-ಬಹಿರ
ಹೇಳುವುದು ಮಾಮೂಲಿಯ
ಕುಮಾರಸ್ವಾಮಿ ಜತೆ ಆತನಿಗೆ
ಲಿಂಕುಗಳೂ ಇದ್ದವು. ಅಕ
ಸಂಪುಟದಿಂದ ಬಿಸಾ
ಬಿಜೆಪಿಯಲ್ಲಿದ್ದೇ ಕುಮಾ
ಬೆನ್ನಿಗೆ ಓಡಾಡಿ ಕಾಗೇರಿ-
ಇರಿಟೇಟ್ ಮಾಡುವ
ಅಸ್ನೋಟಿಕರ್ ಗ
ಹಾಕಿಕೊಂಡಿತ್ತು.
ಕುಮಾರಸ್ವಾಮಿಯ ಅವಸರ-
ಲೆಕ್ಕಾಚಾರದಿಂದ ಆ
ಅಸ್ನೋಟಿಕರ್‌ಗೆ ಸಂ
ಬಂದುಬ

ಕಾರವಾರದ ಕೊಳಕು ಪೋರ ಆನಂದ್ ಅಸ್ನೋಟಿಕರ್ ತನ್ನ ಶಿಲುಬೆ ತಾನೇ ಹೊತ್ತುಕೊಂಡು ಹೊರಟಂತೆ ಕಾಣಿಸುತ್ತಿದ್ದಾನೆ! ಬುರ್ನಾಸ್ ರಾಜಕಾರಣದ ಪಿತಾಮಹ ಬಿ.ಎಸ್. ಯಡಿಯೂರಪ್ಪನ ಲೇವಾದೇವಿ ಗ್ಯಾಂಗು ಒಡ್ಡಿದ ಅಧಿಕಾರ-ಹಡಬೆ ಹಣದ ಆಮಿಷಕ್ಕೆ ಬಿದ್ದು ಬರ್ಬದಾಗಿ ಹೋಗಿದ್ದಾನೆ ಆನಂದ್ ಅಸ್ನೋಟಿಕರ್. ಕಾಂಗ್ರೆಸ್‌ನಿಂದ ಶಾಸಕನಾದ ಬರೀ ನಲ್ವತ್ತೈದೇ ದಿನಕ್ಕೆ ಕಾವಿ ಪಕ್ಷಕ್ಕೆ ಲಾಂಗ್ ಜಂಪ್ ಮಾಡಿದ್ದ ಅಸ್ನೋಟಿಕರ್ ಈಗಲ್ಲಿ ಬದುಕಲಾಗದೇ ತಂಬು ಕಿತ್ತುಕೊಂಡು ಹೊರಬಿದ್ದಿದ್ದಾನೆ.




ಆಪರೇಷನ್ (ಕಮಲ) ಮಾಡಿಸಿಕೊಂಡಿದ್ದೇಕೆ? ಯಡ್ಡಿ ವಿರುದ್ಧ ಬಂಡೆದ್ದಿದ್ದೇಕೆ? ಅಂತರ್ ಪಿಶಾಚಿಯಂತೆ ರೆಸಾರ್ಟ್‌ನಿಂದ ರೆಸಾರ್ಟ್‌ಗೆ ಕಳೆದೊಂದು ತಿಂಗಳಿಂದ ಅಂಡಲೆಯುತ್ತಿದ್ದೇನೇಕೆ? ಎಂಬುದೇ ಅರ್ಥವಾಗದೇ ಅಸ್ನೋಟಿಕರ್ ಗೊಂದಲಗೊಂಡಿರುವುದು ಆತನ ಆಜನ್ಮ ವೈರಿಗಳಲ್ಲೂ ಕರುಣೆ ಮೂಡಿಸುವಷ್ಟು ದಯನೀಯವಾಗಿದೆ. ಯಾವುದೇ ಜನಪರ ತತ್ವ-ಬದ್ಧತೆ-ಸಿದ್ಧಾಂತವಿಲ್ಲದೆ ಗಂಡಾಗುಂಡಿ ರಾಜಕಾರಣ ಶುರುಹಚ್ಚಿಕೊಂಡಿದ್ದ ಅಸ್ನೋಟಿಕರ್ ಮನುವಾದಿಗಳ ಸಹವಾಸ ಮಾಡಿದ್ದಕ್ಕೆ ಬಹುದೊಡ್ಡ ದಂಡವನ್ನೇ ತೆರುತ್ತಿದ್ದಾನೆ.

ಅವಸರದ ಅಸ್ನೋಟಿಕರ್ ಅತಂತ್ರ ಯಡ್ಡಿ ಸರ್ಕಾರಕ್ಕೆ ಸ್ಥಿರತೆ ಒದಗಿಸುವ ಸುಖ್ಯೆಯಾಗಿದ್ದನೇ ಹೊರತು ಅವನೆಂದಿಗೂ ಬಿಜೆಪಿಯಲ್ಲಿ ಗೌರವಾನ್ವಿತ ಶಾಸಕ-ಸಚಿವನಾಗಿರಲೇ ಇಲ್ಲ. ಆತ ಕೇಳಿದ್ದು ಅರಣ್ಯ ಇಲಾಖೆಯಾಗಿತ್ತು; ಬಂದರು ಖಾತೆಯನ್ನಾದರೂ ಕೊಡಿ ಎಂದಿದ್ದ. ಆದರೆ ದಕ್ಕಿದ್ದು ಕೆಲಸಕ್ಕೆ ಬಾರದ ಮೀನುಗಾರಿಕಾ ಇಲಾಖೆ. ಖುದ್ದು ಕರಾವಳಿಯವನಾದರೂ ಆತನಿಗೆ ಆ ಖಾತೆಯಲ್ಲಿ ಆಸಕ್ತಿಯೇ ಇರಲಿಲ್ಲ. ಮೀನುಗಾರಿಕೆಯನ್ನೇ ಬದುಕಾಗಿಸಿಕೊಂಡಿದ್ದ ಕ್ಷೇತ್ರದ ಜನರಿಗೆ ಆತನಿಂದ ಮೂರು ಬಿಲ್ಲಿ ಪ್ರಯೋಜನವಾಗಲಿಲ್ಲ. ಮೀನುಗಾರಿಕೆ ಇಲಾಖೆಯ ಅಧಿಕಾರಿಗಳೂ ಪೆದ್ದು ಅಸ್ನೋಟಿಕರ್‌ಗೆ ಕೇರ್ ಮಾಡುತ್ತಿರಲಿಲ್ಲ.



ಬಿಜೆಪಿ ಪಕ್ಷ-ಸರ್ಕಾರದಲ್ಲೂ ಅಸ್ನೋಟಿಕರ್‌ಗೆ ಕಿಮ್ಮತ್ತೆಂಬುದೇ ಇರಲಿಲ್ಲ. ಸ್ವತಃ ಸಿಎಂ ಯಡ್ಡಿಯೇ ಈ ತರಲೆ ತರುಣನ ತಲೆ ಕಂಡರೆ ಮುಖ ಸಿಂಡರಿಸಿಕೊಂಡು ಹೋಗುತ್ತಿದ್ದರು. ಇದಕ್ಕೆ ಕಾರಣವೂ ಇತ್ತು. ಉತ್ತರ ಕನ್ನಡವನ್ನು ಬ್ರಾಹ್ಮಣ ಸಾಮ್ರಾಜ್ಯ ಮಾಡುವ ಹಿಡನ್ ಅಜೆಂಡಾ ಇಟ್ಟುಕೊಂಡು ಕಾರ್ಯಾಚರಣೆಗೆ ಇಳಿದಿರುವ ಸಂಘಪರಿವಾರದ ಷಡ್ಯಂತ್ರಗಾರ ಕಾಗೇರಿ ವಿಶ್ವೇಶ್ವರ ಹೆಗಡೆ ಆರೆಸ್ಸೆಸ್ಸಿಗರಿಗೆ, ಸಚಿವ ಸಹೋದ್ಯೋಗಿಗಳಿಗೆ, ಪಾರ್ಟಿಯವರಿಗೆ ಕೊನೆಗೆ ಸಿಎಂ ಯಡ್ಡಿಗೆಲ್ಲ ಅಸ್ನೋಟಿಕರ್ ಬಗ್ಗೆ ಬ್ಯಾಡ್ ಇಂಪ್ರೇಷನ್ ಆರಂಭದಿಂದಲೂ ಕೊಡುತ್ತಲೇ ಬಂದಿದ್ದರು.




ಅಸ್ನೋಟಿಕರ್‌ನ ಮಂತ್ರಿಗಿರಿ ಕಾರವಾರದಿಂದಾಚೆ ಚಲಾವಣೆಗೇ ಬರಲಿಲ್ಲ. ಕಂತ್ರಿ ಕಾಗೇರಿ ಅಸ್ನೋಟಿಕರ್‌ನ ಹಲ್ಲು-ಬಾಲ ಅದ್ಯಾವ ಪರಿ ಕಟ್ ಮಾಡಿದ್ದನೆಂದರೆ, ಡಿಸಿ-ಎಸ್ಪಿ ಬಿಡಿ, ತಹಶೀಲ್ದಾರ್-ಎಸ್ಸೈಗಳೂ ಆತನ ಮಾತು ಕೇಳುತ್ತಿರಲಿಲ್ಲ. ಅಸ್ನೋಟಿಕರ್‌ನ ಕಾರವಾರದಲ್ಲಿದ್ದ ಪ್ರಮುಖ ಸರ್ಕಾರಿ ಕಚೇರಿಗಳು, ಅನುದಾನ ಒಂದೊಂದಾಗಿ ಕಾಗೇರಿಯ ಶಿರಸಿ ಸೀಮೆಗೆ ಶಿಫ್ಟ್ ಆಗತೊಡಗಿದವು. ಅಸ್ನೋಟಿಕರ್ ನಾಮಕೇವಾಸ್ತೆ ಮಿನಿಸ್ಟರ್ ಆಗಿಹೋದ. ಆತನಿಗೆ ತನ್ನಾಪ್ತ ಬಂಟರ ಹಿತ ಕಾಯುವುದೂ ಕಷ್ಟವಾಗಿಹೋಯ್ತು. ಕ್ಷೇತ್ರದಲ್ಲಿ ಇಮೇಜು ಒಂದೇ ಸಮನೆ ಇಳಿಯಹತ್ತಿತ್ತು.

ಯಾವಾಗ ಕಾಗೇರಿ ತನ್ನ ಆಜನ್ಮ ವೈರಿ ಕಾಂಗ್ರೆಸ್‌ನ ಸತೀಶ್ ಸೈಲ್ ಎಂಬ ಅಕ್ರಮ ಅದಿರು ದೊರೆಗೆ ಕುಮ್ಮಕ್ಕು ಕೊಡತೊಡಗಿದನೋ ಆಗ ಅಸ್ನೋಟಿಕರ್ ಕನಲಿಹೋದ. ಅದ್ಯಾಕೋ ಅಸ್ನೋಟಿಕರ್ ತನಗೆ ಕೇಸರಿ ಪಕ್ಷದ ದೀಕ್ಷೆ ಕೊಡಿಸಿದ್ದ ಅದಿರು ಸಾಮ್ರಾಜ್ಯದ ಡಾನ್ ಜನಾರ್ದನ ರೆಡ್ಡಿ ಬಳಗದೊಂದಿಗೂ ಜಗಳಾಡಿಕೊಂಡಿದ್ದ. ಹೀಗಾಗಿ ರೆಡ್ಡಿ ಗೆಳೆಯ ಸತೀಶ್ ಸೈಲ್‌ನ ಕೈಯೇ ಕಾರವಾರ-ಅಂಕೋಲಾದಲ್ಲಿ ಮೇಲಾಗುತ್ತ ಹೋಯ್ತು. ಹೆಜ್ಜೆ-ಹೆಜ್ಜೆಗೆ ಎಡರು-ತೊಡರು ಸೃಷ್ಟಿಸಿ ಅಸ್ನೋಟಿಕರ್‌ಗೆ ಅಡ್ಡಹಾಕುತ್ತ ಹೋದ ಕಾಗೇರಿ. ಕ್ಷೇತ್ರದ ಸಮಸ್ಯೆ ಬಗೆಹರಿಸಲಿಕ್ಕೂ ಆನಂದ್ ಅಸ್ನೋಟಿಕರ್‌ನಿಂದ ಸಾಧ್ಯವಾಗಲಿಲ್ಲ.

ಅದಿರು ಅವ್ಯವಹಾರದಿಂದ ಅಸ್ನೋಟಿಕರ್‌ಗೆ ಮಾಮೂಲಿಯೂ ಬರದಂತೆ ಕಾಗೇರಿ ಮಾಡಿಬಿಟ್ಟಿದ್ದ. ತಾನೊಬ್ಬನೇ ಹೊಟ್ಟೆ ತುಂಬ ಅದಿರು ಆಮದನಿ ಕಾಗೇರಿ ಸ್ವಾಹಾ ಮಾಡುವುದು ಅಸ್ನೋಟಿಕರ್‌ನ ಹೊಟ್ಟೆ ಉರಿಸಿಬಿಟ್ಟಿತು. ಅದಿರು ಲಾಬಿಯಿಂದ ಹೊರಗಿಡಲ್ಪಟ್ಟ ಅಸ್ನೋಟಿಕರ್ ಅದಿರು ಲಾರಿಗಳ ಹಾವಳಿ ವಿರುದ್ಧ ಬೀದಿಗಿಳಿದು ಬಿಟ್ಟ. ಅರ್ಥಾತ್ ಕಾಗೇರಿಗೆ ನಡುಬೀದಿಯಲ್ಲೇ ಸೆಡ್ಡು ಹೊಡೆದರು. ಆಗ ಜೋರಾಯ್ತು ಕಾಗೇರಿ-ಅಸ್ನೋಟಿಕರ್ ಶೀತಲ ಸಮರ. ಅದಿರು ಲಾರಿ ಸಮಸ್ಯೆ, ಅಂತರ್‌ರಾಜ್ಯ ಮರಳು ಸಾಗಾಣಿಕೆ ಬ್ಯಾನ್, ಝುರಿವಾಡ ಮಹಾಮಳೆ ಸಂತ್ರಸ್ತರ ಗೋಳು, ಇಂಜಿನಿಯರಿಂಗ್ ಕಾಲೇಜ್ ಕಟ್ಟಡ ಸ್ಯಾಂಕ್ಷನ್, ಅಭಿವೃದ್ಧಿ ಅನುದಾನ, ಅಧಿಕಾರಿಗಳ ವರ್ಗಾವರ್ಗಿಯಲ್ಲಿ ಅಸ್ನೋಟಿಕರ್‌ಗೆ ಮುಖಭಂಗ ಆಗುವಂತೆ ಕಾಗೇರಿ ಕಿತಾಪತಿ ಮಾಡಿದರು.

ಸರಣಿ ಸೋಲುಗಳಿಂದ ಅಸ್ನೋಟಿಕರ್ ಕಂಗೆಟ್ಟು ಹೋದರು. ಕ್ಷೇತ್ರವಾಸಿಗಳು ಇವನೆಂಥ ಹೇತ್ಲಾಂಡಿ ಮಂತ್ರಿಯೆಂದು ಜರಿಯತೊಡಗಿದರು. ಅನಿವಾರ್ಯವಾಗಿ ಅಸ್ನೋಟಿಕರ್ ಕಾಗೇರಿ-ಯಡ್ಡಿಗೆ ಕಿರಿಕ್ ಮಾಡಲಾರಂಭಿಸಿದರು. ನನ್ನೂರಿನ ಜನರಿಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ, ಸಾಕ್ಷಾತ್ ಸಿಎಂ, ಬಂದರು ಮಂತ್ರಿ ಪಾಲೇಮಾರ್‌ರಿಂದ ಅನ್ಯಾಯವಾಗುತ್ತಿದೆ ಎಂದು ಉಲ್ಟಾ ಸ್ಟೇಟ್‌ಮೆಂಟ್ ಒಗಾಯಿಸುವ 'ಆಟ' ಆರಂಭಿಸಿದರು. ಇಷ್ಟೇ ಸಾಕಾಯ್ತು, ಚಾಡಿಕೋರ ಕಾಗೇರಿಗೆ ಕೇಶವಕೃಪಾ, ಯಡ್ಡಿ ಬಿಡಾರದಲ್ಲಿ ಅಸ್ನೋಟಿಕರ್ ವಿರುದ್ಧ ಅಪಪ್ರಚಾರ ಮಾಡಲಿಕ್ಕೆ.

ಅಪಾಯಕಾರಿ ಬ್ರಾಹ್ಮಣ ಕಾಗೇರಿಯ ಕ್ರೌರ್ಯದಿಂದ ಈ ಹುಂಬ ಶೂದ್ರ ಪೋರ ತತ್ತರಿಸಿ ಹೋದ. ಕಳೆದ ಮಾರ್ಚ್‌ನಲ್ಲೊಂದು ದಿನ ಅಸ್ನೋಟಿಕರ್‌ನ ಕರೆಸಿಕೊಂಡ ಮುಖ್ಯಮಂತ್ರಿ ಯಡ್ಡಿ ಸಮಾ ಉಗಿದಿದ್ದಾರೆ. "ನಿನ್ನನ್ನು ಮಂತ್ರಿಗಿರಿಯಿಂದ ಡಿಸ್‌ಮಿಸ್ ಮಾಡಬೇಕಾಗುತ್ತದೆ.... ಹುಷಾರ್...." ಎಂದು ಹೆಡ್‌ಮಾಸ್ಟರ್ ಶೈಲಿಯಲ್ಲಿ ವಾರ್ನಿಂಗೂ ಕೊಟ್ಟು ಕಳಿಸಿದ್ದರು. ಆಗ ಯಡ್ಡಿ ಮಗ-ಸಂಸದ ರಾಘವೇಂದ್ರನನ್ನೇ ಬುಕ್ ಮಾಡಿಕೊಂಡಿದ್ದ ಅಸ್ನೋಟಿಕರ್ ಆತನಿಗೆ ಕೋಟ್ಯಂತರ ರೂಪಾಯಿ ಬೆಲೆಯ ಬಂಗ್ಲೆಯೊಂದನ್ನು ಡಾಲರ್ಸ್-ಕಾಲೋನಿಯಲ್ಲಿ ಕೊಡಿಸಿ ಮಂತ್ರಿಗಿರಿ ಬಚಾಯಿಸಿಕೊಂಡಿದ್ದಾನೆಂಬ ರೂಮರ್ರೂ ಹಬ್ಬಿತ್ತು.



ರಾಘವೇಂದ್ರ ಮಹಿಮೆಯೋ, ಇನ್ನೇನೋ, ಒಟ್ಟಿನಲ್ಲಿ ಅಸ್ನೋಟಿಕರ್‌ನ ಮಂತ್ರಿ ಸ್ಥಾನ ಉಳಿದಿತ್ತು. ಆದರೆ ಮಾನ-ಮರ್ಯಾದೆ ಹೋಗಿತ್ತು. ಗರ್ಭಗುಡಿ ಸಂಸ್ಕೃತಿಯ ಕೇಸರಿ ಪಾಳೆಯದಲ್ಲಿ ಆತ ಉಸಿರು ಕಟ್ಟಿ ಒದ್ದಾಡಹತ್ತಿದ್ದ. ಇವತ್ತಲ್ಲ ನಾಳೆ ಮಂತ್ರಿಗಿರಿಗೆ ಚೆಡ್ಡಿ ಪರಿವಾರದ ಬ್ರಾಹ್ಮಣ ಬಟಾಲಿಯನ್ ದೋಖಾ ಕೊಡುತ್ತಾರೆಂಬುದು ಅಸ್ನೋಟಿಕರ್‌ಗೆ ಖಾತ್ರಿಯಾಗಿತ್ತು. ಅದಕ್ಕಿಂತ ಹೆಚ್ಚಾಗಿ ಈ ಕೆಲಸಕ್ಕೆ ಬಾರದ ಮಂತ್ರಿಗಿರಿಯಿಂದ ಕ್ಷೇತ್ರದಲ್ಲಿ ಅಸಹಾಯಕ ಸ್ಥಿತಿಯೇ ಹೊರತು ಪ್ರಯೋಜನವೇನಿಲ್ಲ ಎಂಬುದು ಪಕ್ಕಾ ಆಗಿ ಹೋಗಿತ್ತು. ಹಾಗಾಗಿ ಯಡ್ಡಿ ವಿರುದ್ಧ ಬಂಡಾಯವೆದ್ದಾಗ ರೆಬೆಲ್‌ಗಳ ಮುಂಚೂಣಿಯಲ್ಲೇ ಈ ಗಡಿಬಿಡಿ ಹುಡುಗ ಠಳಾಯಿಸಿಬಿಟ್ಟ!

ಬಿಜೆಪಿಯಲ್ಲಿ ಕಷ್ಟ-ನಷ್ಟವಾದಾಗೆಲ್ಲ ಅಸ
"ನನ್ನ ಫೇವರಿಟ್ ಹೀರೋ ಜೆಡಿಎಸ್ ಯ
ಕುಮಾರಸ್ವಾಮಿ...." ಎಂದು ಅಂತರಂಗ-ಬಹಿ
ಹೇಳುವುದು ಮಾಮೂಲಿಯಾಗಿತ್ತು. ಕುಮಾರಸ
ಆತನಿಗೆ ರಹಸ್ಯ ಲಿಂಕುಗಳೂ ಇದ್ದವು.
ಸಂಪುಟದಿಂದ ಬಿಸಾಡಿದರೆ ಬಿಜೆಪಿಯಲ್ಲಿದ್ದೇ
ಸ್ವಾಮಿ ಬೆನ್ನಿಗೆ ಓಡಾಡಿ ಕಾಗೇರಿ-ಯಡ್ಡಿಗೆ
ಮಾಡುವ ಸ್ಕೆಚ್ ಅಸ್ನೋಟಿಕರ್ ಗ್ಯಾಂಗು ಹಾಕಿ
ಆದರೆ ಕುಮಾರಸ್ವಾಮಿಯ ಅವಸರ-ತಪ್ಪಿದ ಲೆಕ್ಕಾ
ಆನಂದ್ ಅಸ್ನೋಟಿಕರ್‌ಗೆ ಸಂಚಕಾರ ಬಂದು

ತನ್ನ ಕಾಲಿನ ಮೇಲೆ ತಾನೇ ಕಲ್ಲು ಹಾಕಿಕೊ
ಆನಂದ್ ಅಸ್ನೋಟಿಕರ್ ಭವಿಷ್ಯದ ಬಗ್ಗೆ ಈಗ ತ
ಚರ್ಚೆಗಳು ನಡೆಯುತ್ತಿವೆ. ಹಾಗೊಮ್ಮೆ ಉಪ
ಯಾದರೆ ಅಸ್ನೋಟಿಕರ್‌ಗೆ ಸ್ಪರ್ಧಿಸುವ ಅರ್ಹತೆ
ಇದ್ದರೆ ಯಾವ ಪಕ್ಷದಿಂದಾತ ನಿಲ್ಲುತ್ತಾನೆ? ಚ
ಇಳಿಯಲು ಕಾನೂನು ತೊಡಕಾದರೆ ತನ್ನ ಫ್ಯಾಮಿ
ಯಾರನ್ನು ಕಣಕ್ಕಿಳಿಸಬಹುದು? ಚುನಾವಣೆಯಲ್ಲಿ
ಗೆಲ್ಲಬಹುದಾ? ಬಿಜೆಪಿಯಿಂದ ಯಾರು ನಿಲ್ಲ
ಇಂಥ ಪ್ರಶ್ನೆಗಳೀಗ ಎಲ್ಲೆಲ್ಲೂ ಚರ್ಚೆಗೀಡ
ಕಾಗೇರಿ-ಯಡ್ಡಿ ಪಡೆಯಂತೂ ಅಸ್ನೋ
ಬಗ್ಗುಬಡಿಯಲು ಜಿದ್ದಿನಿಂದ ಈಗಲೇ ತಯಾ


ರಾಜ್ಯ ರಾಜಕಾರಣದಲ್ಲಾದ ಗಲೀಜು ಗ
ಅಡ್ಡ ಪರಿಣಾಮಗಳು ಒಂದೊಂದಾಗಿ ಜಿಲ್ಲಾ ರಾ
ರಂಗದ ಮೇಲಾಗತೊಡಗಿದೆ. ಒರಿಜಿನಲ್ ಬಿ
ಸಂಘಪರಿವಾರಗಳು ಅಸ್ನೋಟಿಕರ್‌ನ ರಾ
ವ್ಯವಹಾರಿಕ-ಬೇರುಗಳಿಗೇ ಕೈಹಾಕಿ ಅಲುಗಾಡಿ

ಅಸ್ನೋಟಿಕರ್ 'ಆಸ್ತಿ' ಡೀನೋಟಿಫೈ

ಕರ್ನಾಟಕ ಯಡಿಯೂರಪ್ಪನಂಥ ಪಾತಕ ಪಾಲಿಟಿಕ್ಸ್ ಪಿತಾಮಹನನ್ನು ಹಿಂದೆಂದೂ ಕಂಡಿಲ್ಲ. ಮುಂದೆ
ಅಶ್ಲೀಲ ಪುಢಾರಿ ಹುಟ್ಟುವುದೂ ಇಲ್ಲ. ಯಡ್ಡಿ ಯುಗ ನಭೂತೋ ನಭವಿಷ್ಯತಿ. ಯಡ್ಡಿ ಮಹಾತ್ಮ ಅಧಿಕಾರ
ಕ್ಷಣದಿಂದಲೇ ಅಕ್ರಮ-ಅನ್ಯಾಯ-ಅನಾಹುತ ಶುರುವಿಟ್ಟುಕೊಂಡು ರಾಜ್ಯ ದಿವಾಳಿ ಮಾಡುತ್ತಿದ್ದಾರೆಂಬುದಕ್ಕೆ
ಆನಂದ್ ಅಸ್ನೋಟಿಕರ್‌ಗೆ ನೂರಾರು ಕೋಟಿಯ ಭೂಮಿ ಕೊಟ್ಟು ಕಸಿದುಕೊಂಡ ಕರ್ಮಕಾಂಡ ಸಾ
ಸಮೇತ ಸಾಬೀತುಪಡಿಸುತ್ತಿದೆ!!

ಆನಂದ್ ಅಸ್ನೋಟಿಕರ್ ಆಪರೇಷನ್ ಮಾಡಿಸಿಕೊಂಡು ಕಮಲ ಪಾಳೆಯ ಸೇರುವಾಗ ಆತನಿಗೆ ಕೋಟಿ
ರೊಕ್ಕ, ಮಂತ್ರಿಗಿರಿಯ ಗೂಟದ ಕಾರಷ್ಟೇ ಕೊಟ್ಟಿಲ್ಲ. ಬದಲಿಗೆ ಕೋಟ್ಯಂತರ ರೂಪಾಯಿ ಬೆಲೆಯ
ಬೆಂಗಳೂರು ಮತ್ತು ಅಂಕೋಲೆಯ ಬೇಲೇಕೇರಿಯಲ್ಲಿ ಯಡ್ಡಿ ಸರ್ಕಾರ ಕೊಟ್ಟಿತ್ತು. ಅದಿರು ಉದ್ಯಮಿ ಜೆ.ಎ
ಕಂಪನಿ ಹೆಸರಲ್ಲಿ ಅಸ್ನೋಟಿಕರ್‌ನ 'ಸುವನ್ ಲಾಜಿಸ್ಟಿಕ್ಸ್‌'ಗೆ ಬೇಲೇಕೇರಿಯಲ್ಲಿ ವಾಹನ ನಿಲುಗಡೆಗೆಂದು ಕಾ
೩೦ ಎಕರೆ ಭೂಮಿಯಲ್ಲಿ ಬರೋಬ್ಬರಿ 15 ಎಕರೆ ಯಡ್ಡಿ ಸರ್ಕಾರ ಸ್ಯಾಂಕ್ಷನ್ ಮಾಡಿತ್ತು. ಈ
ಭೂಮಂಜೂರಿ ಬಗ್ಗೆ ತಕರಾರುಗಳು ಎದ್ದಿದ್ದವು. ಇದೆಲ್ಲ ಬುಲ್ಡೋಜ್ ಮಾಡಿದ ಯಡ್ಡಿ ತನ್ನ ಸರ್ಕಾರದ
ನೆರವಾದ ಅಸ್ನೋಟಿಕರ್‌ಗೆ ಯಾವ ಮುಲಾಜೂ ಇಲ್ಲದೆ ಇನಾಮಾಗಿ ಕೊಟ್ಟಿದ್ದರು.

ಅದೇ ರೀತಿ ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ ಅಸ್ನೋಟಿಕರ್‌ಗೆ 4 ಎಕರೆ ಭೂಮಿ ದಾ
ಯಡ್ಡಿ ಕೊಟ್ಟಿದ್ದರು. ಜೊತೆಗೆ ಪ್ರತಿಷ್ಠಿತ ಡಾಲರ್ಸ್ ಕಾಲನಿಯಲ್ಲಿ 50 ಕೋಟಿ ಬೆಲೆಯ ಒಂದು ಎಕರೆ ಜ
ಮಂಜೂರಿ ಮಾಡಿದ್ದರು. ಯಾರದೋ ದುಡ್ಡು ಯಲ್ಲಮ್ಮ ಜಾತ್ರೆ! ಯಡ್ಡಿ ತನ್ನ ಕುರ್ಚಿ ಖಯಾಲಿಗೆ ಕನಾ
ಅಪಾರ ಬೆಲೆಯ ನೆಲ ದಾನ ಮಾಡುವ ಧೂರ್ತತನಕ್ಕೆ ಇಳಿದಿದ್ದು ಅಕ್ಷಮ್ಯವೇ ಸರಿ. ಅನರ್ಹರಿಗೆ ಕಾನೂನುಬಾಹಿ
ಸರ್ಕಾರಿ ಜಮೀನು ಮಂಜೂರಿ ಮಾಡಲು ಯಡ್ಡಿಗೆ ಅಧಿಕಾರ ಕೊಟ್ಟೋರು ಯಾರು?



ಸ್ನೋಟಿಕರ್ ಪಡೆಯುಷ್ಟು ತಾಕತ್ತು ಕಾರವಾರ-ಯಲ್ಲಿ ಬಿಜೆಪಿಗಿಲ್ಲ. ಅಲ್ಲದೇ ಬಿಜೆಪಿ ಬ್ಯಾನರಿನಡಿ ಚಲಿತದಲ್ಲಿ ಸಣ್ಣ-ಪುಟ್ಟ ಅಧಿಕಾರದಲ್ಲಿರುವವರೆಲ್ಲ ರ್ ಬೆಂಬಲಿಗರು ಅಥವಾ ಆತನ ಋಣದಲ್ಲಿ-ಇರುವಂಥವರು. ಅಂದರೆ ಬಿಜೆಪಿಗಿಲ್ಲಿ ನೆಲೆ-

ಆದರೆ ಅಸ್ನೋಟಿಕರ್ ಅವಾಂತರದಿಂದ ಕಾಂಗ್ರೆಸ್ ಮಾತ್ರ ಬೆಚ್ಚಿಬಿದ್ದಿದೆ. ಇಷ್ಟು ದಿನ ಅಸ್ನೋಟಿಕರ್‌ನ ಶತಾಯಗತಾಯ ಎದುರಿಸಿ ಮಾಡಿಕೊಂಡು ಬಂದಿದ್ದ ಕಾಂಗ್ರೆಸ್ಸಿಗರು ಅವನೆಲ್ಲಿ ನುಸುಳಿ ಬಿಡುತ್ತಾನೋ ಎಂಬ ಆತಂಕದಲ್ಲಿದ್ದಾರೆ.

ಕಟ್ಟಲು ಅರ್ಥಾತ್ ಅಸ್ನೋಟಿಕರ್‌ನ ಕೆಡವಲು ಅಕ್ರಮದ ಹಣ ನೀರಿನಂತೆ ಹರಿಸುತ್ತಿರುವ ಲ್ ಕಾರವಾರ ರಾಜಕೀಯದ ಭೂಮಿಕೆ ಸ್ತರುವುದು ಕಂಡು ಚಿಂತೆಗೀಡಾಗಿದ್ದಾರೆ. ಇದಕ್ಕೆ ಇದೆ. ಪುತ್ರವಾತ್ಸಲ್ಯದಿಂದ ಕಾಂಗ್ರೆಸ್ ಎಮ್ಮೆಲ್ಸಿ ಸೇ ಪಾರ್ಟಿಗೆ ದ್ರೋಹವೆಸಗಿ ಸಸ್ಪೆಂಡ್ ಆಗಿದ್ದ ಯಿ ಶುಭಲತಾ ಕಾಂಗ್ರೆಸ್‌ನತ್ತ ವಾಲುತ್ತಿದ್ದಾರೆ. ಜಿ. ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷರಾಗು ಪುಟಗಟ್ಟಲೆ ಅಭಿನಂದನೆ ಜಾಹೀರಾತುಗಳನ್ನು ಕೊಡತೊಡಗಿದ್ದಾರೆ. ಈ ಆಡ್ ಆಟ ! ಇದು ಕಾಂಗ್ರೆಸ್ಸಿಗರಿಗೆ ಗಂಡಾಂತರಕಾರಿ ಗಿ ಗೋಚರಿಸಿದೆ.

ದೆಡೆ ಸಾಕ್ಷಾತ್ ಮುಖ್ಯಮಂತ್ರಿಯೇ ತನ್ನ ಚಿವ'ನಾಗಿದ್ದ ಅಸ್ನೋಟಿಕರ್ ಮೇಲಿನ ಸೇಡು ಲು ಕಾರವಾರಕ್ಕೆ ಬರುವ ಕಾರ್ಯಕ್ರಮ ರೆಡಿಯಾಗಿದ್ದಾರೆ. ಇದೇ ತಿಂಗಳ ಮೂರನೇ ವಾರಕ್ಕೆ ಬಂದು ಹಲವು ಕಾಮಗಾರಿಗಳಿಗೆ , ಉದ್ಘಾಟನೆ ಮಾಡಲಿದ್ದಾರೆ. ಸಾರ್ವಜನಿಕ ಅಸ್ನೋಟಿಕರ್‌ನ ಜನ್ಮ ಜಾಲಾಡಲು ಟೀಮ್ ರ್ಸಲ್ ನಡೆಸಿದೆ. ಬೈ-ಇಲೆಕ್ಷನ್ ನಡೆದರೆ ರ್‌ನ ಮಣಿಸಿ ಪಕ್ಕಾ ಕೇಸರಿ ಬಾವುಟ ಲ್ಲಿ ಹಾರಿಸುವ ಕುತಂತ್ರಗಾರಿಕೆಯಿದು.


ರಕ್ಕೆ ಇಂಜಿನಿಯರಿಂಗ್ ಕಾಲೇಜು ಮಂಜೂರಾ ರ್ ಅಸ್ನೋಟಿಕರ್ ಪ್ರಯತ್ನದಿಂದ. ತನ್ನ ಎದುರಾಳಿ ಲ್ ಖಾಸಗಿ ಇಂಜಿನಿಯರಿಂಗ್ ಕಾಲೇಜೇ ಸ್ಥಾಪಿಸಿಬಿಟ್ಟರೆ ಅದು ತನಗೆ ಹಿನ್ನಡೆಯೆಂದು ರ್ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಮಾಡಿಸಿಕೊಂಡಿದ್ದ. ಆ ಜಾಗದಲ್ಲಿ ಬರೀ ವಿತ್ತೇ ವಿನಃ ಇನ್ನಾವುದೇ ಸೌಲಭ್ಯವಿರಲಿಲ್ಲ. ರ್ ಇಂಜಿನಿಯರಿಂಗ್ ಕಾಲೇಜು ಕಟ್ಟಡಕ್ಕೆ ತೆಲ್ಲ ಜಿಲ್ಲಾ ಚಿಡ್ಡಿ ಮಂತ್ರಿ ಕಾಗೇರಿ ಅಡ್ಡಗಾಲು . ಆ ಕಾಲೇಜು ಕಟ್ಟಡ ಶಿಲಾನ್ಯಾಸ ಸಿಎಂ ಕೈಯಿಂದ ಮಾಡಿಸಲು ಕಾಗೇರಿ ಕರಾಮತ್ತು ಒಟ್ಟಿನಲ್ಲಿ ಅಸ್ನೋಟಿಕರ್ ಅನುಪಸ್ಥಿತಿಯಲ್ಲಿ ಅಭಿವೃದ್ಧಿಗೆ ಹಲವು ಕಾರ್ಯಕ್ರಮ ಪ್ರಕಟಿಸಿ ಟ್ಟೂರಲ್ಲೇ ಸೆಡ್ಡು ಹೊಡೆಯಲು ಕಾಗೇರಿ-ಯಡ್ಡಿ ದ್ದಾರೆ. ಅಷ್ಟೇ ಅಲ್ಲ ಅಸ್ನೋಟಿಕರ್ ಮಂತ್ರಿಯಾಗಿ ಪೂರ್ವಕವಾಗೇ ಆತನ ಕ್ಷೇತ್ರದ ಹತ್ತಾರು ಉಲ್ಲಂಘಿಸುವಂತೆ ಮಾಡಿದ್ದ ಕಾಗೇರಿ ಈಗ ಪರಿಹರಿಸಲು ಮುಂದಾಗಿದ್ದಾರೆ. ಕಾಗೇರಿಯ ದು ಜಗಜ್ಜಾಹೀರು ಮಾಡುತ್ತಿದೆ....

ಕಾಗೇರಿಗಳ ಬಣ್ಣ ಬಯಲಾಗಿಸಲು ಅಸ್ನೋಟಿ ಸನ್ನದ್ಧನಾಗುತ್ತಿದ್ದಾನೆ. ಕಾರವಾರ-ಅಂಕೋಲೆಯಲ್ಲಿ ದನ ಭಯ ಹೆಪ್ಪುಗಟ್ಟುತ್ತಿದೆ. ಜೆಡಿಎಸ್‌ನಿಂದ ಯಲು ಸ್ಟ್ರಟಜಿ ಸಿದ್ಧಪಡಿಸುತ್ತಿರುವ ಅಸ್ನೋಟಿ ಪರ ಬಲ್ಲವರು ಬೈ-ಇಲೆಕ್ಷನ್ ಬಂದರೆ ಳಗವೇ ನಡೆಯುತ್ತದೆ ಎನ್ನುತ್ತಿದ್ದಾರೆ. ಒಟ್ಟಿನಲ್ಲಿ -ಕಾಗೇರಿ-ಅಸ್ನೋಟಿಕರ್‌ಗಳ "ಅಂಡರವರ್ಲ್ಡ್ ನಿಂದ ಕಾರವಾರ ಕ್ಷೇತ್ರಕ್ಕೆ ಕೇಡು ಬಂದಿದೆ. ವಾರ ಅಂಕೋಲೆ ತಬ್ಬಲಿಯಾಗಲು-ಶಾಸಕನಿಲ್ಲದ ಲು ಅಧಿಕಪ್ರಸಂಗಿ ಅಸ್ನೋಟಿಕರ್‌ಗಿಂತ ಗಳ ಅಶ್ಲೀಲ-ಪಾತಕ ರಾಜಕಾರಣವೇ ಹೆಚ್ಚು

ಕೆವಲಿಗೆ ಮಾಡಬಾರದ್ದೆಲ್ಲ ಮಾಡುತ್ತಿರುವ ಯಡ್ಡಿ-ರೆಡ್ಡಿಗಳಿಗೆ ಸಮಸ್ಯೆಯ ಸುಳಿಯಲ್ಲಿ ಸುತ್ತಿರುವ ಕಾರವಾರ-ಅಂಕೋಲಿಗರ ಕಣ್ಣೀರ ಇರದು! ಗಟಾರದ ಹಂದಿಗಿಂತಲೂ ಕಾರವಾಗುತ್ತಿರುವ ಶಾಸಕರಿಗೆ ಅಸ್ನೋಟಿಕರ್ ಪಾಠವಾದೀತಾ?

● ನಹುಶ

ದೇವನೂರ ಮಹಾದೇವ ಮಾನಗೆಟ್ಟವರ ನಡುವಲ್ಲೊಂದು ಮಾನವಂತ ಧ್ವನಿ!



ಬಿರಗೆಟ್ಟು ನಿಂತಿರುವ ರಾಜಕೀಯ, ಸಾಂಸ್ಕೃತಿಕ ಪರಿಸರದ ನಡುವೆಯೇ ಈ ನೆಲದ ಪ್ರಜ್ಞಾವಂತರ ಹಂಬಲಿಕೆಗೆ ದೇವನೂರ ಮಹಾದೇವ ಧ್ವನಿಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದಲ್ಲಿ ನೀಡುವ ನೃಪತುಂಗ ಪ್ರಶಸ್ತಿಯನ್ನು ತಿರಸ್ಕರಿಸುವ ಮೂಲಕ....

ಸದ್ಯ ರಾಜ್ಯೋತ್ಸವ ಪ್ರಶಸ್ತಿಯ ಬಕರಿ ಕಾರ್ಯ ಸಮಾಪ್ತಿಗೊಂಡಿದೆ. ಅದನ್ನು ಪಡೆದುಕೊಂಡ ಕೆಲ ಪ್ರಭೃತಿಗಳ ಬಗ್ಗೆ ಅಸಹ್ಯಪಡುತ್ತಾ, ಅಂಥವರ ನಡುವೆ ಕುಂತ ಅರ್ಹರೆಡೆಗೊಂದು ಅನುಕಂಪ ಸೂಸುತ್ತಾ 'ಈ ಅಸಹ್ಯಗಳ ನಡುವೆ ಪ್ರಶಸ್ತಿ ಸ್ವೀಕರಿಸೋದಿಲ್ಲ' ಎಂಬರ್ಥ ಒಂದೇ ಒಂದು ನಿಷ್ಠುರ ಧ್ವನಿಗಾಗಿ ಕಾತರಿಸುತ್ತಾ ನಿರಾಶರಾದವರಿಗೆಲ್ಲ ದೇವನೂರರು ಆಶಾಕಿರಣವೆಂಬಂತೆ ನಡೆದುಕೊಂಡಿದ್ದಾರೆ.

ಇದು 'ಎಲ್ಲಾ ಮಾಮೂಲು ಕಂಡ್ರಿ' ಎಂಬ ವ್ಯವಸ್ಥೆಯೊಂದಿಗಿನ ನೇರ ಹೊಂದಾಣಿಕೆಯು ಕಾಯಿಲೆ ಉಲ್ಬಣಿಸಿರುವ ದರಿದ್ರ ಕಾಲ. 'ಹಿಂದಿನೋರೂ ಹಿಂಗೇ ಇದ್ರು' ಅನ್ನುತ್ತಲೇ ಯಡಿಯೂರಪ್ಪನ ಭ್ರಷ್ಟತೆಯನ್ನು ಒಪ್ಪಿಕೊಳ್ಳುವುದು, ಏನೇ ಲಾಬಿಗಳು ನಡೆದರೂ ಪ್ರಶಸ್ತಿಗಳನ್ನು ಅಪ್ಪಿಕೊಳ್ಳುವುದು-ಇವೆಲ್ಲ ಮೇಲ್ಮಂಡ ವ್ಯಾಧಿ ಉಲ್ಬಣಿಸಿರುವ ಕುರುಹುಗಳೇ.

ಇಂಥದ್ದರ ನಡುವೆ ಬಹು ಅಪೇಕ್ಷಿತ ಬೆಳವಣಿಗೆಯೊಂದಕ್ಕೆ ಪಟ್ಟು ಹಿಡಿದು ರಾಜೀರಹಿತವಾಗಿ ನಡೆದುಕೊಳ್ಳುವವರು ಜಿಗುಟು ಆಸಾಮಿಗಳಂತೆ ಬಿಂಬಿಸಲ್ಪಡುವ ಅಪಾಯವೂ ಇದೆ. ಸದ್ಯ ದೇವನೂರ ಮಹಾದೇವರು ಅದೆಲ್ಲವನ್ನ ಮೀರಿ ನೃಪತುಂಗ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ. ಇದರೊಂದಿಗೆ ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸಿ, ಲಾಬಿ ನಡೆಸಿ, ಜಾತಿ ಕಾರ್ಡನ್ನೂ ಪ್ರದರ್ಶಿಸಿ ಮೆರೆದಾಡುವ ಮಾನಗೇಡಿಗಳ ಬುಡಕ್ಕೂ ಬರೆಯೆಳೆದಿದ್ದಾರೆ.

ಹಾಗಂತ ದೇವನೂರರು ಏಕಾಏಕಿ ಪ್ರಶಸ್ತಿ ತಿರಸ್ಕರಿಸಿ ಸುಮ್ಮನಾಗಿಲ್ಲ, ಬದಲಾಗಿ ಈ ನೆಲದ ಪ್ರಮುಖ ಸಮಸ್ಯೆಯೊಂದನ್ನು ಎತ್ತಿ ಹಿಡಿದಿದ್ದಾರೆ. ಅದು ಶಿಕ್ಷಣಕ್ಕೆ ಸಂಬಂಧಿಸಿದ್ದು. 'ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ರಾಜ್ಯಭಾಷೆ ಅಥವಾ ಮಾತೃಭಾಷೆಯ ಶಿಕ್ಷಣ ಜಾರಿಗೆ ತರುತ್ತೇನೆ' ಅಂತ ಸರ್ಕಾರ ಘೋಷಿಸಿದರೆ, ಅಥವಾ ಕಸಾಪ ಮೇಲ್ಕಂಡ ಬೇಡಿಕೆ ಈಡೇರುವವರೆಗೂ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸದೆ ಹೋರಾಡುತ್ತೇವೆಂದು ಘೋಷಿಸಿದ ಮರುದಿನವೇ ಪ್ರಶಸ್ತಿ ಸ್ವೀಕರಿಸುವುದಾಗಿ ದೇವನೂರರು ಹೇಳಿದ್ದಾರೆ.

ಇಂಥಾ ಇಚ್ಛಾಶಕ್ತಿ ಸರ್ಕಾರಕ್ಕಾಗಲಿ, ಕಸಾಪಕ್ಕಾಗಲೀ ಇದೆಯೇ ಎಂಬುದು ಈ ಹೊತ್ತಿನ ಪ್ರಮುಖ ಪ್ರಶ್ನೆ.

ದೇವನೂರರು ಮುಂದಿಟ್ಟ ಬೇಡಿಕೆಗಳು ಈಡೇರಲಿ ಎಂಬ ಹಾರೈಕೆಯ ಹಿಂದೆ ಈ ನಾಡಿನ ಪ್ರಜ್ಞಾವಂತರೆಲ್ಲರ ಆಶಯಗಳಿವೆ. ಇವು ಈಡೇರದಿದ್ದರೂ ಸಹ ದೇವನೂರರು ಈ ಸಮಾಜಕ್ಕೆ, ಇಂದಿನ ಪೀಳಿಗೆಗೆ ನಿಷ್ಠುರವಾಗಿ ನಡೆದುಕೊಳ್ಳಬಹುದಾದ ಪಾಠವೊಂದನ್ನು ಕಲಿಸಿದ್ದಾರೆ.

ನಿಜವಾಗಿಯೂ ದೇವನೂರರದ್ದು ಮಾನಗೆಟ್ಟವರ ನಡುವಲ್ಲೊಂದು ಮಾನವಂತ ಧ್ವನಿಯಂತೆಯೇ ಕೇಳಿದೆ. ಇದು ಇಮ್ಮಡಿಸಿ ಮಾರ್ದನಿಸುವಂತಾಗಲೆಂಬುದು ಪತ್ರಿಕೆಯ ಹಾರೈಕೆ.


● 'ಲಂಕೇಶ್' ಬಳಗ

ವೈದೇಹಿ ಅವರಿಗೊಂದು ಪತ್ರ

ಪ್ರೀತಿಯ ವೈದೇಹಿ ಅವರೆ,

ನುಡಿಸಿರಿ ಸಾಹಿತ್ಯ ಸಮ್ಮೇಳನದಲ್ಲಿ ನೀವು ಕುಸಿದು ಬಿದ್ದ ಸುದ್ದಿಯನ್ನು 'ಸಮಯ್ ಟಿವಿ' ಚಾನೆಲ್‌ನಲ್ಲಿ ನೋಡಿ ಆತಂಕಗೊಂಡೆ. ಕೂಡಲೇ ನಿಮಗೆ ಫೋನ್ ಮಾಡಬೇಕೆನಿಸಿದರೂ ನೀವು ಮತ್ತು ನಿಮ್ಮ ಮನೆಯವರು ಎಂತಹ ಆತಂಕದಲ್ಲಿದ್ದೀರೋ ಎಂದು ಹೆದರಿ ನುಡಿಸಿರಿ ಸಮ್ಮೇಳನಕ್ಕೆ ಹೋಗಿದ್ದ ಹಲವು ಮಿತ್ರರಿಗೆ ಫೋನ್ ಮಾಡಿದೆ. ಆದರೆ ನನಗೆ ಸಿಕ್ಕ ಹಲವರಲ್ಲಿ ನಿಮ್ಮ ಬಗ್ಗೆ ಮಾಹಿತಿ ಇರಲಿಲ್ಲ; ಮಾಹಿತಿ ಹೊಂದಿದ್ದವರು ವಿವಿಧ ಕಾರಣಗಳಿಗೆ ಫೋನ್ ಎತ್ತಲಿಲ್ಲ.

ಕಡೆಗೆ ವಿಧಿ ಇಲ್ಲದೆ ನಿಮ್ಮ ನಂಬರ್‌ಗೇ ಫೋನ್ ಮಾಡಿದೆ. ಅದನ್ನು ಸ್ವೀಕರಿಸಿದ ನಿಮ್ಮ ಮಗಳು ಪಲ್ಲವಿ "ವೈದ್ಯರು ಪರೀಕ್ಷಿಸಿ ಒಂದೆರಡು ಗಂಟೆ ರೆಸ್ಟ್ ತೆಗೆದುಕೊಳ್ಳೋದಿಕ್ಕೆ ಹೇಳಿದ್ದಾರೆ. ಈಗ ಏನೂ ಸಮಸ್ಯೆ ಇಲ್ಲ, ಅಮ್ಮ ಚೆನ್ನಾಗಿದ್ದಾರೆ" ಎಂದು ಹೇಳಿದರು. ಆದರೂ ನನಗೆ ಎಂತ ಹದ್ದೋ ಆತಂಕ. "ಅದೇನೇ ಇದ್ದರೂ 24 ಗಂಟೆಗಳ ಕಾಲ ಆಸ್ಪತ್ರೆಯಲ್ಲೇ ಡಾಕ್ಟರ್‌ಗಳ ನಿಗಾದಲ್ಲಿ ಇರಲಿ" ಎಂದು ಸೂಚಿಸಿದೆ. ನಿಮ್ಮ ಬಗೆಗಿನ ಸುದ್ದಿ ಕೇಳಿ ಗೆಳತಿ ಆಶಾದೇವಿ ಕೂಡ ಎಷ್ಟು ಆತಂಕಗೊಂಡಿದ್ದರೆಂದರೆ "ಇವತ್ತೇ ಉಡುಪಿಗೆ ಹೋಗಿ ಅವರನ್ನು ನೋಡಿಕೊಂಡು ಬರಬೇಕೆನಿಸುತ್ತಿದೆ" ಎಂದರು. ಆದರೆ ನೀವು ಅಂದೇ ಸಂಜೆ ಮತ್ತೆ ಸಮ್ಮೇಳನಕ್ಕೆ ಹಾಜರಾದಿರಿ ಎಂದು ಕೇಳಿ ನಮ್ಮೆಲ್ಲರಿಗೆ ಸ್ವಲ್ಪ ನೆಮ್ಮದಿ ಆಯಿತು. ಮಿತ್ರ ಕೆ. ಫಣಿರಾಜ್ ಅವರಂತೂ "ಸಮ್ಮೇಳನದ ಅಧ್ಯಕ್ಷತೆಗೆ ವೈದೇಹಿ ದೀರ್ಘವಾದ ಭಾಷಣವನ್ನೇ ತಯಾರಿಸಿಕೊಂಡು ಹೋಗಿದ್ದರು. ಆದರೆ ಇವರದ್ದೋ ಸೂಜಿ ಮಲ್ಲಿಗೆಯಂತಹ ಆಕಾರ. ಜೊತೆಗೆ **low BP** ಬೇರೆ. ಎಲ್ಲ ಒತ್ತಡ ದಿಂದ ಅವರಿಗೆ ಸುಸ್ತಾಗಿರಬಹುದು. ಈಗ ಚೆನ್ನಾಗಿ ದ್ದಾರಲ್ಲ ಸಾಕು" ಎಂದು ನಿಟ್ಟುಸಿರು ಬಿಟ್ಟರು.



ಕುಸಿದು ಬೀಳುತ್ತಿರುವ ವೈದೇಹಿ

ಇದಕ್ಕೆ ಒಂದು ವಾರದ ಹಿಂದೆ ನನ್ನ ಮಗಳು ಇಶಾ ಮತ್ತು ಗೆಳತಿ ಸಬಿಹಾ ಭೂಮಿ ಗೌಡ ಜೊತೆ ನಾನು ನಿಮ್ಮ ಉಡುಪಿ ಮನೆಗೆ ಬಂದಾಗ ನೀವು ಅದೆಷ್ಟು ಪ್ರೀತಿ ಮತ್ತು ವಾತ್ಸಲ್ಯವನ್ನು ತೋರಿದೀರಿ. ನಿಮ್ಮ ಮನೆಗೆ ನಾವೆಲ್ಲ ಊಟಕ್ಕೆ ಬರ ಬೇಕೆಂದು ಒತ್ತಾಯಿಸಿದ್ದಲ್ಲದೆ, "ಸಿಂಪಲ್ ಊಟ ಕಣೆ" ಎಂದು ಹೇಳುತ್ತಲೇ ಸೂಪ್, ಪತ್ರೊಡೆ, ಪಾಯಸ ಸೇರಿದಂತೆ ಅದೆಷ್ಟು ತರಹದ ಅಡುಗೆ ಮಾಡಿದ್ದಿರಿ. ಅಷ್ಟೇ ಅಲ್ಲ, ನೀವೂ ನಮ್ಮೊಂದಿಗೆ ಕೂತು ಊಟ ಮಾಡಬೇಕು ಅಂದರೆ "ಇಲ್ಲ, ಬಡಿಸಿದರೇನೇ ಸಂತೋಷ ಸಿಗೋದು" ಅಂತ ಹಠ ಹಿಡಿದಿರಿ. ಕೊನೆಗೆ ಮಗಳು ಪಲ್ಲವಿ ಎಲ್ಲರಿಗೆ ಬಡಿಸಲು ನಿಂತ ನಂತರವೇ ನೀವು ನಮ್ಮೊಂದಿಗೆ ಕೂತಿದ್ದು.


ಅದಾದ ನಂತರ ಪತ್ರಿಕೆ, ಅಮ್ಮ, ಬೇಬಿ, ಪ್ರಕಾಶನ ಎಲ್ಲದರ ಬಗ್ಗೆ ಅಷ್ಟೇ ಕಾಳಜಿ ಮತ್ತು ಪ್ರೀತಿಯಿಂದ ವಿಚಾರಿಸಿಕೊಂಡಿರಿ. ಇಶಾಳನ್ನು ಅಕ್ಕರೆಯಿಂದ ಮಾತನಾಡಿಸಿದಿರಿ. ನಾವು ಅಲ್ಲಿದ್ದ ಸ್ವಲ್ಪ ಹೊತ್ತಿನಲ್ಲೇ ತಾಯಿಯ ಮಮತೆ, ಬರಹಗಾರ್ತಿಯ ಸೂಕ್ಷ್ಮತೆಯನ್ನು ತೋರಿದಿರಿ.

ನಾವೆಲ್ಲ ಹೊರಟು ನಿಂತಾಗ "ನೀನು ಸ್ವಲ್ಪ ಸೊರಗಿದ್ದೀಯಾ. ಆರೋಗ್ಯ ನೋಡಿಕೋ ಆಯ್ತಾ?" ಎಂದು ನನ್ನ ಬೆನ್ನ ಮೇಲೆ ಕೈಹಾಕಿ ಹೇಳಿದಿರಿ. ನನ್ನದು ಹೇಗೋ ನಡೆಯುತ್ತೆ, ಆದರೆ ನೀವು ಇನ್ನೂ ತುಂಬಾ ಕಾಲ ನಮ್ಮೊಂದಿಗೆ ಇರಬೇಕು. ಇವತ್ತು ರಾಜ್ಯದಲ್ಲಿ ನಡೆಯು ತ್ತಿರುವ SEZ ಗಳೆಂಬ ಭೂದರೋಡೆ, ಕೋಮುವಾದ, ಭ್ರಷ್ಟಾಚಾರ, ಗಣಿ ಲೂಟಿ, ಸ್ತ್ರೀ ಶೋಷಣೆ.... ಇಂತಹ ಎಲ್ಲ ಅವ್ಯವ ಹಾರಗಳ, ಅಸಹ್ಯಗಳ ವಿರುದ್ಧ ದಿಟ್ಟವಾಗಿ ದನಿ ಎತ್ತುವ ನೀವು ಇರಲೇಬೇಕು.

ಆದ್ದರಿಂದ ನೀವೂ ನಿಮ್ಮ ಆರೋಗ್ಯ ನೋಡಿಕೊಳ್ಳಿ, ಆಯ್ತಾ?

ಪ್ರೀತಿಯಿಂದ,

ಗೌರಿ



ತೂಕಡಿಸಿ ತೂಕಡಿಸಿ ಬೀಳದಿರು ತಮ್ಮಾ!

ತಲೆನೋವು, ಆಕಳಿಕೆ, ಆಲಸ್ಯತನ, ಅಸಹ್ಯತನ, ಅನಾಗರಿಕತನ, ಬೇಜವಾಬ್ದಾರಿತನ... ಎಲ್ಲ ಒಟ್ಟೊಟ್ಟಿಗೆ ಮೇಳೈಸಿದರೆ ಹೀಗಾಗುತ್ತಲ್ಲವೇ?

ನವೆಂಬರ್ 1 ರಂದು ಭರ್ಜರಿ 182 ರಾಜ್ಯೋತ್ಸವ ಅವಾರ್ಡು ಕೊಟ್ಟೂಕೊಟ್ಟೂ ಹೈರಾಣಾದ ಈ ರಾಜ್ಯದ ಮುಖ್ಯಮಂತ್ರಿ ಆ ಸಮಾರಂಭದುದ್ದಕ್ಕೂ ಮೇಲಿನಂತೆ ವಿರಾಜಮಾನರಾಗಿ ವಿಜೃಂಭಿಸಿದ್ದರು.....

ಇಂತಹ ಸೀನ್‌ಗಳಿಗೆ ಕಾಯುವ ಮಾಧ್ಯಮಗಳು ಸಿ.ಎಂ. ಸಾಹೇಬರ ಈ ನಿದ್ರಾವತಾರವನ್ನು ಪ್ರಕಟಿಸಲೇ ಇಲ್ಲ, ಕಾರಣ? ಎಲ್ಲ ಪ್ರಮುಖ ಪತ್ರಿಕೆ, ಚಾನೆಲ್‌ಗಳಿಗೆ ತಲಾ ಒಂದು ಅವಾರ್ಡನ್ನು ಯಡ್ಡಿ ವಿತರಿಸಿದ್ದರು!

ಆರೋಗ್ಯ ಸಚಿವನೂರೇ ಸ್ಮಶಾನವಾಯ್ತು!




ಕರ್ನಾಟಕದ ಪಾಲಿಗೆ ಪೀಡೆಗಳಂತೆ ವಕ್ಕರಿಸಿರುವ ರೆಡ್ಡಿ ಪಟಾಲಂನ ತವರು ಜಿಲ್ಲೆ ಬಳ್ಳಾರಿಯೀಗ ಅಕ್ಷರಶಃ ಸ್ಮಶಾನವಾಗಿದೆ. ಭುವನಹಳ್ಳಿಯಲ್ಲಿ ಅವತರಿಸಿ ಹತ್ತಾರು ಹಳ್ಳಿಗಳನ್ನು ಆವರಿಸಿಕೊಂಡಿರುವ ಮಲೇರಿಯಾವೆಂಬ ಮಾರಿ ಇದುವರೆಗೆ ಇಪ್ಪತ್ತೆರಡು ಮಂದಿಯ ಜೀವವನ್ನೇ ಕಿತ್ತುಕೊಂಡಿದೆ. ಇದೆಲ್ಲದರಿಂದಾಗಿ ತ್ರಾಣವಿರುವವರು ಊರು ತೊರೆದು ಹೋದರೆ, ಮಕ್ಕಳು-ಹಿರಿಯರೆನ್ನದೆ ಎಲ್ಲರೂ ಹಾಸಿಗೆ ಹಿಡಿದುಬಿಟ್ಟಿದ್ದಾರೆ.

ರಾಜಕೀಯ ಭಟ್ಟಂಗಿತನಗಳು ಅದೆಂಥಾವಿರುತ್ತವೋ ನೋಡಿ, ಆಗಾಗ ಜನರ ಒಳಿತಿಗಾಗಿ ಯಾವ ತ್ಯಾಗಕ್ಕೂ ಸಿದ್ಧ ಅನ್ನುವ ಆರೋಗ್ಯ ಸಚಿವ ಶ್ರೀರಾಮುಲುನಿಗೆ ತನ್ನದೇ ಜನರ ರೋದನೆ ತಾಕುತ್ತಿಲ್ಲ, ಐದಾರು ಮಂದಿಯ ಹೆಣ ಬೀಳುವವರೆಗೂ ತಲೆ ಕೆಡಿಸಿಕೊಳ್ಳದೆ ಅಡ್ಡಾಡುತ್ತಿದ್ದ ಈತ ಈಗ ಎಚ್ಚೆತ್ತವನಂತೆ ವರ್ತಿಸುತ್ತಿದ್ದಾನಾದರೂ ಜೀವ ತಿನ್ನುವ ಸಾಂಕ್ರಾಮಿಕದಿಂದ ಜನರನ್ನು ಪಾರು ಮಾಡುವಂಥ ನೈಜ ಪ್ರಯತ್ನವನ್ನೇ ಮಾಡುತ್ತಿಲ್ಲ.

ರೆಡ್ಡಿ ಟೀಮಿನ ಮೂಲ ಚಾಳಿ ಜನರ ರೋದನೆಗಳ ನಡುವೆಯೂ ಕೇಕೆ ಹಾಕುತ್ತಿದೆ. ಶ್ರೀರಾಮುಲುನೆಂಬ ಅವಿವೇಕಿ ಊರುತುಂಬಾ ಬ್ಯಾನರುಗಳನ್ನು ನೇತಾಡಿಸಿ, ಗಬ್ಬು ನಾರುವೆಡೆಗೆಲ್ಲಾ ಡಿಡಿಟಿ ಪೌಡರ್ ಎರಚಿ ಡಂಗೂರ ಸಾರುವಂಥ ಗಿಮಿಕ್‌ಗಳನ್ನು ನಡೆಸಿ 'ಸಾಂಕ್ರಾಮಿಕ ತಡೆಗೆ ಶತಪ್ರಯತ್ನ ನಡೆಸಲಾಗುತ್ತಿದೆ' ಅಂತ ಬಿಂಬಿಸ ಹೊರಟಿದ್ದಾನೆ.

ಆದರೆ.... ಜನರ ಜೀವ ಹಿಂಡುತ್ತಿರುವ ಈ ಮಹಾಮಾರಿ ಸಾಂಕ್ರಾಮಿಕ ಬೇರೆಯದೇ ರೀತಿಯ ಪರಿಹಾರ ಬೇಡುತ್ತದೆ. ಸದ್ಯ ಮಲೇರಿಯಾಕ್ಕೆ ಬಲಿಬಿದ್ದವರು ಹಾಗೂ ಹಾಸಿಗೆ ಹಿಡಿದವರೆಲ್ಲ ಬಡಬಗ್ಗರು. ಅವರಲ್ಲಿ ರೋಗ ನಿರೋಧಕ ಶಕ್ತಿ ವಿಪರೀತ ಕಡಿಮೆಯಿರುವುದರಿಂದ ಅದು ವೃದ್ಧಿಸಲು ಪೂರಕವಾಗುವಂಥ ಪಥ್ಯದ ಅಗತ್ಯವಿದೆ. ಹೆಚ್ಚಿನ ಮನೆಗಳಲ್ಲಿ ಎಲ್ಲಾರೂ ಕಾಯಿಲೆ ಬಿದ್ದಿರುವುದರಿಂದ ಊಟ ತಿಂಡಿಗೂ ದಿಕ್ಕಿಲ್ಲದಂತಾಗಿದೆ.





ಆರೋಗ್ಯ ಸಚಿವನಾದಾತನಿಗೆ ಈ ಸೂಕ್ಷ್ಮಗಳು ಅರ್ಥವಾಗಬೇಕು ಇದು ಆದರೆ ಮಾತ್ರ ಗಂಜಿ ಕೇಂದ್ರದಂಥವುಗಳನ್ನು ತೆರೆದು ಆದಷ್ಟು ಪೌಷ್ಟಿಕ ಆಹಾರ ಪೂರೈಸಿ ರೋಗಿಗಳನ್ನು ದೈಹಿಕವಾಗಿ ಬಲಗೊಳಿಸುವ ಪ್ರಯತ್ನಗಳು ನಡೆಯುತ್ತವೆ. ಆದರೆ ಆರೋಗ್ಯ ಸಚಿವನೇ ಶ್ರೀರಾಮುಲುನಂತೆ ಅವಿವೇಕಿಯಾದರೆ, ಬ್ಯಾನರು, ಡಿಡಿಟಿಗಳ ನಡುವಲ್ಲಿ ನಿರಂತರವಾಗಿ ಹೆಣಗಳು ಉರುಳುತ್ತವೆ.

ಪ್ರಸ್ತುತ ಸಾವಿನ ಸಂಖ್ಯೆ ದಿನನಿತ್ಯ ಏರುತ್ತಿರುವುದಕ್ಕೆ ಪ್ರಮುಖ ಕಾರಣ ಈ ಭಾಗದ ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆ. ಇವುಗಳ ಭಯಾನಕ ಕಾರ್ಯವೈಖರಿಯಿಂದ ರೋಸುತ್ತಿರುವ ಜನತೆ ನಂಬಿಕೆ ಕಳೆದುಕೊಂಡುಬಿಟ್ಟಿದ್ದಾರೆ. ಯಾಕೆಂದರೆ ಇಲ್ಲಿ ಮಲೇರಿಯಾ ಗುಳಿಗೆಗಳನ್ನು ನೀಡಲಾಗುತ್ತದೆಯೇ ವಿನಃ ಗ್ಲೂಕೋಸ್, ರೋಗನಿರೋಧಕ ಔಷಧಿಗಳು ಅಷ್ಟಾಗಿ ಲಭ್ಯವಿರುವುದಿಲ್ಲ, ಇದರಿಂದಾಗಿ ಬಹುತೇಕರು ಖಾಸಗಿ ಆಸ್ಪತ್ರೆಗಳಿಗೇ ಮೊರೆ ಹೋಗುವಂತಾಗಿದೆ. 'ಸರ್ಕಾರಿ ದವಾಖಾನಿಗೋದ್ರೆ ಜೀವ ಉಳಿಯಾಂಗಿಲ್ರಿ' ಎಂಬ ಮನಸ್ಥಿತಿ ಹಳ್ಳಿಗರಲ್ಲಿ ಬಲಗೊಂಡಿದೆ.

ಶ್ರೀರಾಮುಲುವಿಗೆ ನೈಜ ಕಳಕಳಿಯಿದ್ದಿದ್ದರೆ, ಖಾಸಗಿ ಆಸ್ಪತ್ರೆಯಲ್ಲಿ ಸಿಗುವ ಫೆಸಿಲಿಟಿಗಳನ್ನು ಸರ್ಕಾರಿ ದವಾಖಾನೆಗಳಲ್ಲೂ ಸಿಗುವಂತೆ ನೋಡಿಕೊಳ್ಳುತ್ತಿದ್ದ. ಆದರೀಗ ಸರ್ಕಾರಿ ಆಸ್ಪತ್ರೆಗಳ ವೈದ್ಯರುಗಳು ಹಳ್ಳಿಗಳಿಗೆ ನುಗ್ಗಿ ಮಲೇರಿಯಾ ಗುಳಿಗೆ ಕೊಟ್ಟು ವಾಪಾಸಾಗುತ್ತಿದ್ದಾರೆ. ಇದರಿಂದ ಅಂಥಾ ಉಪಯೋಗವೇನೂ ಆಗುತ್ತಿಲ್ಲ, ಬದಲಾಗಿ ಸಾವಿನ ಸಂಖ್ಯೆ ವೃದ್ಧಿಸಲು ಪರೋಕ್ಷವಾಗಿ ಕಾರಣವಾಗುತ್ತಿದೆ. ಹಾಗೂ ನೋಡಹೋದರೆ ಇದು ಅಸೀಮ ನಿರ್ಲಕ್ಷತನದಿಂದಲೇ ಅವತರಿಸಿದ ಸಮಸ್ಯೆಯೆಂಬುದು ಸ್ಪಷ್ಟವಾಗುತ್ತದೆ. ಕಳೆದ ಮಾರ್ಚ್ ತಿಂಗಳಲ್ಲೇ ಇಲ್ಲಿ ಇಬ್ಬರು ಕಾಯಿಲೆ ಬಿದ್ದು ಸತ್ತಿದ್ದರು. ಆ ಸಂದರ್ಭದಲ್ಲೇ ಸ್ಥಳೀಯ ಆಡಳಿತ ಸ್ವಚ್ಛತೆಗೆ ಮುಂದಾಗಿದ್ದರೆ ಈ ದುರಂತವನ್ನು ತಪ್ಪಿಸಬಹುದಾಗಿತ್ತು.

ಇದೆಲ್ಲದರ ನಡುವೆಯೇ ಖುದ್ದು ಶ್ರೀರಾಮುಲುನೇ ಇಡೀ ರಾಜ್ಯದಲ್ಲಿ ಹದಿನಾರು ಸಾವಿರಕ್ಕೂ ಹೆಚ್ಚು ಮಂದಿಗೆ ಮಲೇರಿಯಾ ಇದೇ ಅಂತ ಹೇಳಿಕೊಂಡಿದ್ದಾನೆ. ಅದನ್ನು ಹೊಡೆದೋಡಿಸಲು ಪ್ರಯತ್ನಿಸುವ ಬಗ್ಗೆಯೂ ಮಾತನಾಡಿದ್ದಾನೆ. ವಾಸ್ತವವೆಂದರೆ ಇಡೀ ರಾಜ್ಯಾದ್ಯಂತ ಯಾವ ಹಳ್ಳಿಯಲ್ಲೂ ಅದಕ್ಕೆ ಪೂರಕವಾದ ವಾತಾವರಣವಿಲ್ಲ! ಯಾಕೆಂದರೆ, ಇಲ್ಲಿನ ಅಸಂಬದ್ಧ ಆಡಳಿತ ವೈಖರಿಯೇ ಹಾಗಿದೆ. ನಮ್ಮ ಪ್ರತೀ ಗ್ರಾಮ ಪಂಚಾಯ್ತಿಗಳಿಗೆ ಸರ್ಕಾರದ ಕಡೆಯಿಂದ ವರ್ಷಕ್ಕೆ ಆರು ಲಕ್ಷ ಅನುದಾನ ಬರುತ್ತದೆ. ಇದರಲ್ಲಿ ವಿದ್ಯುತ್ ಬಿಲ್ ಮೊತ್ತ ಅಂತ ನಾಲ್ಕು ಲಕ್ಷ ಕಸಿದುಕೊಳ್ಳುವ ಜಿಲ್ಲಾಡಳಿತ ಎರಡು ಲಕ್ಷ ಮಾತ್ರ ಬಿಡುಗಡೆ ಮಾಡುತ್ತದೆ. ಇದರಲ್ಲಿ ಗ್ರಾ.ಪಂ. ಆಡಳಿತ ವರ್ಗ ಸಿಬ್ಬಂದಿ



ನಿರ್ವಹಣೆ ಮಾಡಲು ಮಾತ್ರ ಸಾಧ್ಯವಾಗುತ್ತ

ನೆನಪಿರಲಿ, ಯಾವುದೇ ವಿಚಾರದಲ್ಲಿ ಗ್ರಾ ಯ್ತಿಗಳಿಗೆ ಅನುದಾನ ಅಂತ ಬಂದರೂ ವಿಚಾರಕ್ಕೆಂದು ಬಿಡಿಗಾಸೂ ಬರುವುದಿಲ್ಲ!


ಗ್ರಾಮ ಪಂಚಾಯ್ತಿಗಳಲ್ಲಿ ಸಾಕ್ಷಿಗೆಂಬಂತೆ ಸೊ ಫೈರಿಂಗ್ ಮೆಷಿನ್‌ಗಳಿರುತ್ತವೆ. ಇದನ್ನು ಒ ಉಪಯೋಗಿಸಲು ಇಪ್ಪತ್ತು ಸಾವಿರ ರೂಪಾಯಿ ತ್ತದೆ. ನೀರಿಗೆ ಬ್ಲೀಚಿಂಗ್ ಪೌಡರ್ ಹಾಕಲು 3 ಖರ್ಚಾಗುತ್ತದೆ. ಇದೆಲ್ಲವನ್ನು ಎಲ್ಲಿಂದ ಭರಿಸ

ಈ ಮಲೇರಿಯಾದಂಥ ಸಾಂಕ್ರಾಮಿಕಕ್ಕೆ ವಾತಾವರಣವೇ ಪ್ರಮುಖ ಕಾರಣ. ಬಳ್ಳಾರಿಯ ಇಂದು ಸ್ಮಶಾನವಾಗಿರುವುದಕ್ಕೂ ಸಹ ಇದೇ ಮಲೇರಿಯಾದ ಕಪಿಮುಷ್ಟಿಗೆ ಸಿಲುಕಿರುವ ಗಾದಿ ತೆಗೆದುಕೊಂಡರೆ, ಈ ಗ್ರಾಪಂ ವ್ಯಾಪ್ತಿಯ 4-5 ಒಬ್ಬನೇ ಒಬ್ಬ ಪೌರಕಾರ್ಮಿಕನಿದ್ದಾನೆ! ರಾಜ್ಯ ಕಡೆಗಳಲ್ಲಿ ಇದೇ ಪಾಡಿದೆ. ಇಂಥ ಸಂದರ್ಭದ ಕಾಪಾಡುವುದು, ಸಾಂಕ್ರಾಮಿಕಗಳಿಂದ ಜನರನ್ನ ಮಾಡುವುದು ಮುಂತಾದ ಬಡಬಡಿಕೆಗಳು ಯಂತೆಯೇ ಕಾಣಿಸುತ್ತವೆ. ಶ್ರೀರಾಮುಲು ಆರೋಗ್ಯ ಸಚಿವನಂತೆ ವರ್ತಿಸಿ ಅಗತ್ಯ ಕೆಲಸಗಳನ್ನು ಮಾಡಬೇಕಿದೆ. ಬೂಟಾಟಿಕೆಯನ್ನು ಬದಿಗೆ ಸರಿ ತವರು ಜಿಲ್ಲೆಯ ಜನರನ್ನು ಸಾಂಕ್ರಾಮಿಕದ ಪಾರುಮಾಡಬೇಕಿದೆ. ಜೊತೆಗೆ ಈ ರೋಗ ಹರಡದಂತೆ ತಡೆಯಲು ಸೂಕ್ತ ಕ್ರಮ ಕೈಗೊ

ಇದೆಲ್ಲದರ ಜೊತೆಗೆ ಗ್ರಾಮ ಪ ಮಟ್ಟದಿಂದಲೇ ಸ್ವಚ್ಛತೆಗೆ ಒತ್ತು ನೀಡುವುದು ಖಾತೆಯ ಜವಾಬ್ದಾರಿ. ಅದನ್ನು ನಿಭಾಯಿಸ ಶ್ರೀರಾಮುಲುಗಿದೆಯೆ?

ನಾರಿಯ ಸೀರೆ ಕದ್ದ ಯಡ್ಡಿ

ನೇಕಾರನ ಬದುಕು ಬರ್ಬಾದ್!



ನೆಮಗೆ ಆಶ್ರಯ ನೀಡುವ ಭೂಮಿಯಿಂದ ಹಿಡಿದು ಅದರಿಂದ ಬೆಳೆಯುವ ಬೆಳೆಯ ಸಮೇತ ಎಲ್ಲವನ್ನು ಲೂಟಿ ಮಾಡುವುದರಲ್ಲಿ ಲಂಪಟ ಮಹಾಶಯರು ಎಂಬ ಪ್ರಶಸ್ತಿಗೂ ಪಾತ್ರವಾಗಿರುವ ಕಡು ಭ್ರಷ್ಟ ಯಡ್ಡಿ ಸರಕಾರದ ಕಾಕದೃಷ್ಟಿ ಸೀರೆಯತ್ತ ಹೊರಳಿಕೊಂಡಿದೆ. ಭಾಗ್ಯಲಕ್ಷ್ಮಿ ಯೋಜನೆಯಡಿ ರಾಜ್ಯದ ನಾರಿಯರಿಗೆ ಸೀರೆ ಹಂಚುವ ನೆಪದಲ್ಲಿ ಕೋಟಿ, ಕೋಟಿ ನುಂಗಲು ಪಾಪಿ ಸರ್ಕಾರ ಬಾಯ್ತೆರೆದಿದೆ.

ರಾಜ್ಯದ ನೇಕಾರರು ಕೈಮಗ್ಗದಿಂದ ನೇಯ್ದ ಸೀರೆಗಳನ್ನ ಮಾರಲಾಗದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ಬಗ್ಗೆ ತಲೆ ಕೆಡಿಸಿಕೊಳ್ಳದ ಯಡ್ಡಿ ದೂರದ ಸೂರತ್‌ನಿಂದ ಮಾರವಾಡಿಗಳ ಮುಖಾಂತರ ಸೀರೆಗಳನ್ನ ಖರೀದಿಸಹತ್ತಿದ್ದಾರೆ. ಇದನ್ನ ಕಂಡು ರಾಜ್ಯದ ನೇಕಾರರ ಕುಟುಂಬ ಕೈಮಗ್ಗ ನಿಗಮದ ಕಚೇರಿ ಮುಂದೆ ಸರಕಾರದ ಶವಸಂಸ್ಕಾರ ಮಾಡಿ ತಿಥಿ ಆಚರಣೆ ಮೂಲಕ ಹಿಡಿ ಶಾಪ ಹಾಕುತ್ತಿವೆ.

ಬಡ ನೇಕಾರರ ಪ್ರತಿಭಟನೆ ಸೀರೆಯ ಫಲಾನುಭವಿಗಳ ವಿರುದ್ಧವಲ್ಲ, ಬದಲಾಗಿ ಸೀರೆಗಳು ಇಲ್ಲೇ ಸಿಕ್ಕರೂ ಪರ ಊರಿಂದ ತರಿಸಿಕೊಳ್ಳುತ್ತಿರುವ ಯಡ್ಡಿ ಸರ್ಕಾರದ ದುಷ್ಟತನದ ವಿರುದ್ಧ. "ಹುಟ್ಟಿದ ಮನುಷ್ಯನ ಮಾನ ಮುಚ್ಚುವ ನಾವೇ ಬೆತ್ತಲಾಗಿದ್ದೇವೆ. ಸೂರು ಇಲ್ಲದೆ, ಕಸಬಿಗೆ ತಕ್ಕ ಕೂಲಿ ಇಲ್ಲದೆ, ಇದ್ದ ಕೆಲಸವನ್ನು ಕಳೆದುಕೊಂಡು ಫುಟ್‌ಪಾತಿನಲ್ಲಿ ನಿಂತಿದ್ದೇವೆ. ನಮಗೂ ಬದುಕಿದೆ. ಸರಕಾರಿ ಯೋಜನೆಗಳಿಗೆ ನಮ್ಮಿಂದಲೇ ವಸ್ತ್ರಗಳನ್ನು ಖರೀದಿಸಿ ಕನಿಷ್ಠ ಕೂಲಿಯಾದರು ಕೊಡಿ" ಎಂದು ನೇಕಾರರ ಕುಟುಂಬಗಳು ಯಡ್ಡಿ ಸರಕಾರವನ್ನು ಅಂಗಲಾಚಿವೆ.

ರಾಜ್ಯದಲ್ಲಿನ ಎಂಟು ಲಕ್ಷ ಜನರ ಉಸಿರು ಈ ವೃತ್ತಿಯಲ್ಲಿ ಅಡಗಿದೆ. ಇವತ್ತು ಇವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಕೂಡಾ ಸರಕಾರಗಳು ಕೈಗೊಂಡ ನಿರ್ಲಕ್ಷ್ಯವೇ ಕಾರಣ. ಆಡಳಿತ ಶಾಹಿಯ ಕಮೀಷನ್, ಭ್ರಷ್ಟಾಚಾರ, ಅಧಿಕಾರದ ಲಾಲಸೆಗಳೇ ನೇಕಾರನನ್ನು ಇಂದು ಬೆತ್ತಲಾಗಿ ನಿಲ್ಲುವಂತೆ ಮಾಡಿವೆ. ಯಡ್ಡಿ ಸರಕಾರದ ಕರ್ಮದ ಫಲವೆಂಬಂತೆ ಸುಮಾರು 25 ಸಾವಿರ ಕೈಮಗ್ಗಗಳು ಕೈಕೆಲಸವಿಲ್ಲದೆ ಸದ್ದು ಮಾಡದೆ ನಿಂತುಹೋಗಿವೆ.

ಓಟ್ ಬ್ಯಾಂಕ್ ಲಕ್ಷ್ಮಿ!

ಭಾಗ್ಯಲಕ್ಷ್ಮಿ ಎಂಬುದು ಬಿಜೆಪಿ ಪಕ್ಷ ಗ್ರಾಮ ಮಟ್ಟದಲ್ಲಿ ತನ್ನ ತಳ ಗಟ್ಟಿಗೊಳಿಸಿಕೊಳ್ಳುವ ಒಂದು ಮಹತ್ವಾಕಾಂಕ್ಷಿ ಯೋಜನೆ. ತಾ.ಪಂ. ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯ ಪೂರ್ವ ತಯಾರಿ ಇದರಿಂದಲೇ ಆರಂಭವಾಗಿದೆ.

ನಾಡಿನ 11 ಲಕ್ಷ ಭಾಗ್ಯಲಕ್ಷ್ಮಿ ಫಲಾನುಭವಿಗಳನ್ನು ಸಮಾವೇಶಗಳ ಮೂಲಕ ಒಗ್ಗೂಡಿಸಿ ಅಡ್ವಾನ್ಸ್ ಆಗಿ ಸೀರೆಯ ರೂಪದಲ್ಲಿ ಲಂಚ ನೀಡಿ ಸಂತೋಷಗೊಳಿಸುವ ಮಾಸ್ಟರ್ ಪ್ಲಾನಿದು. ಬಹುತೇಕ ನಾರಿಯರು ಯಡ್ಡಿ ಕೊಡುವ ಸೀರೆಯನ್ನ "ಇದೇನ ಚಹಾ ಸೋಸುವ ಅರಿಬೆಯಾಗ್ಯತಿ" ಅಂತಾರೆ! ಆದರೆ ಪ್ರತಿ ಸೀರೆಗೆ ಸರಕಾರ ಕೊಡುತ್ತಿರುವುದು ರೂ. 220/-ಗಳನ್ನ. 11 ಲಕ್ಷ ಸೀರೆಗಳಿಗೆ ಯಡ್ಡಿ ಪೇಮೆಂಟ್ ಮಾಡಿದ್ದು ಬರೋಬ್ಬರಿ 24.20 ಕೋಟಿ ರೂ. ಆದರೆ ಇಲ್ಲಿಯ ನೇಕಾರರಿಗೆ ಸಿಕ್ಕಿದ್ದು ತೆಂಗಿನಕಾಯಿ ಚಿಪ್ಪು ಬಿಟ್ಟರೆ ಬೇರೇನೂ ಇಲ್ಲ.



ಉತ್ತರ ಕರ್ನಾಟಕದ ಪ್ರಸಿದ್ಧ ಇಳಕಲ್, ಬಾಗಲಕೋಟೆ ಜಿಲ್ಲೆಯ ಬನಹಟ್ಟಿ, ರಬಕವಿ, ಮುಧೋಳ, ಮಹಾಲಿಂಗಪುರ, ಗೋಕಾಕ, ಯರಗಟ್ಟಿ, ಬೆಳಗಾಂವ ಜಿಲ್ಲೆಯ ಹುಕ್ಕೇರಿ, ಸಂಕೇಶ್ವರ, ನಿಪ್ಪಾಣಿ, ಗದಗ ಜಿಲ್ಲೆಯ ಶಿಗ್ಲಿ, ಹುಲಕೋಟಿ, ಬೆಟಗೇರಿ, ರೋಣ ತಾಲೂಕಿನ ಬಹುತೇಕ ಹಳ್ಳಿಗಳು ಅಲ್ಲದೇ ಅಖಂಡ ಧಾರವಾಡ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ದುಡಿಮೆ ಇಲ್ಲದೇ ಕೈಮಗ್ಗಗಳು ಸ್ಥಗಿತಗೊಂಡಿವೆ. ನೇಕಾರ ಅರೆಹೊಟ್ಟೆಯಲ್ಲಿ ಜೀವನ ಸಾಗಿಸುತ್ತಿದ್ದಾನೆ. ಇಷ್ಟೆಲ್ಲಾ ಇದ್ದರೂ ಕೂಡಾ ನಮ್ಮ ಸರಕಾರದ ಯೋಜನೆಗೆ ಬೇರೆ ರಾಜ್ಯದಿಂದ ಸೀರೆ ಖರೀದಿಸುವುದು ಎಷ್ಟು ಸರಿ?

ಸೀರೆ, ಸಮಾವೇಶ, ಅವಿವೇಕ

ಸದ್ಯ ಯಡ್ಡಿ ಕೊಡುತ್ತಿರುವ ಸೀರೆ 30-40 ರೂ.ಗಳದ್ದು. ಸೂರತ್‌ನಲ್ಲಿ ಬಟ್ಟೆಗಳನ್ನ ಕೇಜಿಗಳ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತದೆ. ಈಗ ನೀಡುತ್ತಿರುವ ಸೀರೆ ಪ್ರತಿ ಕೇಜಿಗೆ 150-180 ರೂ. ಇರಬಹುದು. ಹಾಗಾದರೆ ಕೆಜಿಗೆ 5-6 ಸೀರೆ ಬರುತ್ತೆ. ಅದಕ್ಕೆ ಇವತ್ತು ಈ ಸರಕಾರ ಖಜಾನೆಯಿಂದ ಖರ್ಚು ಹಾಕಿರುವುದು ಪ್ರತಿ ಸೀರೆಗೆ 220/-ರೂ. ಅಲ್ಲದೇ ಸಮಾವೇಶಕ್ಕೆಂದು ಸುರಿಯುವ ಲಕ್ಷ, ಕೋಟಿಗೆ ಲೆಕ್ಕವಿಲ್ಲ, ಅದೇ ಹಣ ಇಲ್ಲಿನ ನೇಕಾರರ ಕೈಗೆ ತಲುಪಿದ್ದರೆ ಅಥವಾ ಅದೇ ಮೌಲ್ಯದ ಗುಣಮಟ್ಟದ ಸೀರೆ ಖರೀದಿಸಿದ್ದರೆ ರಾಜ್ಯದ ತಾಯಂದಿರು ಮತ್ತೊಂದು ವರ್ಷ ಬಾಳಿಕೆ ಬರುವ ಸೀರೆ ತೊಟ್ಟಂತೆ ಆಗುತ್ತಿರಲಿಲ್ಲವೇ?

ಇವರು ಸಮಾವೇಶಗಳಲ್ಲಿ ಕಣ್ಣೀರಿಟ್ಟು ನಾಟಕವಾಡುತ್ತಿದ್ದರೆ, ಅತ್ತ ನೇಕಾರರ ಕಣ್ಣಿಂದ ರಕ್ತ ಸುರಿಯುತ್ತಿದೆ. ಚುನಾವಣೆ ಭರಾಟೆಯಲ್ಲಿರುವ ಯಡ್ಡಿಗೆ ಇತ್ತ ತಿರುಗಿ ನೋಡಲೂ ಪುರುಸೊತ್ತಿಲ್ಲ, ಈ ಪರಿಸ್ಥಿತಿಯನ್ನ ಅರ್ಥೈಸಿಕೊಂಡು ಸಮಸ್ಯೆಯನ್ನ ಬಗೆಹರಿಸಬೇಕಾದ ಕೈಮಗ್ಗ ಅಭಿವೃದ್ಧಿ ನಿಗಮ ಕೂಡಾ ತನ್ನ ಬೇಕಾಬಿಟ್ಟಿ ಅವ್ಯವಹಾರ ಸುಮಾರು 75 ಕೋಟಿ ನಷ್ಟವನ್ನ ಅನುಭ ಕಳೆದ ಎರಡೂವರೆ ವರ್ಷದಲ್ಲಿ 25 ಕೋಟಿ ಅನುಭವಿಸಿದೆ. ಇನ್ನೊಂದು ತಮಾಷೆ ಎಂದರೆ ಕೇಂದ್ರ ಕಚೇರಿಯನ್ನ 60 ಸಾವಿರ ಬಾಡಿಗೆ 1.60 ಲಕ್ಷ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದ ಅಧಿಕಾರಿಗಳಿಗೆ ಐಷಾರಾಮಿ ವ್ಯವಸ್ಥೆ ಮಾ ನಿಗಮದ ಆಧಾರ ಸ್ತಂಭವಾದ ನೇಕಾರರು ನಿಂತಿರುವಾಗ ಅವರತ್ತ ಕಣ್ಣು ಹಾಯಿಸದೆ, ಅವ ಸಮಸ್ಯೆಯನ್ನು ಲೆಕ್ಕಿಸದೆ ಇವರು ಬಿಂದ ಬದುಕುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಸಚಿ ಅದ್ಯಾವ ಸೀಮೆಯಲ್ಲಿ ಕುಳಿತಿದ್ದಾನೋ?


ಕೈಮಗ್ಗ ನಿಗಮದಲ್ಲಿ ನೇಕಾರರ ಕಲ್ಯಾ ಇದೆ. ನೇಕಾರರ ವಂತಿಗೆ ಪಡೆದರೆ ಆದರ ಪಟ್ಟು ನಿಗಮ, ಸರಕಾರ ವಂತಿಗೆ ಸೇರಿಸಿ ನೇ ಕಾಲದಲ್ಲಿ ಅದನ್ನ ನೀಡಬೇಕು. ಸದ್ಯ ಈ ವಂ ಸಂಗ್ರಹವಾದ ಹಣ 2.70 ಕೋಟಿ. ಆದರೆ ಮುಚ್ಚುವ ಸ್ಥಿತಿಯಲ್ಲಿರುವುದರಿಂದ ಬಟ್ಟೆ ಕ ನೇಕಾರನಿಗೆ ಬಿಡಿಗಾಸು ಕೊಡುವುದೂ ಇವರಿಂದ


ಕಾಯ್ದೆಯನ್ನ ಈ ಸರಕಾರವೇ ಗಾಳಿಗೆ ತ ಕೂಲಿಯನ್ನೂ ಇವರಿಗೆ ನೀಡುತ್ತಿಲ್ಲ, ಪ್ರತಿ ಬಟ್ಟೆ ನೇಯ್ದರೆ ನಿಗಮದಿಂದ 16 ರೂ. ಕೊ ಮೀಟರ್ ನೇಯ್ಗೆ ನೇಯಲು ಒಬ್ಬರಿಗೆ ಎರಡರಿಂ ದಿನ ಬೇಕು. ಅಂದರೆ ಇವರ ಸಂಬಳ ದಿನಕ್ಕೆ 44 132 ರೂ. ಅದರಲ್ಲಿ ಇವತ್ತಿನ ಕಾಲದಲ್ಲಿ ಸಾಧ್ಯವೇ? "ದಿನದ ಕನಿಷ್ಠ ಕೂಲಿ 120/-ರೂ ಪ್ರತಿ ಮೀಟರ್‌ಗೆ 15/- ರೂ. ಆದರೂ ಕೊ ನೇಕಾರ ಸರಕಾರದ ಮುಂದೆ ಅಂಗಲಾಚಿ ಕು


ಚುನಾವಣೆಗಾಗಿ ಭಾಗ್ಯಲಕ್ಷ್ಮಿ ಯೋ ತಾಯಂದಿರಿಗೆ ಸೀರೆ, ಹುಡುಗಿಯರಿಗೆ ಫ್ರಾಕು, ಜೀನ್ಸ್ ಪ್ಯಾಂಟು, ಮುದುಕರಿಗೆ ಜುಬ್ಬಾ ರೈತರಿಗೆ ದೋತ್ರ, ಹಸಿರು ಟವೆಲ್ಲು ಅಂತೆಲ ಯೋಜನೆಗಳನ್ನು ಯಡ್ಡಿ ಹೊರಡಿಸುತ್ತಿದ್ದಾರೆ. ಆ ಘೋಷಿಸಿರುವ ಯೋಜನೆಯ ಹಿಂದೆ ಆ ತಯಾರಿಸುವ, ನೇಯುವ ನೇಕಾರನ ಹೆ ಬೆತ್ತಲೆಯಾಗಿರುವ, ನೇಕಾರ ನೇಣಿಗೆ ಕೊರಳೊಡ್ಡು ಸ್ಥಿತಿ ನೆನಪಿಸಿಕೊಳ್ಳುತ್ತಿಲ್ಲವೇಕೆ? ಕೈಮಗ್ಗ ಕೊನೆಯ ನೇಕಾರ ಏದುಸಿರು ಬಿಡುವುದನ್ನ ನೋಡುವು ಯಡ್ಡಿ ನರಹಂತಕ ಮೋದಿಯ ಗುಜರಾತಿನ ವ್ಯಾಪಾರ ನಡೆಸುತ್ತಿದ್ದಾರೆಯೇ?


– ಹುರುಳಿಕುಪ್ಪಿ

vinaylankesh@









ಎಡವಟ್ಟಾಯ್ತು ಬಿಜೆಪಿ ನಾಲ್ಕು ಹೋಳಾಯ್ತು

ಅಂತೂ-ಇಂತೂ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿ ಆಡಳಿತಾರೂಢ ಪಕ್ಷದಲ್ಲಿನ ಭಿನ್ನಮತೀಯ ಚಟುವಟಿಕೆಗಳು ಮೆಗಾ ಸೀರಿಯಲ್‌ನಂತೆ ನಿತ್ಯವೂ ನಡೆಯುತ್ತಲೇ ಇವೆ. ಅದೇನೇ ಇದ್ದರೂ ಯಡ್ಡಿಗೆ ಸ್ಥಿರತೆ ಎನ್ನುವುದಿಲ್ಲ, ರಾಜ್ಯದ ಜನರಿಗೆ ನೆಮ್ಮದಿ ಎನ್ನುವುದಿಲ್ಲ. ಯಾವ ಪುರುಷಾರ್ಥಕ್ಕೆ ಈ ಚೆಡ್ಡಿ-ಯಡ್ಡಿ-ರೆಡ್ಡಿಗಳನ್ನು ರಾಜ್ಯದ ಜನ ಆಯ್ಕೆ ಮಾಡಿಕೊಳ್ಳಬೇಕಿತ್ತು?

...ನ್ನೆ (ಮಂಗಳವಾರ) ಯಡ್ಡಿಯ ಸಂಪುಟ ಪುನರ್ರಚನೆ ...ಕಸ್ಮಾತ್‌ಗಾಗಿ ರದ್ದಾಗಿದ್ದು ಆಡಳಿತಾರೂಢ ಬಿಜೆಪಿ ...ಲ್ಲಿ ದೊಡ್ಡ ಎಡವಟ್ಟಾಗಿರುವುದನ್ನು ಸ್ಪಷ್ಟವಾಗಿ ...ಸುತ್ತದೆ.

...ಖ್ಯಮಂತ್ರಿ ಯಡಿಯೂರಪ್ಪ ಎಂತಹ ರಾಜಕೀಯ ...ಲ್ಲಿ ಸಿಕ್ಕಿಕೊಂಡು ವಿಲವಿಲನೇ ಒದ್ದಾಡುತ್ತಿದ್ದಾರೆ ...? ಕನ್ನಡ ಚಿತ್ರಗಳಲ್ಲಿ ನಾಯಕನಟ ಕ್ಲೈಮ್ಯಾಕ್ಸ್‌ನಲ್ಲಿ ...ರು ವಿಲನ್‌ಗಳ ಜೊತೆ ಹೊಡೆದಾಡುವುದನ್ನು ...ನೋಡಿದ್ದೀರಿ. ಅದೇ ರೀತಿ ಪಕ್ಷದೊಳಗಿನ ಮೂವರು ...ಗಳ ಜೊತೆಗೆ ಬಿಜೆಪಿ ಸರ್ಕಾರದ ನಾಯಕ ಯಡ್ಡಿ ...ಹೋರಾಡುತ್ತಿದ್ದಾರೆ.

...ಗೆ ನೋಡಿದರೆ ಬಳ್ಳಾರಿಯ ಗಣಿದಣಿಗಳಾದ ...ನ ರೆಡ್ಡಿ ಒಂದೆಡೆ, ಯಡ್ಡಿಯ ಸಾಂಪ್ರದಾಯಿಕ ...ವಾದ ಅನಂತಕುಮಾರ್ ಇನ್ನೊಂದೆಡೆ.. ಇವರಿಬ್ಬರೂ ... ಯಡ್ಡಿ ವಿರುದ್ಧ ಕತ್ತಿ ಮಸೆಯುವುದು ಎಲ್ಲರಿಗೂ ...ನ್ನಾಗಿ ಗೊತ್ತಿದೆ. ಆದರೆ ಈಗ ರಾಜಕೀಯದಾಟದ ...ಮ್ಯಾಕ್ಸ್‌ನಲ್ಲಿ ದಿಢೀರನೆ ಮೂರನೆ ವಿಲನ್ ಆಗಿ ...ಕೊಂಡಿರುವ ಮತ್ತೊಬ್ಬ ವ್ಯಕ್ತಿ ಎಂದರೆ ಯಡ್ಡಿಯ ...ವರೇ ಆದ ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪ!

...ದ ಸಂಪುಟ ಪುನರ್ರಚನೆಯ ಸಂದರ್ಭದಲ್ಲಿ ಯಡ್ಡಿಗೆ ... ಹೆಗಲು ಕೊಟ್ಟು ಯಶಸ್ವಿಯಾಗಿ ಸಂಪುಟ ...ಚನೆ ಆಗುವಂತೆ ನೋಡಿಕೊಂಡಿದ್ದ ಈಶ್ವರಪ್ಪ ಅಂದು ...ವರೇ ಅಡ್ಡಿ ಮಾಡಿದರೂ ಪುನರ್ರಚನೆ ತಡೆಯಲು ...ಲ್ಲ" ಎಂದು ಗುಡುಗಿದ್ದರು. ಆದರೆ ನಿನ್ನೆ ನವೆಂಬರ್ ... ನಡೆಯಬೇಕಾಗಿದ್ದ ಸಂಪುಟ ಪುನರ್ರಚನೆಗೆ ಇದೇ ... ಅಡ್ಡಗಾಲಾಕಿದರು. ಈಶ್ವರಿ ಇಂತಹ ಎಡವಟ್ಟನ್ನು ...ತ್ತಾರೆಂದು ಯಡ್ಡಿ ಕನಸುಮನಸ್ಸಿನಲ್ಲೂ ಊಹಿಸಿರ...

... ಈಶ್ವರಪ್ಪನಿಂದಾಗಿ ಈಗ ಬಿಜೆಪಿ ಪಕ್ಷದಲ್ಲಿ ಹೊಸ ...ಲ ಉಂಟಾಗಿದೆ. ಮೊನ್ನೆಮೊನ್ನೆಯವರೆಗೂ ...ಗುವ ಕನಸು ಕಾಣುತ್ತಿದ್ದ ಬಿಜೆಪಿ ಶಾಸಕರು ...ತೀಯ ಚಟುವಟಿಕೆ ನಡೆಸುತ್ತಿದ್ದು ಯಡ್ಡಿಗೆ ಸಾಕಷ್ಟು ...ವು ನೀಡಿದ್ದರು. ಆದರೊಂದಿಗೆ ಈಗ ಬಿಜೆಪಿಯ ... ಲೆವೆಲ್ ಲೀಡರ್ಸ್‌ಗಳ ನಡುವೆಯೇ ...ಕೊಂಡಿರುವ ಭಿನ್ನಮತ ಪಕ್ಷದ ವರ್ಚಸ್ಸಿಗೆ ಭಾರೀ ...ನ್ನು ತಂದಿದೆ.

...ನ್ನೆ ವಿಧಾನಮಂಡಲದಲ್ಲಿ ನಡೆದ ವಿಶ್ವಾಸಮತದಲ್ಲಿ ...ಡ್ಡಿ ಈಗ ತನ್ನ ಪಕ್ಷದ ನಾಯಕರ ವಿಶ್ವಾಸಮತವನ್ನೇ ...ವಲ್ಲಿ ವಿಫಲರಾಗಿದ್ದಾರೆ. ಎಲ್ಲರಿಗೂ ಈಗ ಗೊತ್ತಿರು... ...ಶ್ವಾಸಮತ ಯಾಚಿಸುವ ಸಂದರ್ಭದ ಕೊನೆಘಳಿಗೆ ...ಳ್ಳಾರಿ ಗಣಿದಣಿ ಜನಾರ್ದನ ರೆಡ್ಡಿಯ ಸಾರಥ್ಯದಲ್ಲಿ ...ತ ಪಾಳೆಯದಿಂದ ಬಿಜೆಪಿಗೆ ಬಂದು ಯಡ್ಡಿ ...ವನ್ನು ಉಳಿಸಿದ್ದ ವರ್ತೂರು ಪ್ರಕಾಶ್ ಮತ್ತು ...ಗೌಡ ಎಂಬ 'ಹಾರುವ ಹಕ್ಕಿ'ಗಳಿಗೆ ಮಂತ್ರಿ ಸ್ಥಾನ ...ವುದಾಗಿ ಯಡ್ಡಿ ಮಾತು ಕೊಟ್ಟಿದ್ದರು. ಅದಕ್ಕೆ ...ಗಿ ಈ ಇಬ್ಬರು ಶಾಸಕರೂ "ನಮಗೆ ನೀವು ಹಣ ...ವುದು ಬೇಡ, ಮಂತ್ರಿ ಪದವಿ ನೀಡಿದರೆ ಸಾಕು" ... ಶರತ್ತು ಹಾಕಿದ್ದರಂತೆ.

...ಗೆಯೇ ಇವರಿಬ್ಬರನ್ನು ಯಾವುದೇ ಕಾರಣಕ್ಕೂ ...ನಾಗಿ ಮಾಡದಿದ್ದರೆ ಗಣಿದಣಿಗಳ ಆಕ್ರೋಶಕ್ಕೆ ...ತುತ್ತಾಗುತ್ತಾರೆ. ಜೊತೆಗೆ ವರ್ತೂರು ಪ್ರಕಾಶ್‌ರನ್ನು ... ಮಾಡದಿದ್ದರೆ ಆತ ಯಾವುದೇ ಗಳಿಗೆಯಲ್ಲಿ ...ಭಿನ್ನಮತ ಪಾಳೆಯಕ್ಕೆ ಲಾಂಗ್‌ಜಂಪ್ ಮಾಡಿ ...ವನ್ನು ಇಕ್ಕಟ್ಟಿಗೆ ಸಿಕ್ಕಿಸುವ ಅಪಾಯವೂ ಇದ್ದೇ ...ಆದ್ದರಿಂದ ಇವರಿಬ್ಬರ ಹೆಸರುಗಳು ಯಡ್ಡಿಯ ...ಲ್ಲಿ ಸ್ಥಾನ ಪಡೆದವು.

...ಸ್ತವವಾಗಿ ಒಟ್ಟು ಆರು ಮಂತ್ರಿಗಳನ್ನು ಸಂಪುಟಕ್ಕೆ ...ಳ್ಳಲು ಅವಕಾಶವಿದ್ದರೂ ಯಡ್ಡಿ ಇವರಿಬ್ಬರನ್ನು ... ಈಗ ತಮ್ಮ ಸಂಪುಟಕ್ಕೆ ತೆಗೆದುಕೊಳ್ಳಲು ...ದ್ದರು. ಡಿಸೆಂಬರ್‌ನಲ್ಲಿ ಜಿಲ್ಲಾ ಪರಿಷತ್ ಚುನಾವಣೆ ...ನಂತರ ಉಳಿದ ಸ್ಥಾನಗಳನ್ನು ಭರ್ತಿ ಮಾಡುವುದು ...ಬುದು ಯಡ್ಡಿಯ ರಾಜಕೀಯ ಲೆಕ್ಕಾಚಾರವಾಗಿತ್ತು. ...ದರ ವಿರುದ್ಧ ಮೊದಲು ಕ್ಯಾತೆ ತೆಗೆದದ್ದೇ ಈಶ್ವರಪ್ಪ. ...ದ ಪಕ್ಷಕ್ಕೆ ಹಾರುವ ಶಾಸಕರನ್ನು ಮಾತ್ರ ಮಂತ್ರಿ ...ರೆ ನಿಷ್ಠಾವಂತ ಶಾಸಕರಿಗೆ ಬೇಸರವಾಗಬಹುದು. ...ಣಕ್ಕಾಗಿ ಇಬ್ಬರು ನಿಷ್ಠಾವಂತರನ್ನೂ ಸಂಪುಟಕ್ಕೆ ಈ ...ಲ್ಲೇ ಸೇರಿಸಿಕೊಳ್ಳಬೇಕು" ಎಂದು ಈಶ್ವರಪ್ಪ ಯಡ್ಡಿಗೆ ...ಸಿದರು. ಅಷ್ಟೇ ಅಲ್ಲ, ಈಶ್ವರಪ್ಪನ ಹಿಂಬಾಲಕರಾದ ...ಗಳೂರಿನ ಶಾಸಕ ಸಿ.ಟಿ.ರವಿ ಮತ್ತು ತುಮಕೂರಿನ ...ಸೊಗಡು ಶಿವಣ್ಣರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳಿ ... ಫತ್ವಾ ಹೊರಡಿಸಿದರು ಈಶ್ವರಪ್ಪ!

...ಸಿ ಯಡ್ಡಿಯ ಆಶೆ ಬೇರೆಯದ್ದಾಗಿತ್ತು, ಅಕಸ್ಮಾತ್ ...ನ್ನು ಮಂತ್ರಿ ಮಾಡುವುದಾದರೆ ಈಶ್ವರಿಯ ...ಳ ಬದಲಾಗಿ ತನ್ನ ಹಿಂಬಾಲಕರಾದ ಶೃಂಗೇರಿಯ ... ಮತ್ತು ಬಿಜಾಪುರದ ಅಪ್ಪುಪಟ್ಟಣಶೆಟ್ಟಿಯನ್ನು ... ಮಾಡಬೇಕೆಂಬುದು ಯಡ್ಡಿಯ ಲೆಕ್ಕಾಚಾರವಾಗಿತ್ತು. ಆದರೆ ಈಶ್ವರಪ್ಪ ಅದನ್ನು ಒಪ್ಪಲಿಲ್ಲ, ಯಡ್ಡಿ ತನ್ನ ಹಟ ಬಿಡಲಿಲ್ಲ.

ಯಾವಾಗ ನಾಲ್ಕು ಜನ ಶಾಸಕರನ್ನು ಮಂತ್ರಿ ಮಾಡುವುದು ಅನಿವಾರ್ಯ ಎನಿಸಿತೋ ಆಗ ಮುಖ್ಯಮಂತ್ರಿ ಯಡ್ಡಿ ರಾಜಭವನಕ್ಕೆ ಪುನರ್ರಚನೆಯ ದಿನಾಂಕವನ್ನು ಕಳುಹಿಸಿಕೊಟ್ಟರು. ಮಾಧ್ಯಮಗಳಿಗೂ ಸುದ್ದಿಯನ್ನು ಬಿಟ್ಟರು. ಆದರೆ ಅದೇ ಸಂದರ್ಭದಲ್ಲಿ ತನ್ನ ಹಿಂಬಾಲಕ ಜೀವರಾಜ್‌ಗೆ ಮುಖ್ಯ ಸಚೇತಕನ ಸ್ಥಾನಕ್ಕೆ ರಾಜೀನಾಮೆ ನೀಡಿ ಭಿನ್ನಮತದ ನಾಟಕವಾಡಲು ಸೂಚನೆ ನೀಡಿದರು ಯಡ್ಡಿ! ಅಂದರೆ ಈ ಬಾರಿ ಜೀವರಾಜ್, ಅಪ್ಪಚ್ಚು ರಂಜನ್, ನರಸಿಂಹಸ್ವಾಮಿ, ಕುಮಾರಸ್ವಾಮಿ, ಚಂದ್ರಪ್ಪ.... ಮೊದಲಾದ ಶಾಸಕರ ಭಿನ್ನಮತೀಯ ಡ್ರಾಮದ ಪ್ರಾಯೋಜಕ ಸ್ವತಃ ಯಡ್ಡಿಯೇ!!

ಒಂದೆಡೆ ರೆಡ್ಡಿಗಳ ಹಿಂಬಾಲಕರಾದ ವರ್ತೂರು ಪ್ರಕಾಶ್ ಮತ್ತು ರಾಜುಗೌಡ, ಇನ್ನೊಂದೆಡೆ ಈಶ್ವರಪ್ಪ ಹಿಂಬಾಲಕರಾದ ಸಿ.ಟಿ.ರವಿ ಮತ್ತು ಸೊಗಡು ಶಿವಣ್ಣ -ಈ ನಾಲ್ವರನ್ನು ತನ್ನ ಸಂಪುಟಕ್ಕೆ ಸೇರಿಸಿಕೊಂಡರೆ ತಾನು ಪಕ್ಷದಲ್ಲೇ ಅಶಕ್ತನಾಗಿರುವುದು ಜಗಜ್ಜಾಹೀರಾಗುತ್ತದೆ ಎಂಬುದು ಯಡ್ಡಿಯ ಅಂಜಿಕೆ. ಜೊತೆಗೆ ಯಡ್ಡಿ ಬದಲಿಗೆ ಈಶ್ವರಪ್ಪ ಮತ್ತು ರೆಡ್ಡಿಗಳನ್ನೇ ನಾಯಕರನ್ನಾಗಿ ಜನ ನೋಡುತ್ತಾರೆ ಎಂಬ ಬೆದರಿಕೆಯೂ ಯಡ್ಡಿಯನ್ನು ಕಾಡಿತಂತೆ. ಈ ಹಿನ್ನೆಲೆಯಲ್ಲಿ ಯಡ್ಡಿ ಎರಡು ಕಾರ್ಯತಂತ್ರಗಳನ್ನು ಹಮ್ಮಿಕೊಂಡರು. ಅದರಂತೆ ಮೊದಲು ಹೇಗಾದರೂ ಮಾಡಿ ತನ್ನ ಹಿಂಬಾಲಕರಾದ ಜೀವರಾಜ್ ಮತ್ತು ಅಪ್ಪುಪಟ್ಟಣಶೆಟ್ಟಿಗೆ ಮಂತ್ರಿ ಸ್ಥಾನ ಕಲ್ಪಿಸಿಕೊಡುವುದು. ಅದು ಸಾಧ್ಯವಾಗದಿದ್ದರೆ ಸಂಪುಟ ಪುನರ್ರಚನೆಯನ್ನೇ ಕೈಬಿಡುವ ಮೂಲಕ ಈಶ್ವರಪ್ಪನವರ ಹಿಂಬಾಲಕರಾದ ರವಿ ಮತ್ತು ಸೊಗಡು ಶಿವಣ್ಣರನ್ನು ಮಟ್ಟಹಾಕುವುದು.

ಈಗ ಈ ಎರಡನೇ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತರುವ ಮುಖಾಂತರ ಈಶ್ವರಪ್ಪನಿಗೆ ಯಡ್ಡಿ ಸವಾಲು ಹಾಕಿದ್ದಾರೆ. ಅದನ್ನು ಕಂಡು ರೇಗಿದ ಈಶ್ವರಿ ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮವನ್ನೇ ರದ್ದು ಮಾಡಿ ಯಡ್ಡಿಗೆ ಪ್ರತಿ ಸವಾಲು ಹಾಕಿದ್ದಾರೆ.

ಇದೆಲ್ಲದರ ಅರ್ಥ ಇಷ್ಟೇ: ಕರ್ನಾಟಕದಲ್ಲಿ ಆಡಳಿತಾರೂಢವಾದ ಬಿಜೆಪಿ ನಾಲ್ಕು ಹೋಳಾಗಿದೆ. ಒಂದೆಡೆ ರೆಡ್ಡಿ ಗ್ಯಾಂಗಿನ ಬಳ್ಳಾರಿ ಜನತಾ ಪಕ್ಷ, ಇನ್ನೊಂದೆಡೆ ಯಡಿಯೂರಪ್ಪನವರ ಲಿಂಗಾಯತ ಜನತಾ ಪಕ್ಷ, ಮತ್ತೊಂದೆಡೆ ಅನಂತಕುಮಾರ್ ನೇತೃತ್ವದ ಬ್ರಾಹ್ಮಣ ಜನತಾ ಪಕ್ಷ, ಈಗ ಈಶ್ವರಪ್ಪನ ಕುರುಬರ ಗುಂಪು ಸೃಷ್ಟಿಯಾಗಿದೆ.

ಚಿಕ್ಕಮಗಳೂರಿನ ಶಾಸಕ ಸಿ.ಟಿ.ರವಿಯನ್ನು ಯಾವುದೇ ಕಾರಣಕ್ಕೂ ಮಂತ್ರಿ ಮಾಡಲೇಬಾರದು ಎಂಬುದು ಯಡ್ಡಿ ಮಾತ್ರವಲ್ಲ ಚಿಕ್ಕಮಗಳೂರಿನ ಬಹುತೇಕ ಬಿಜೆಪಿ ಶಾಸಕರ ನಿಲುವೂ ಆಗಿದೆ. ಅಷ್ಟೇ ಅಲ್ಲ, ಮಾಜಿ ರಾಜ್ಯಾಧ್ಯಕ್ಷ ಸದಾನಂದಗೌಡ ಕೂಡಾ ರವಿಯ ವಿರುದ್ಧ ಬಾವುಟ ಹಾರಿಸಿದವರೇ. ಇತ್ತ ಗೃಹಮಂತ್ರಿ ಅಶೋಕ್ ಕೂಡಾ ತೆರೆಮರೆಯಲ್ಲಿ ರವಿಗೆ ಅಡ್ಡಗಾಲಾಕುತ್ತಿದ್ದಾರೆ. ಅಂದರೆ ರವಿಯ ವಿರುದ್ಧ ಬಿಜೆಪಿಯಲ್ಲಿನ ಇತರೆ ಒಕ್ಕಲಿಗರು ತಿರುಗಿ ಬಿದ್ದಿದ್ದಾರೆ. ಇದೆಲ್ಲದರಿಂದಾಗಿ ಅಮೋಘ ನಾಲ್ಕನೇ ಬಾರಿಯೂ ರವಿ ಮಂತ್ರಿ ಪದವಿಯಿಂದ ವಂಚಿತರಾಗಿದ್ದಾರೆ.

ಇನ್ನು ತುಮಕೂರಿನ ಸೊಗಡು ಶಿವಣ್ಣನ ವಿಷಯದಲ್ಲೂ ಯಡಿಯೂರಪ್ಪ ತನ್ನದೇ ಲೆಕ್ಕಾಚಾರ ಹಾಕಿಕೊಂಡಿದ್ದರು. ಅದೇನೆಂದರೆ ಶಿವಣ್ಣನನ್ನು ಮಂತ್ರಿ ಮಾಡಲೇಬೇಕು ಎಂಬ ಈಶ್ವರಿಯ ಹಠದ ಹಿಂದೆ ಯಡ್ಡಿಯನ್ನು ಅಶಕ್ತರನ್ನಾಗಿ ಮಾಡುವ ತಂತ್ರವೂ ಅಡಗಿದೆ ಎಂಬುದು ಯಡ್ಡಿಯ ಆಪ್ತರ ಮಾತು. ಯಾಕೆಂದರೆ ಸದ್ಯಕ್ಕೆ ಯಡ್ಡಿಯ ಪರಮಾಪ್ತೆ ಶೋಭ ಕರಂದ್ಲಾಜೆ ತುಮಕೂರು ಜಿಲ್ಲೆಯ ಉಸ್ತುವಾರಿ ಸಚಿವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಿವಣ್ಣನನ್ನು ಮಂತ್ರಿ ಮಾಡಿದರೆ ನಾಳೆ ತುಮಕೂರು ಜಿಲ್ಲೆಯ ಉಸ್ತುವಾರಿ ಜವಾಬ್ದಾರಿಯನ್ನು ಶಿವಣ್ಣನಿಗೆ ಕೊಡಿ ಎಂದು ಈಶ್ವರಪ್ಪ ತಾಕೀತು ಮಾಡಬಹುದು. ಆಗ ಶೋಭಾ ಕರಂದ್ಲಾಜೆಯನ್ನು ಸ್ಥಾನಪಲ್ಲಟ ಮಾಡಿ ಯಾವುದಾದರೂ ಚಿಕ್ಕ ಜಿಲ್ಲೆಗೆ ವರ್ಗಾಯಿಸಬೇಕಾಗುತ್ತದೆ. ಇಂತಹ ಅವಮಾನಕಾರಿ ಪರಿಸ್ಥಿತಿಯನ್ನು ಎದುರಿಸುವ ಬದಲು ಈಗಲೇ ಮೊಳಕೆಯಲ್ಲೇ ಇದನ್ನು ಚಿವುಟಿಹಾಕುವುದು ಒಳ್ಳೆಯದು ಎಂಬುದು ಯಡ್ಡಿಯ ಲೆಕ್ಕಾಚಾರ.

ಇದರ ಜೊತೆಜೊತೆಗೆ ತುಮಕೂರಿನ ಸಿದ್ಧಗಂಗಾ ಮಠದ ಸ್ವಾಮಿಗಳ ಆಶೀರ್ವಾದ ಕೂಡಾ ಸೊಗಡು ಶಿವಣ್ಣನಿಗೆ ಇಲ್ಲವೆಂಬುದು ಯಡ್ಡಿಗೆ ಗೊತ್ತು. ಈ ಹಿಂದೆ ಸಿದ್ಧಗಂಗಾ ಸ್ವಾಮೀಜಿಗಳು ಸೋಮಣ್ಣ ಅವರನ್ನು ಮಂತ್ರಿ ಮಾಡಿ ಎಂದು ಯಡಿಯೂರಪ್ಪನವರಿಗೆ ಆದೇಶ ನೀಡಿದಾಗ ಸ್ವಾಮೀಜಿಯ ಬಗ್ಗೆ ಇದೇ ಸೊಗಡು ಶಿವಣ್ಣ ಸ್ವಲ್ಪ ಹಗುರವಾಗಿ ಮಾತಾಡಿದ್ದರಂತೆ. ಹೀಗಾಗಿ ಸೊಗಡು ಶಿವಣ್ಣ ಅವರನ್ನು ಮಂತ್ರಿ ಮಾಡಲೇಬೇಕೆಂದು ಈಶ್ವರಪ್ಪನವರು ಬಿಟ್ಟರೆ ಬೇರಾರೂ ಒತ್ತಾಯ ಮಾಡಿಲ್ಲವೆಂಬುದು ವಿಶೇಷ. ಹಳೇ ಮೈಸೂರಿನಲ್ಲಿ ಲಿಂಗಾಯತರನ್ನು ಮಂತ್ರಿ ಮಾಡುವ ಬದಲು ಉತ್ತರ ಕರ್ನಾಟಕದ ಲಿಂಗಾಯತ ಶಾಸಕರೊಬ್ಬರನ್ನು ಮಂತ್ರಿ ಮಾಡಿದರೆ ಹೆಚ್ಚು ಲಾಭ ಎಂಬ ಕಾರಣಕ್ಕಾಗಿ ಯಡ್ಡಿ ಬಿಜಾಪುರದ ಅಪ್ಪುಪಟ್ಟಣಶೆಟ್ಟಿ ಬಗ್ಗೆ ಒಲವು ವ್ಯಕ್ತಪಡಿಸಿದ್ದರು.

ಅದೇನೇ ಇದ್ದರೂ ಈ ಬಾರಿಯ ಸಂಪುಟ ಪುನರ್ರಚನೆ ಕುರಿತಂತೆ ಈಶ್ವರಪ್ಪ ಮತ್ತು ಯಡ್ಡಿ ನಡುವೆ ಸಾಕಷ್ಟು ವಾದವಿವಾದಗಳು ನಡೆದಿರುವುದು ಈಗ ಬಹಿರಂಗವಾಗಿದೆ. ಈ ಹಿಂದೆ ಮೈಸೂರಿನ ಇಬ್ಬರು ಶಾಸಕರಾದ ರಾಮದಾಸ್ ಮತ್ತು ವಿಜಯ್ ಶಂಕರ್‌ರನ್ನು ಮಂತ್ರಿ ಮಾಡುವ ಆಗತ್ಯವಾದರೂ ಏನಿತ್ತು? ಚಿಕ್ಕಮಗಳೂರು ಕ್ಷೇತ್ರದ ಯಾರನ್ನೂ ಯಾಕೆ ಮಂತ್ರಿ ಮಾಡಿಲ್ಲ? ಲಿಂಬಾವಳಿ ಸ್ಥಾನಕ್ಕೆ ಮತ್ತೊಬ್ಬ ದಲಿತನನ್ನು ಯಾಕೆ ಮಂತ್ರಿಯನ್ನಾಗಿ ಮಾಡಿಲ್ಲ? ಎಂದೆಲ್ಲಾ ಈಶ್ವರಪ್ಪ-ಯಡ್ಡಿಯ ನಡುವೆ ಜಟಾಪಟಗಳು ನಡೆದವು ಎಂದು ಬಿಜೆಪಿ ಶಾಸಕರೇ ಹೇಳುತ್ತಿದ್ದಾರೆ.

ಹೀಗೆ ಭಾರತೀಯ ಜನತಾ ಪಕ್ಷದಲ್ಲಿ ಯಡ್ಡಿ ಮತ್ತು ಈಶ್ವರಪ್ಪ ನಡುವೆ ಕೆಲವು ಸಮಯದಿಂದ ತೆರೆಮರೆಯಲ್ಲಿ ನಡೆಯುತ್ತಿದ್ದ ಜಟಾಪಟಿ ಈಗ ಬಹಿರಂಗವಾಗಿದೆ. ಇನ್ನು ಮುಂದಿನ ದಿನಗಳಲ್ಲಿ ಇದು ಯಾವ ದಿಕ್ಕಿನತ್ತ ಸಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಒಂದೋ ತನ್ನ ಕುರ್ಚಿಯ ಸ್ಥಿರತೆಗಾಗಿ ಈಶ್ವರಪ್ಪನ ಜೊತೆ ಯಡ್ಡಿ ರಾಜಿ ಮಾಡಿಕೊಳ್ಳಬಹುದು. ಅಥವಾ ಯಡ್ಡಿಯ ಕಟ್ಟಾ ವೈರಿಯಾದ ಅನಂತ್‌ಕುಮಾರ್ ಜತೆ ಈಶ್ವರಪ್ಪ ಕೈಜೋಡಿಸಿ ನಾಯಕತ್ವ ಬದಲಾವಣೆ ಕುರಿತ ಭಿನ್ನಮತೀಯರ ಕೂಗಿಗೆ ಬೆಂಬಲ ನೀಡಬಹುದು.

ಆದರೆ ಯಡ್ಡಿ-ಈಶ್ವರಿ ನಡುವಿನ ಕೋಳಿ ಜಗಳದಲ್ಲಿ ತಾನು ಪಕ್ಷಕ್ಕೆ ತಂದಿರುವ ವರ್ತೂರು ಪ್ರಕಾಶ್ ಮತ್ತು ರಾಜೂಗೌಡ ಇಬ್ಬರೂ ಈಗ ಕೇರಾಫ್ ಫುಟ್‌ಪಾತ್ ಆಗಿದ್ದನ್ನು ನೋಡಿ ಜನಾರ್ದನ ರೆಡ್ಡಿ ಕೆಂಡಾಮಂಡಲವಾಗಿದ್ದಾರೆ. ಆದುದರಿಂದ ಇದೇ ಕಾರಣಕ್ಕಾಗಿ ಯಾವುದೇ ಕ್ಷಣದಲ್ಲಿ ರೆಡ್ಡಿ ಸಹೋದರರು ಮತ್ತೆ ಯಡ್ಡಿ ವಿರುದ್ಧ ತಿರುಗಿಬಿದ್ದರೂ ಆಶ್ಚರ್ಯಪಡಬೇಕಿಲ್ಲ.

ಅಂತೂ-ಇಂತೂ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಆಡಳಿತಾರೂಢ ಪಕ್ಷದಲ್ಲಿನ ಭಿನ್ನಮತೀಯ ಚಟುವಟಿಕೆಗಳು ಮೆಗಾ ಸೀರಿಯಲ್‌ನಂತೆ ನಿತ್ಯವೂ ನಡೆಯುತ್ತಲೇ ಇವೆ. ಅದೇನೇ ಇದ್ದರೂ ಯಡ್ಡಿಗೆ ಸ್ಥಿರತೆ ಎನ್ನುವುದಿಲ್ಲ, ರಾಜ್ಯದ ಜನರಿಗೆ ನೆಮ್ಮದಿ ಎನ್ನುವುದಿಲ್ಲ. ಯಾವ ಪುರುಷಾರ್ಥಕ್ಕೆ ಈ ಚೆಡ್ಡಿ-ಯಡ್ಡಿ-ರೆಡ್ಡಿಗಳನ್ನು ರಾಜ್ಯದ ಜನ ಆಯ್ಕೆ ಮಾಡಿಕೊಳ್ಳಬೇಕಿತ್ತು?

• ಸದಾಶಿವ ಶೆಣೈ
shenoylankesh@gmail.com

"ಮನೆ ಎಂದರೆ ನಾವೆಲ್ಲ ಕಟ್ಟಡವೆಂದು ತಿಳಿಯುತ್ತೇವೆ. ಮನೆಯೆಂಬುದು ಮನಸ್ಸು, ದೇಹ, ಆತ್ಮಗಳನ್ನು ರಕ್ಷಿಸುವ, ರೂಪಿಸುವ ಜಾಗ. ಮನೆಯೊಂದರ ಜಾವಡಿ, ಜಗುಲಿ, ಅಡುಗೆಮನೆ, ಮಲಗುವ ಕೋಣೆ ಎಲ್ಲದಕ್ಕೆ ನೆನಪುಗಳಿರುತ್ತವೆ. ಮನೆ ಹಳೆಯದಾದಷ್ಟೂ ಅದರ ಮರ ಮೆಟ್ಟಿಲುಗಳು, ಟೇರು, ರಿಪೀಸು, ತೊಲೆ, ಕುಬಿ, ತೊಟ್ಟಿಲು, ಪಾತ್ರೆ ಎಲ್ಲವೂ ನೂರಾರು ಕತೆಗಳನ್ನು ಹೇಳುತ್ತವೆ" ಎಂದು ಪಿ. ಲಂಕೇಶರು 'ಅರ್ಥಪೂರ್ಣ ಮನೆ' ಎಂಬ ಲೇಖನದಲ್ಲಿ ಮಣಿಪಾಲದ ವಿಜಯನಾಥ ಶೆಣೈ ಅವರ ಮನೆ ಕುರಿತು ಬರೆದಿದ್ದರು. ಇವತ್ತು ಅದೇ ಶೆಣೈ ಅವರು ನಿರ್ಮಿಸಿರುವ 26 ಕಟ್ಟಡಗಳ 'ಹೆರಿಟೇಜ್ ವಿಲೇಜ್' ಸಂಪೂರ್ಣ ಗೊಳ್ಳುವ ಹಂತ ತಲುಪುತ್ತಿದೆ. ಆ ಅದ್ಭುತ 'ವಿಲೇಜ್' ಅನ್ನು ಹೊಕ್ಕು ಅದನ್ನು ಅನಾವರಣ ಮಾಡುವ ಲೇಖನ ಇಲ್ಲಿದೆ.

• ಗೌರಿ ಲಂಕೇಶ್

ಶೆಣೈ ಸೃಷ್ಟಿಸಿದ ಅದ್ಭುತ ಹೆರಿಟೇಜ್ ವಿಲೇಜ್



ಕೇವಲ ಆರು ಎಕರೆಗಳಷ್ಟು ಪ್ರದೇಶದಲ್ಲಿ ಹರಡಿಕೊಂಡಿರುವ ಆ ಹಳ್ಳಿ ತುಂಬಾ ಸುಂದರವಾಗಿದೆ. ಆ ಹಳ್ಳಿಯ ಒಂದು ರಸ್ತೆಯಲ್ಲಿ ಕೃಷಿಕರಾದ ಬಂಟರ ಮನೆ ಇದ್ದರೆ, ಇನ್ನೊಂದು ರಸ್ತೆಯಲ್ಲಿ ನವಾಯತ ಮುಸಲ್ಮಾನರ ಮನೆ ಇದೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಕಡೆ ಮಂಗಳೂರು ಕ್ರಿಶ್ಚಿಯನ್ನರ ಮನೆ ಇದ್ದರೆ, ಇನ್ನೊಂದು ಕಡೆ ಲಿಂಗಾಯತ ಜಂಗಮರ ಮಠವಿದೆ, ಇವುಗಳ ಆಜುಬಾಜಿನಲ್ಲೇ ರಾಮಚಂದ್ರಾಪುರ ಮಠದ ವಿದ್ಯಾಮಂದಿರ, ದಕ್ಖನಿ ನವಾಬರ ಬಂಗಲೆ, ಮುಧೋಳ ರಾಜರ ದರ್ಬಾರು ಹಾಲ್, ಶಿವಳ್ಳಿ ಬ್ರಾಹ್ಮಣರ ಚೌಕಿಮನೆ, ವಿಜಯನಗರ ಸಾಮ್ರಾಜ್ಯದ ಸೇನಾಧಿಪತಿಯ ಮನೆ.... ಹಳ್ಳಿಯ ಮಧ್ಯದಲ್ಲಿ ಹರಿಹರ ದೇವಸ್ಥಾನ, ದುರ್ಗಿಗುಡಿ, ಖಡ್ಗ ರಾಮಮಂದಿರಗಳೂ ಇವೆ. ವಿವಿಧ ಧರ್ಮ, ಪಂಗಡ, ವೃತ್ತಿಗಳ ಜನ ತಮ್ಮ ವ್ಯವಹಾರಕ್ಕೆ ಅನುಕೂಲವಾಗುವಂತೆ ತಮ್ಮ ಬದುಕಿಗೆ ಸರಿಹೊಂದುವಂತೆ ನಿರ್ಮಿಸಿದ್ದ, ಸಹಸ್ರಾರು ತಲೆಮಾರುಗಳು ಜೀವಿಸಿದ್ದ ಮನೆಗಳೇ ಆ ಹಳ್ಳಿಯ ಆಕರ್ಷಣೆ. ಆದರೆ ಇವತ್ತು ಆ ಹಳ್ಳಿಯಲ್ಲಿ ಯಾರೂ ವಾಸ ಮಾಡುತ್ತಿಲ್ಲ, ಬದಲಾಗಿ ಅದಕ್ಕಾಗಿ ತಮ್ಮ ಎಲ್ಲ ಸಮಯ ಮತ್ತು ಶ್ರಮವನ್ನು ವ್ಯಯಿಸುತ್ತಿರುವವರು ಮಾತ್ರ ಪ್ರತಿ ದಿನ ಆ ಹಳ್ಳಿಯಲ್ಲಿ ಕಾಣಸಿಗುತ್ತಾರೆ.

ಅವರೇ ವಿಜಯನಾಥ ಶೆಣೈ, ಅವರು ಅಪಾರ ಕಾಳಜಿಯಿಂದ ನಿರ್ಮಿಸಿರುವ ಆ ಹಳ್ಳಿಯ ಹೆಸರು 'ಹೆರಿಟೇಜ್ ವಿಲೇಜ್'!

ಈ ಹಿಂದೆ ಶೆಣೈ ಅವರು ಮಣಿಪಾಲದಲ್ಲೇ ಬಹಳ ಆಸಕ್ತಿ ಮತ್ತು ಪ್ರೀತಿಯಿಂದ ನಿರ್ಮಿಸಿದ್ದ ಮನೆಯ ಬಗ್ಗೆ ಅಪ್ಪ 1992 ರಲ್ಲಿ 'ಅರ್ಥಪೂರ್ಣ ಮನೆ' ಎಂಬ ಲೇಖನ ಬರೆದಿದ್ದರು. (ಟೀಕೆ-ಟಿಪ್ಪಣಿ ಸಂಪುಟ 2, ಪುಟ 98). ನಾನೂ ಕೂಡ ಆಗ ಕೆಲಸ ಮಾಡುತ್ತಿದ್ದ ಇಂಗ್ಲಿಷ್ ಪತ್ರಿಕೆಗೆ ಅವರ ಮನೆಯ ಬಗ್ಗೆ ಬರೆದಿದ್ದೆ. ಅಂದಿನಿಂದ ನಮ್ಮ ಫ್ಯಾಮಿಲಿ ಮತ್ತು ಶೆಣೈ ಅವರ ನಡುವಿನ ಸ್ನೇಹ ಬೆಳೆದುಬಂದಿದೆ. ಆದ್ದರಿಂದಲೇ ನಾನು ಉಡುಪಿಗೆ ಹೋದಾಗಲೆಲ್ಲ ಶೆಣೈ ಅವರನ್ನು ತಪ್ಪದೇ ಭೇಟಿ ಮಾಡುತ್ತೇನೆ. ಕಳೆದ ವಾರ ಮಗಳು ಇಶಾಳೊಂದಿಗೆ ಮಂಗಳೂರಿಗೆ ಹೋಗಿದ್ದಾಗ ಅವಳನ್ನು ಕರೆದುಕೊಂಡು ಶೆಣೈರ ಹೆರಿಟೇಜ್ ವಿಲೇಜ್‌ಗೆ ಭೇಟಿ ನೀಡಿದ್ದೆ.

'ಹಸ್ತಶಿಲ್ಪ ಟ್ರಸ್ಟ್' ವತಿಯಿಂದ ನಿರ್ಮಿಸಲಾಗುತ್ತಿರುವ ಈ ಹಳ್ಳಿಯಲ್ಲಿ ಒಟ್ಟು 26 ಕಟ್ಟಡಗಳಿವೆ. ಅವುಗಳಲ್ಲಿ ಒಂದು ಸುಮಾರು ಇನ್ನೂರು ವರ್ಷದಷ್ಟು ಹಳೆಯದಾದ ಕುಂಜೂರು ಚೌಕಿಮನೆ. ಆರು ವರ್ಷಗಳ ಹಿಂದೆ ಭೇಟಿ ನೀಡಿದಾಗ ಈ ಮನೆಯ ಜಗುಲಿಯಲ್ಲಿ ಕುಳಿತಿದ್ದ ಶೆಣೈ ಅವರು ಮೊನ್ನೆಯೂ ಅದೇ ಜಾಗದಲ್ಲಿ ನನಗಾಗಿ ಕಾಯುತ್ತಾ ಕುಳಿತಿದ್ದರು. ಈಗ ಅವರಿಗೂ ವಯಸ್ಸಾಗಿದೆ, ಆದರೆ ಅವರ ಉತ್ಸಾಹ ಮಾತ್ರ ಕಿಂಚಿತ್ತೂ ಕಡಿಮೆಯಾಗಿಲ್ಲ!

ಮೊದಲು ಈ ಕುಂಜೂರು ಮನೆಯ ಬಗ್ಗೆ ಹೇಳಬೇಕಿದೆ. ಹದಿನೈದನೆ ಶತಮಾನದಲ್ಲಿ ಬರೆದಿದ್ದ 'ಮನುಷಾಲಯ ಚಂದ್ರಿಕಾ' ಎಂಬ ವಾಸ್ತುಶಿಲ್ಪ ಕುರಿತ ಪ್ರಬಂಧವನ್ನಾಧರಿಸಿ ಹತ್ತೊಂಭತ್ತನೆ ಶತಮಾನದ ಆರಂಭದಲ್ಲಿ ನಿರ್ಮಿಸಲಾಗಿದ್ದ ಮನೆ ಇದು. ಸಂಪೂರ್ಣವಾಗಿ ಮರವನ್ನು ಮಾತ್ರ ಉಪಯೋಗಿಸಿ

ಒಂದು ಶಿವಳ್ಳಿ ಬ್ರಾಹ್ಮಣರ ಕುಟುಂಬಕ್ಕೆ ಅಗತ್ಯವಾದಂತೆ ಇದನ್ನು ಅಯ್ಯಪ್ಪ ನಾರಾಯಣ ಎಂಬುವವರು ಕಟ್ಟಿಸಿದ್ದರು. ಅವರ ನಂತರದ ಹಲವಾರು ತಲೆಮಾರುಗಳು ಇದೇ ಮನೆಯಲ್ಲಿ ಹುಟ್ಟಿ, ಬೆಳೆದು, ಬದುಕಿ, ಇತಿಹಾಸ ಸೇರಿದರು. ಆದರೆ ಇಪ್ಪತ್ತನೆ ಶತಮಾನದ ಅಂತ್ಯದ ಹೊತ್ತಿಗೆ ನಾರಾಯಣ ಅವರ ವಂಶದವರೆಲ್ಲ ಓದಿ ದೂರದ ಊರುಗಳಲ್ಲಿ, ನಗರಗಳಲ್ಲಿ ವಾಸಿಸಲಾರಂಭಿಸಿದರು. ಆಗ ಈ ಮನೆಯನ್ನು ನೋಡಿಕೊಳ್ಳುವುದಿರಲಿ, ಇಲ್ಲಿ ವಾಸಿಸಲೂ ಯಾರೂ ಇರದೆ ಈ ಸುಂದರ ಮನೆ ನಿಧಾನವಾಗಿ ನಾಶವಾಗಲಾರಂಭಿಸಿತು.

ಈ ಮನೆಯ ಬಗ್ಗೆ ಕೇಳಿದ್ದ, ಇದನ್ನು ನೋಡಿದ್ದ ಶೆಣೈ ಅವರು ಈ ಮನೆಯ ಪಾಲುದಾರರಾಗಿದ್ದ ಸಹೋದರರನ್ನು ಭೇಟಿ ಮಾಡಿ ಅದನ್ನು ತಮ್ಮ ಹಸ್ತ ಶಿಲ್ಪ ಟ್ರಸ್ಟ್‌ಗೆ ದಾನ ಮಾಡುವಂತೆ ವಿನಂತಿಸಿಕೊಂಡರು. ಅವರೆಲ್ಲರೂ ಸಮ್ಮತಿಸಿದ ನಂತರ ಶೆಣೈ ಅವರು ಆ ಮನೆಯ ಪ್ರತಿಯೊಂದು ಕಂಬ, ತೊಲೆ, ರಿಪೀಸು, ಹಲಗೆ ಎಲ್ಲಕ್ಕೂ ಗುರುತು ಹಾಕಿ, ಇಡೀ ಮನೆಯನ್ನು ಕಳಚಿ, ಪ್ರತಿಯೊಂದು ಚೂರನ್ನು ಮಣಿಪಾಲಕ್ಕೆ ಸಾಗಿಸಿ ಒಂದು ಮಿಲಿಮೀಟರ್‌ನಷ್ಟೂ ವ್ಯತ್ಯಾಸವಿಲ್ಲದೆ ಮೂಲ ಮನೆ ಹೇಗಿತ್ತೋ ಹಾಗೆಯೇ ಅದನ್ನು ಮತ್ತೆ ನಿರ್ಮಿಸಿದ್ದಾರೆ.



ಕುಂಜನೂರು ಚೌಕಿಮನೆ...

ಈ ಮನೆಯ ಪ್ರತಿ ಬಾಗಿಲು, ಕಂಬ, ಕೊಠಡಿ, ಕಿಟಕಿ ಎಲ್ಲವೂ ಆಗಿನ ವಾಸ್ತುಶಿಲ್ಪದ ಬಗ್ಗೆ ಮಾತ್ರ ಹೇಳುವುದಿಲ್ಲ. ಅದರ ಜೊತೆಗೆ ಕುಟುಂಬವೊಂದರ ಜೀವನ ಶೈಲಿಯ ಬಗ್ಗೆಯೂ ಹಲವಾರು ಕತೆ ಹೇಳುತ್ತವೆ; ಗತಿಸಿ ಹೋದ ಕಾಲಕ್ಕೆ ದಾಖಲೆಗಳಾಗಿವೆ.

ಕುಂಜೂರು ಮನೆಯ ಪ್ರಮುಖ ದ್ವಾರಕ್ಕೆ ಹಾಕಲಾಗಿರುವ ಅಗ ವಿಶೇಷವಾದದ್ದು. ಅದರ 'ಸೀಕ್ರೆಟ್' ಗೊತ್ತಿಲ್ಲದೆ ಬಾಗಿಲು ಹಾಕಿಕೊಂ ಏನೇ ಮಾಡಿದರೂ ಮತ್ತೆ ಬಾಗಿಲನ್ನು ತೆರೆಯಲಾಗುವುದಿಲ್ಲ. ಆ ಸಬೀಹಾ ಭೂಮಿಗೌಡ ಮತ್ತು ನನ್ನ ಮಗಳು ಎಷ್ಟೇ ಪ್ರಯತ್ನಿ ಅವರಿಬ್ಬರಿಂದ ಆ ಬಾಗಿಲನ್ನು ತೆರೆಯಲಾಗಲಿಲ್ಲ. ಆದರೆ ಈ ಹಿಂದೆ ಈ ಮನೆಯನ್ನು ನೋಡಿದ್ದರಿಂದ ಆ 'ಸೀಕ್ರೆಟ್' ನನಗೆ ಗೊತ್ತಿತ್ತು. ಇಶಾಳಿಗೆ ತೋರಿಸಿಕೊಟ್ಟ ನಂತರ ತಾನು ದೊಡ್ಡ ಮ್ಯಾಜಿಕ್ ಅನ್ನು ಎಂದು ಆಕೆ ಸಂಭ್ರಮ ಪಟ್ಟಳು.

ಕುಂಜೂರು ಮನೆಯಷ್ಟೇ ಸುಂದರವಾಗಿರುವುದು 'ಕಮಲ ಮ ಸುಮಾರು ಏಳು ನೂರು ವರ್ಷಗಳಷ್ಟು ಹಿಂದೆ ಇದನ್ನು ಕೊಪ್ಪಳ ಕುಕನೂರಿನಲ್ಲಿ ವಿಜಯನಗರ ಸಾಮ್ರಾಜ್ಯದ ಸೇನಾಧಿಪತಿಯೊಬ್ಬ ಕ ಆದರೆ ಕಾಲಕ್ರಮೇಣ ಸುಂದರ ಕೆತ್ತನೆಗಳನ್ನು ಹೊಂದಿರುವ ಕಂಬಗಳಿ ಬಳಿಯಲಾಗಿತ್ತು, ಧೂಳು ಮೆತ್ತಿಕೊಂಡಿತ್ತು, ಇಡೀ ಮನೆಯನ್ನು ಕೊಟ್ಟಿಗೆಯಾಗಿ ಉಪಯೋಗಿಸಲಾಗುತ್ತಿತ್ತು. ಕೊನೆಗೆ ಈ ಮನ ನೋಡಿಕೊಳ್ಳಲಾಗದ ಸ್ಥಿತಿಗೆ ಇದರ ಮಾಲೀಕರಾಗಿದ್ದ ದೇಸಾಯಿ ವಂ ಬಂದರು. ಆಗ ಇಡೀ ಕಟ್ಟಡವನ್ನು ಹಸ್ತಶಿಲ್ಪ ಟ್ರಸ್ಟ್‌ಗೆ ಮಾರಿದರು. ದೂರದ ಕೊಪ್ಪಳದಿಂದ ತಂದು ಇಲ್ಲಿ ಮತ್ತೆ ಶೆಣೈ ನಿರ್ಮಿಸುವ ರಾಜ್ಯದ ಇತಿಹಾಸದ ಒಂದು ವಿಶಿಷ್ಟ ಕಟ್ಟಡವನ್ನು ರಕ್ಷಿಸಿದ್ದಾರೆ.

ಇನ್ನು ಇಲ್ಲಿರುವ ದಕ್ಖನಿ ನವಾಬರ ಮಹಲ್‌ನ ಕತೆಯಂತೂ ರೋಚಕ ಹತ್ತೊಂಭತ್ತನೆ ಶತಮಾನದ ಆರಂಭದಲ್ಲಿ ಹುಮನಾಬಾದ್‌ನಿಂ ಕಿಲೋಮೀಟರ್ ದೂರದಲ್ಲಿ ದಕ್ಖನಿ ನವಾಬರ ಒಂದು ವಂಶ ಅ ಸುಂದರ ಮಹಲ್ ಅನ್ನು ನಿರ್ಮಿಸಿತ್ತು. ಆದರೆ ಕಾಲಕ್ರಮೇಣ ಅವರ ಸ್ಥಿತಿಯೂ ಹದಗೆಟ್ಟು ಈ ಮನೆಯನ್ನು ಮಾರಲು ಮುಂದಾದರು. ವಂಶದ ಪ್ರತಿಷ್ಠೆ ಅಡ್ಡ ಬಂತು. ತಾವು ಯಾರು, ತಮ್ಮ ಮನೆ ಎಲ್ಲಿದೆ ಸ್ವತಃ ಶೆಣೈ ಅವರಿಗೂ ಗೊತ್ತಾಗಕೂಡದು ಎಂಬ ಉದ್ದೇಶದಿಂದ ಶೆಣೈ ಕಣ್ಣಿಗೆ ಬಟ್ಟೆಯನ್ನು ಕಟ್ಟಿ, ಮೋಟರ್ ಸೈಕಲ್‌ನಲ್ಲಿ ಕೂಡಿಸಿಕೊಂಡು ಮನೆಗೆ ಕರೆದುಕೊಂಡು ಹೋದರಂತೆ. ಅಲ್ಲಿ ಮಾತುಕತೆಗಳೆಲ್ಲ ನಡೆದು ಕಡೆಯವರಿಗೆ ತೃಪ್ತಿ ನೀಡುವಂತಹ ಒಪ್ಪಿಗೆ ಆದ ನಂತರವೇ ತಮ್ಮ ಬಗ್ಗೆ ಹೇಳಿಕೊಂಡರಂತೆ.

ಈ ನವಾಬ್ ವಂಶದವರು ಎಂತಹ ಸುಖದಸುಪ್ಪತ್ತಿಗೆಯ ನಡೆಸಿದ್ದರೆಂದರೆ ಆಗಿನ ಕಾಲದಲ್ಲಿ ಯೂರೋಪಿನಲ್ಲಿ ಬಿಡುಗಡೆಗೊ ದುಬಾರಿ ಬೆಲೆಯ ವಸ್ತುಗಳೆಲ್ಲ ಕೂಡಲೇ ಇವರ ಮಹಲ್‌ನಲ್ಲೂ ಕೊಳ್ಳುತ್ತಿದ್ದವು. ಅವುಗಳಲ್ಲಿ ಇವತ್ತಿಗೂ ಬೆಲ್ಜಿಯಂ ದೇಶದ ದೀಪಗಳು, ಆ ಷ್ಯಾಂಡಲಿಯರ್‌ಗಳು, ಇಂಗ್ಲೆಂಡಿನಲ್ಲಿ ತಯಾರಿಸಿದ್ದ ಉಕ್ಕಿನ ಮೆಟ್ಟಿ ಮತ್ತು ಜರ್ಮನಿಯಿಂದ ತಂದು ನೆಲದ ಮೇಲೆ ಹಾಕಿದ್ದ ಟೈಲ್ಸ್‌ಗಳು ಹಾಗೆಯೇ ಇವೆ. ಈ ವಂಶದವರು ಮುಸಲ್ಮಾನರಾಗಿದ್ದರೂ ಅವರು ಹಿಂ ಶಾಸ್ತ್ರಿಯ ಸಂಗೀತವನ್ನು ಬಹಳ ಇಷ್ಟಪಡುತ್ತಿದ್ದರಿಂದ ಅವರು ಸಂ ಸಂಗೀತದ ವಾದ್ಯಗಳೂ ಇವೆ. ಆ ಮನೆಯಲ್ಲಿ ಮರದಿಂದ ಮಾ ಒಂದು ಉದ್ದನೆಯ ಪಂಜರದಂತಹ ವಸ್ತು ನನ್ನ ಕುತೂಹಲವನ್ನು ಕೆ "ಇದೇನು?" ಎಂದು ಶೆಣೈ ಅವರನ್ನು ಕೇಳಿದಾಗ "ಅಲ್ಲಿರುವ ತ ಮೊದಲ ವಾಹನ, ಇದು ಕೊನೆ ವಾಹನ" ಎಂದು ನಕ್ಕರು. ಆ ಪಂಜರವನ್ನು ಶವಗಳನ್ನು ಸಾಗಿಸಲೆಂದೇ ನಿರ್ಮಿಸಿದ್ದು!


ಇದೇ ಹಳ್ಳಿಯಲ್ಲಿರುವ ಮತ್ತೊಂದು ಸುಂದರ ಕಟ್ಟಡ ಮು ಅರಮನೆಯ ದರ್ಬಾರ್ ಹಾಲ್. ಇನ್ನೂರು ವರ್ಷಗಳ ಹಿಂದೆ ರಾಜರ ವಂಶಕ್ಕೆ ಸೇರಿದ್ದ ಘೋರ್ಪಡೆಗಳು ಬಾಗಲಕೋಟೆ ಜಿಲ್ಲೆಯ ಮು



ಪುರಾತನ ರಥ...




ಹೆರಿಟೇಜ್ ವಿಲೇಜ್‌ನಲ್ಲಿ ಪ್ರದರ್ಶನಕ್ಕಿರುವ ಕೆಲವು ಮಾದರಿ ಅಂಗಡಿಗಳು...



ಗಡಿಯಾರದ ಅಂಗಡಿ



...ಳ ರಾಜರ ದರ್ಬಾರ್ ಹಾಲ್...



ಮಂಗಳೂರು ಕ್ರಿಶ್ಚಿಯನ್ನರ ಮನೆ...




ದಕ್ಕನಿ ನವಾಬರ ಬಂಗಲೆ...

ಅರಮನೆಯನ್ನು ಕಟ್ಟಿಸಿದ್ದರು. ಆದರೆ ಬ್ರಿಟಿಷರ ...ಇತರೆ ರಾಜವಂಶದವರಂತೆ ಘೋರ್ಪಡೆಗಳೂ ...ಕಳೆದುಕೊಂಡರು. ಇಪ್ಪತ್ತನೆ ಶತಮಾನದಲ್ಲಿ ...ವಂಶದವರು ಪೂಣೆಗೆ ಹೊರಟುಹೋದ ...ಮುಧೋಳ ಅರಮನೆ ಕುಸಿಯಲಾರಂಭಿಸಿತು. ...ಮುಂಭಾಗವನ್ನು ಸ್ಥಳೀಯ ಅಂಗಡಿ ...ಆಕ್ರಮಿಸಿಕೊಂಡು ಸ್ವಲ್ಪ ಕಾಲದಲ್ಲೇ ಆ ...ಯಿತು. ಆದರೂ ಒಳಗಡೆ ಇದ್ದ ದರ್ಬಾರ್ ... ತನ್ನ ಜೀವವನ್ನು ಉಳಿಸಿಕೊಂಡಿತ್ತು. ಇತ್ತೀಚೆಗೆ ...ಫ್ಯಾಮಿಲಿ ತಮ್ಮ ಆಸ್ತಿಯನ್ನು ಜಮಖಂಡಿಯ ...ಶಕ್ಕೆ ಮಾರಿಕೊಂಡಿತು. ಹಸ್ತಶಿಲ್ಪ ಟ್ರಸ್ಟ್ ...ಂಶದರಿಂದ ಈ ದರ್ಬಾರ್ ಹಾಲ್ ಅನ್ನು



...ೇವಸ್ಥಾನದ ಮುಂದೆ ಸಬಿಹಾ ಮತ್ತು ಇಶಾ



...ರು ಚೌಕಿ ಮನೆಯಲ್ಲಿ ಇಶಾ...

ಪಡೆದು, ಅದಕ್ಕೆ ಮತ್ತೆ ಜೀವ ತುಂಬಿ ರಕ್ಷಿಸಿದೆ. ಈ ಹೆರಿಟೇಜ್ ಹಳ್ಳಿಯಲ್ಲಿ ದೇವಸ್ಥಾನಗಳೂ ಇದೆ ಅಂದೆನಲ್ಲ, ಅವುಗಳಲ್ಲಿ ಅತಿ ಸುಂದರವಾದದ್ದು ಹರಿಹರ ಮಂದಿರ. ನಾನೂರು ವರ್ಷಗಳ ಹಿಂದೆ ಈ ಮಂದಿರವನ್ನು ಕೇರಳ ಶೈಲಿಯಲ್ಲಿ ನಮ್ಮ ಕೊಡಗಿನ ಸೋಮವಾರಪೇಟೆಯ ಹತ್ತಿರ ಬರೀ ಮರಗಳಿಂದ ಕಟ್ಟಲಾಗಿತ್ತು. ಆದರೆ ಈ ಕಟ್ಟಡ ಕೂಡ ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಮಳೆಗಾಳಿಯಲ್ಲಿ ನುಚ್ಚುನೂರಾಗಲಾರಂಭಿಸಿತ್ತು. ಒಮ್ಮೆ ಈ ಕಟ್ಟಡ ಮಳೆ ನೀರಿನಲ್ಲಿ ಮುಳುಗಿದ್ದಾಗ ಶೆಣೈ ಅದನ್ನು ಇಲ್ಲಿಗೆ ತಂದು ಮತ್ತೆ ನಿರ್ಮಿಸಿದ್ದಾರೆ. ಇದರ ಒಳಗಿನ ಒಂದೊಂದು ಭಾಗವೂ ಅದ್ಭುತವಾದ ಕೆತ್ತನೆಯಿಂದ ಅಲಂಕಾರಗೊಂಡಿದೆ.

ಹೆರಿಟೇಜ್ ವಿಲೇಜ್‌ನ ಒಂದು ಭಾಗದಲ್ಲಿ ಮಂಗಳೂರು ಕ್ರಿಶ್ಚಿಯನ್ ವಂಶದ ಮನೆಯೂ ಇದೆ. ನೂರು ವರ್ಷಕ್ಕಿಂತಲೂ ಹಳೆಯದಾದ ಈ ಮನೆಯನ್ನು ಲಿವೀಸ್ ಅವರ ವಂಶಸ್ಥರಿಂದ ಖರೀದಿಸಿ ಮರುನಿರ್ಮಾಣ ಮಾಡಲಾಗಿದೆ. ಈ ಮನೆಯಲ್ಲಿರುವ ಪೀಠೋಪಕರಣಗಳು, ಅಡುಗೆಪಾತ್ರೆಗಳು, ಎಲ್ಲವನ್ನೂ ಇದೇ ಹಳ್ಳಿಯಲ್ಲಿರುವ ಇತರೆ ಪಂಗಡ ಅಥವಾ ವರ್ಗಗಳ ಮನೆಗಳೊಂದಿಗೆ ಹೋಲಿಸಿ ನೋಡಿದಾಗ ನಮ್ಮ ದೇಶದ ಸಾಂಸ್ಕೃತಿಕ ಮತ್ತು ಜೀವನಶೈಲಿಯಲ್ಲಿನ ವೈವಿಧ್ಯತೆಗಳು ಅರ್ಥವಾಗುತ್ತದೆ.

ಇಲ್ಲಿರುವ ಪ್ರತಿ ಮನೆಯನ್ನು ಅದರ ಮೂಲ ವಾಸ್ತುಶಿಲ್ಪದ ಶೈಲಿಯಲ್ಲಿಯೇ ಮರು ನಿರ್ಮಿಸಲಾಗಿದೆಯಲ್ಲದೆ, ಕೆಲವು ಮನೆಗಳನ್ನೇ ಶೆಣೈ ಅವರು ವಿಶಿಷ್ಟ ಮ್ಯೂಸಿಯಂ ಗಳಾಗಿ ಬಳಕೆ ಮಾಡಿದ್ದಾರೆ. ಉದಾಹರಣೆಗೆ ಬಂಟರ ಹರಕೂರಿನ ಮನೆಯ ಒಳ ಆವರಣದಲ್ಲಿ ಆಂಧ್ರ ಪ್ರದೇಶದ ಕಲಂಕಾರಿ, ರಾಜಸ್ಥಾನದ ಪಿಚ್‌ವಾರಿ, ಒಡಿಶಾದ ಪಟಚಿತ್ರ, ಗುಜರಾತಿನ ಕಚ್ ಪ್ರದೇಶದ ಕಸೂತಿ ಕಲೆಗಳನ್ನು ಹೊಂದಿ ರುವ ಪ್ರಾಚೀನ ವಸ್ತ್ರಗಳನ್ನು ಪ್ರದರ್ಶಿಸಿದ್ದಾರೆ. ಹಾಗೆಯೇ ಇತರೆ ಕಟ್ಟಡಗಳಲ್ಲಿ ಪ್ರಾಚೀನ ಪೂಜಾ ಸಾಮಗ್ರಿಗಳನ್ನು, ಆಟದ ಸಾಮಾನುಗಳನ್ನು, ವಿಗ್ರಹಗಳನ್ನು, ಇನ್ನೂ ಏನೇನೇನೋ ಅದ್ಭುತ ವಸ್ತುಗಳನ್ನೆಲ್ಲ ಸಂಗ್ರಹಿಸಿಟ್ಟಿದ್ದಾರೆ.

ಇಡೀ ಹಳ್ಳಿಯಲ್ಲಿ ಹೊಸ ಕಟ್ಟಡ ಅಂತಿರುವುದು ಹೊಸದಾಗಿ ನಿರ್ಮಿಸಿರುವ ಆರ್ಟ್ ಗ್ಯಾಲರಿ. ಆದರೆ ಅದರೊಳಗೆ ಇರುವುದೆಲ್ಲ ಹಳೇ ಕಾಲದ ಅತ್ಯುದ್ಭುತವಾದ ತಂಜಾವೂರಿನ ಕಲಾಕೃತಿಗಳು. ಅಲ್ಲಿರುವ ಒಂದೊಂದು ಕಲಾಕೃತಿಯ ಮಾರುಕಟ್ಟೆಯ ಮೌಲ್ಯ ಕೋಟ್ಯಂತರ ರೂಪಾಯಿ. ಒಮ್ಮೆ ವಿದೇಶದಿಂದ ಬಂದ ಮಿಲಿಯನೇರ್ ಒಬ್ಬ "ಇಲ್ಲಿರುವ ಕಲಾಕೃತಿಗಳನ್ನು ನನಗೆ ಮಾರಿ. ನಿಮಗೆ ಬೇಕಾದಷ್ಟು ಹಣ ಕೊಡುತ್ತೇನೆ" ಅಂದನಂತೆ. "ಆತನಿಗೆ ನೀವೇನು ಹೇಳಿದಿರಿ?" ಎಂದು ಕೇಳಿದ್ದಕ್ಕೆ ಶೆಣೈ ಅವರಿಂದ ಒಂದು ಮುಗುಳ್ನಗೆ ಮಾತ್ರ ಉತ್ತರವಾಗಿ ಬಂದಿತು!

ಅದೇ ಆರ್ಟ್ ಗ್ಯಾಲರಿಯ ಕೆಳಮಹಡಿಯಲ್ಲೂ ಶೆಣೈ ಇನ್ನೊಂದು ಅದ್ಭುತವನ್ನು ಸೃಷ್ಟಿಸಿದ್ದಾರೆ. ಅದೇನೆಂದರೆ, ಭಾರತ ಕಂಡ ಮಹಾನ್ ಕಲಾವಿದ ರಾಜ ರವಿವರ್ಮ ಸ್ಥಾಪಿಸಿದ ಪ್ರಿಂಟಿಂಗ್ ಪ್ರೆಸ್! ಆಗಿನ ಕಾಲದಲ್ಲೇ ರವಿವರ್ಮ ಜರ್ಮನಿಯಿಂದ ಒಂದು ಪ್ರಿಂಟಿಂಗ್ ಪ್ರೆಸ್ ಅನ್ನು ಖರೀದಿಸಿ ಆ ಪ್ರೆಸ್‌ನಲ್ಲಿ ತನ್ನ ವರ್ಣಕಲಾಕೃತಿಗಳ ಪ್ರತಿಗಳನ್ನು ಮುದ್ರಿಸುತ್ತಿದ್ದ. ಶೆಣೈ ಅವರು ಆ ಪ್ರೆಸ್ ಜೊತೆಗೆ ಆಗ ಬಳಸುತ್ತಿದ್ದ ಬಣ್ಣಗಳನ್ನೂ, ಇತರೆ ಸಲಕರಣೆಗಳನ್ನೂ ಇಲ್ಲಿಗೆ ತಂದು ಇಟ್ಟಿದ್ದಾರೆ. ಜೊತೆಜೊತೆಗೆ ರವಿವರ್ಮನ ಕಲಾಕೃತಿಗಳ ಸಾವಿರಾರು ಪ್ರತಿಗಳನ್ನೂ ಪ್ರದರ್ಶನಕ್ಕೆ ಇಡಲಾಗಿದೆ.

ಹೆರಿಟೇಜ್ ವಿಲೇಜ್‌ನಲ್ಲಿ ಹಿಂದಿನ ಕಾಲದ ಅಂಗಡಿಗಳನ್ನೂ ಪುನರ್ ನಿರ್ಮಿಸಲಾಗಿದೆ. ರೇಡಿಯೋ, ದೀಪ, ಬೀಗದ ಅಂಗಡಿಗಳಲ್ಲದೆ ಕ್ಷೌರಿಕನ ಶಾಪ್, ಟೈಲರ್ ಅಂಗಡಿ ಇತ್ಯಾದಿಗಳೂ ಇವೆ. ಸೋಡಾ ಶಾಪಿನಲ್ಲಿ ಹಳೆಕಾಲದ ಸೋಡಾ ಮೆಷಿನ್ ಕೂಡ ಇದೆ. ಅದನ್ನು ನೋಡಿದ ಮಲ್ಟಿನ್ಯಾಷನಲ್ ಕೋಲಾ ಕಂಪನಿಯ ಅಧಿಕಾರಿಯೊಬ್ಬ "ಈ ಸೋಡಾ ಮೆಷಿನ್ ಅನ್ನು ನಮಗೆ ಮಾರುತ್ತೀರಾ?" ಅಂದರಂತೆ. ಅದಕ್ಕೂ ಶೆಣೈ ಅವರಿಂದ ಸಿಕ್ಕ ಉತ್ತರ ಮತ್ತದೇ ಮುಗುಳ್ನಗೆ ಮಾತ್ರ!

ನಿಜವಾಗಲೂ ಶೆಣೈ ಅವರು ನಿರ್ಮಿಸಿರುವ ಈ ಹಳ್ಳಿಯನ್ನು ಸಂಪೂರ್ಣವಾಗಿ ಮತ್ತು ವಿವರವಾಗಿ ನೋಡುವುದಕ್ಕೆ ಕನಿಷ್ಠವೆಂದರೂ ನಾಲ್ಕೈದು ದಿನಗಳಾದರೂ ಬೇಕು. ಆದರೆ ಅವತ್ತು ನಮಗೆ ಸಮಯದ ಅಭಾವ ಇದ್ದುದರಿಂದ ಕೆಳದಿ ನಾಯಕರ ಕಾಲದ ಜಂಗಮರ ಮಠ, ಶೃಂಗೇರಿ ಮನೆ, ಮಲೆನಾಡು ಮನೆ, ಹುಂಗರಕಟ್ಟ ಬನಸಾಲೆ ಮನೆ, ವಡೇರ ಹೊಬ್ಳಿ ಮನೆ ಮತ್ತು ಅಂತಹದ್ದೇ ಹಲವಾರು ಕಟ್ಟಡಗಳನ್ನೂ ನೋಡಲಾಗಲೇ ಇಲ್ಲ.

ಈಗಾಗಲೇ ಶೆಣೈ ಅವರ ಈ ಅದ್ಭುತ ಹಳ್ಳಿಯನ್ನು ನೋಡಿ, ಮೆಚ್ಚಿ ಇದನ್ನು ಇಡಿಯಾಗಿ ಕೋಟ್ಯಂತರ ರೂಪಾಯಿ ಕೊಟ್ಟು ಖರೀದಿಸುವುದಾಗಿ ಬಹಳಷ್ಟು ಜನ ಕೇಳಿದ್ದಾರೆ. ಆದರೆ ಶೆಣೈ ಅವರಿಗೆ ಇದೊಂದು ಹಳ್ಳಿ ಮಾತ್ರವಲ್ಲ; ಬದಲಾಗಿ ಅದು ಅವರ ಉಸಿರೇ ಆಗಿದೆ. ಅದಕ್ಕಾಗಿ ಅವರು ತಮ್ಮ ಬದುಕನ್ನು, ಶ್ರಮವನ್ನು, ಕಾಳಜಿಗಳನ್ನೇ ಮುಡಿಪಾಗಿಟ್ಟಿದ್ದಾರೆ. ಆದ್ದರಿಂದ ಅದೆಷ್ಟೇ ಹಣ ಸಿಕ್ಕರೂ ಇದೆಂದೂ ಮಾರಾಟವಾಗುವ 'ಹಳ್ಳಿ' ಅಲ್ಲ.

"ಹೆರಿಟೇಜ್ ವಿಲೇಜ್ ಅನ್ನು ಮಾರದಿದ್ದರೆ ಬೇಡ. ಆದರೆ ನಿಮಗೆ ಇದಕ್ಕಿಂತ ಹೆಚ್ಚು ವಿಸ್ತಾರವಾದ ಭೂಮಿಯನ್ನೂ ಜೊತೆಗೆ ಕೋಟ್ಯಂತರ ರೂಪಾಯಿಗಳನ್ನು ನೀಡುತ್ತೇವೆ, ನಮಗೂ ಇಂತಹದ್ದೊಂದು ವಿಲೇಜ್ ಅನ್ನು ಸ್ಥಾಪಿಸಿ" ಎಂದು ಶೆಣೈ ಅವರನ್ನು ಲೆಕ್ಕವಿಲ್ಲದಷ್ಟು ಶ್ರೀಮಂತರು ಕೇಳಿದ್ದಾರೆ. ಆದರೆ ಅವರೆಲ್ಲರ ಇಂತಹ ಪ್ರಸ್ತಾಪಗಳ ಹಿಂದೆ ಇರುವುದು ನಮ್ಮ ಇತಿಹಾಸವನ್ನು ಬಿಂಬಿಸುವ ಕಟ್ಟಡ ಮತ್ತು ವಸ್ತುಗಳ ರಕ್ಷಣೆ ಅಲ್ಲ ಬದಲಾಗಿ ಹಣಪ್ರತಿಷ್ಠೆ ಎಂಬುದೂ ಶೆಣೈ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಅವರು ಅಂತಹ ಎಲ್ಲಾ ಆಮಿಷ ತುಂಬಿದ ಆಹ್ವಾನಗಳನ್ನು ತಿರಸ್ಕರಿಸಿದ್ದಾರೆ.

ಹೆರಿಟೇಜ್ ವಿಲೇಜ್ ಅನ್ನು ನೋಡಿ ಗೆಳತಿ ಸಬಿಹಾ ಎಷ್ಟು ವಿಸ್ಮಯರಾದರೆಂದರೆ "ನಾವು ಹತ್ತಿರದ ಮಂಗಳೂರಿನಲ್ಲೇ ಬಹಳ ವರ್ಷಗಳಿಂದ ವಾಸಿಸುತ್ತಿದ್ದರೂ ನಮಗೆ ನಿಮ್ಮ ಈ ಸಾಧನೆ ಬಗ್ಗೆ ಗೊತ್ತೇ ಇರಲಿಲ್ಲ, ಈ ಹೆರಿಟೇಜ್ ವಿಲೇಜ್ ಬಗ್ಗೆ ಕೇಳಿಯೂ ಇರಲಿಲ್ಲ" ಎಂದರು.

ಅದಕ್ಕೆ ಶೆಣೈ ಅವರು "ಏಕೆಂದರೆ ಇದು ಇನ್ನೂ ಪೂರ್ಣಗೊಂಡಿಲ್ಲ, ಇಲ್ಲಿನ ಎಲ್ಲ ಕೆಲಸ ಮುಗಿದ ಮೇಲೆ ಇದನ್ನು ಸಾರ್ವಜನಿಕರಿಗೆ ತೆರೆಯುತ್ತೇವೆ. ಅಲ್ಲಿಯವರೆಗೂ ಇಲ್ಲಿಗೆ ಯಾರಿಗೂ ಪ್ರವೇಶವಿಲ್ಲ" ಅಂದರು.

"ಆದರೆ ನಮಗೆ ಪ್ರವೇಶ ನೀಡಿದರಲ್ಲಾ?" ಎಂದು ಸಬಿಹಾ ಕೇಳಿದ್ದಕ್ಕೆ "ಲಂಕೇಶ್ ನನ್ನ ಮಿತ್ರರಾಗಿದ್ದವರು. ಇನ್ನು ಗೌರಿ ನನಗೆ ಹಲವಾರು ವರ್ಷಗಳಿಂದ ಬೇಕಾದವರು. ಅದಕ್ಕೆ ಇದು ಸಾಧ್ಯವಾಗಿದ್ದು" ಎಂದು ನಕ್ಕರು!

ನನ್ನನ್ನು ಒಂದು ಚಿಂತೆ ಕಾಡುತ್ತಿತ್ತು. ಆದ್ದರಿಂದ "ಶೆಣೈ ಅವರೆ, ಈ ಹೆರಿಟೇಜ್ ವಿಲೇಜ್ ಅನ್ನು ನೀವು ಸಾರ್ವಜನಿಕರಿಗೆ ತೆರೆದಿಟ್ಟಾಗ ಇಲ್ಲಿನ ಪ್ರತಿಯೊಂದು ವಸ್ತುವನ್ನೂ ಕಾಪಾಡುವುದೇ ಒಂದು ದೊಡ್ಡ ತಲೆನೋವಾಗುತ್ತದೆ, ಅಲ್ವಾ?" ಎಂದೆ. ಅದಕ್ಕೆ ಶೆಣೈ ಅವರು "ನನಗೆ ಗೊತ್ತು. ಆದ್ದರಿಂದ ಈ ಹಳ್ಳಿ ಉದ್ಘಾಟನೆ ಆದ ಮರುಕ್ಷಣವೇ ನಾನು ಇಲ್ಲಿಂದ ಹೊರಟುಹೋಗುತ್ತೇನೆ" ಎಂದು ಜೋರಾಗಿ ನಕ್ಕರು.

ಶೆಣೈ ಅವರ ಈ ಕನಸಿನ ಗ್ರಾಮ ಆದಷ್ಟ ಬೇಗ ಸಂಪೂರ್ಣಗೊಂಡು, ನನ್ನಂತೆ ಎಲ್ಲರಿಗೂ ಅದನ್ನು ನೋಡುವ ಭಾಗ್ಯ ಸಿಗಲಿ ಎಂದು ಆಶಿಸುತ್ತೇನೆ.

ಏಕೆಂದರೆ ಈ 'ಹೆರಿಟೇಜ್ ವಿಲೇಜ್' ನಮ್ಮ ಸಂಸ್ಕೃತಿ ಪರಂಪರೆ, ಇತಿಹಾಸ, ವಾಸ್ತುಶಿಲ್ಪ ಕಲೆ ಎಲ್ಲವನ್ನೂ ರಕ್ಷಿಸಿ, ಅವುಗಳನ್ನೆಲ್ಲ ನಮ್ಮ ಕಣ್ಣಮುಂದೆ ಇಟ್ಟು ಚಕಿತಗೊಳಿಸುವ ಒಂದು ಅದ್ಭುತ ಸ್ಥಳ.

ಚಿತ್ರಗಳು: ಗೌರಿ ಲಂಕೇಶ್
ಮತ್ತು ದೈಜಿವರ್ಲ್ಡ್ ಹಾಗು ಹಸ್ತಶಿಲ್ಪ ಟ್ರಸ್ಟ್.



ಆರ್ಟ್ ಗ್ಯಾಲರಿ ಕಟ್ಟಡ







ರವಿವರ್ಮನ ಪ್ರಿಂಟಿಂಗ್‌ಪ್ರೆಸ್




ಕಮಲ್ ಮಹಲ್...



ಸೋಡಾ ಅಂಗಡಿ



ಕ್ಷೌರಿಕನ ಅಂಗಡಿ



ಇಸ್ತ್ರಿ ಮತ್ತು ತೊಲಿಗೆ ಅಂಗಡಿ....

ಮುಖ್ಯಮಂತ್ರಿಯೇ ಕೆರೆ ನುಂಗಿದ




ಶಿಕಾರಿಪುರ ತಾಲ್ಲೂಕು ನಂದಿಹಳ್ಳಿಯ ಸರ್ವೆ ನಂ.15ರಲ್ಲಿರುವ ಮಲ್ಲಜ್ಜನಕಟ್ಟೆ ಸದ್ಯ ಹೇಗಾಗಿದೆಯೆಂಬ ದೃಶ್ಯವೊಂದೇ ಅದರ ದುರ್ಗತಿಯನ್ನು ಸಾರಿ ಕೆರೆಯ ದಕ್ಷಿಣ ದಿಕ್ಕಿನಿಂದ ದಿನೇದಿನೇ ಮಣ್ಣು ತುಂಬಿಸುತ್ತಾ, ಕಲ್ಲುರಾಶಿಗಳನ್ನು ಹೊತ್ತು ತಂದು ಕೆರೆಗೆ ಸುರಿಯುತ್ತಾ ಇಂಚಿಂಚಾಗಿ ಕೆರೆಯ ಗಾತ್ರವನ್ನು ಕ್ಷೀಣ ಮಾಡುತ್ತಿರುವವನು ಯಡ್ಡಿ ಮಗ ಸಂಸದ ರಾಘವೇಂದ್ರ!

ನಾಡ ರಕ್ಷಣೆಗಾಗಿ ನಾನು ಯಾವ ತ್ಯಾಗಕ್ಕೂ ಸಿದ್ಧ. ಕರ್ನಾಟಕ ಭೂ ಸಂಪತ್ತು ಅನ್ಯಾಯವಾಗಿ ಲೂಟಿಯಾಗ್ತಿದೆಯಲ್ಲಾ ಎಂಬ ಕೊರಗು ಇವತ್ತಿಗೂ ಇದೆ. ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿಯನ್ನು ನೆಲಗಳ್ಳರಿಂದ ರಕ್ಷಿಸಲೇಬೇಕಿದೆ. ಕೆರೆ-ಕಟ್ಟೆಗಳನ್ನು ಇಂಥ ರಿಯಲ್ ಎಸ್ಟೇಟ್ ಖದೀಮರಿಂದ ರಕ್ಷಿಸೋದಕ್ಕೆ ಸರ್ಕಾರ ಯಾವ ಕ್ರಮಕ್ಕೂ ಹಿಂಜರಿಯೋಲ್ಲ.

ಹೀಗೆ ಕಂಡಕಂಡ ವೇದಿಕೆಗಳಲ್ಲಿ ಸಾಕ್ಷಾತ್ ನಾಡರಕ್ಷಕನಂತೆ ಡೈಲಾಗ್ ಹೊಡೆಯುವ ಮುಖ್ಯಮಂತ್ರಿ ಯಡಿಯೂರಪ್ಪ ಶಿಕಾರಿಪುರದ ರೇವಣಕರ್ ಕುಟುಂಬದ ಆಸ್ತಿ ದೋಚಿದ್ದು ಒತ್ತಟ್ಟಿಗಿರಲಿ; ಅದರ ಪಕ್ಕದ ಕೆರೆಯನ್ನೇ ಕಬಳಿಸಿದ್ದಾರಲ್ಲ- ಇನ್ನು ಯಾವ ಬಾಯಿಂದ ಕೆರೆ ಕಾಪಾಡುವ ಭಾಷಣ ಬಿಗಿಯುತ್ತಾರೆ?

ಅದು ಶಿಕಾರಿಪುರದ ಮಲ್ಲಜ್ಜನಕಟ್ಟೆ ಕೆರೆ. ಶಿವಮೊಗ್ಗ ರಸ್ತೆಗುಂಟ ತಿಮ್ಮಲಾಪುರದ ಬಳಿ ಹತ್ತೆಕರೆಯಷ್ಟು ವಿಶಾಲವಾದ ಮಲ್ಲಜ್ಜನಕಟ್ಟೆ ಕೆರೆಯೆಂದರೆ ಆ ಸುತ್ತಮುತ್ತಲ ಪರಿಸರಕ್ಕದು ಆತ್ಮವಿದ್ದಂತೆ. ಇಂಥ ಕೆರೆಯನ್ನು ಅಡಿಅಡಿಯಾಗಿ ಕಬಳಿಸಿ ಅದರ ಸಮಾಧಿ ಮೇಲೆ ತಮ್ಮ ಡೊನೇಷನ್ ಸಾಮ್ರಾಜ್ಯವನ್ನು ಸ್ಥಾಪಿಸಹೊರಟಿದ್ದಾರೆ ಮುಖ್ಯಮಂತ್ರಿ ಯಡ್ಡಿ.



ಸಿಬಿಎಸ್ಇ ಕಾನ್ವೆಂಟು

ಶಿಕಾರಿಪುರ ತಾಲ್ಲೂಕು ನಂದಿಹಳ್ಳಿಯ ಸರ್ವೆ ನಂ.15ರಲ್ಲಿರುವ ಮಲ್ಲಜ್ಜನಕಟ್ಟೆ ಹೇಗಿದ್ದದ್ದು ಸದ್ಯ ಹೇಗಾಗಿದೆಯೆಂಬ ದೃಶ್ಯವೊಂದೇ ಅದರ ದುರ್ಗತಿಯನ್ನು ಸಾರಿ ಹೇಳುತ್ತಿದೆ. ಕೆರೆಯ ದಕ್ಷಿಣ ದಿಕ್ಕಿನಿಂದ ದಿನೇದಿನೇ ಮಣ್ಣು ತುಂಬಿಸುತ್ತಾ, ಕಲ್ಲುರಾಶಿಗಳನ್ನು ಲಾರಿಗಳಲ್ಲಿ ಹೊತ್ತು ತಂದು ಕೆರೆಗೆ ಸುರಿಯುತ್ತಾ ಇಂಚಿಂಚಾಗಿ ಕೆರೆಯ ಗಾತ್ರವನ್ನು ಕ್ಷೀಣಿಸುವಂತೆ ಮಾಡುತ್ತಿರುವವನು ಯಡ್ಡಿ ಮಗ ಸಂಸದ ರಾಘವೇಂದ್ರ!

ಹೀಗೆ ಕಲ್ಲು ಮತ್ತು ಮಣ್ಣು ಸುರಿದು ಆಕ್ರಮಿಸಿದ ಕೆರೆ ಭೂಮಿಯಲ್ಲಿ ಸದ್ಯ ಯಡ್ಡಿಯ ಸಿಬಿಎಸ್ಇ ಕಾನ್ವೆಂಟ್‌ನ ಬಾಲಕರ ವಸತಿಗೃಹದ ಕಟ್ಟಡ ತಲೆಯೆತ್ತಿದೆ. ಪಕ್ಕದಲ್ಲೇ ಸಿಬಿಎಸ್‌ಸಿ ಕಾನ್ವೆಂಟ್‌ನ ವಿಶಾಲ ಕಟ್ಟಡ. ಅದಕ್ಕೆ ಹೊಂದಿಕೊಂಡಂತೆ ಯಡ್ಡಿ ಒಡೆತನದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಡೆಸುವ ಕುಮುದ್ವತಿ ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಟಿಸಿಹೆಚ್ ಕಾಲೇಜು, ಬಿಎಡ್ ಕಾಲೇಜು; ಹೀಗೆ ಯಡ್ಡಿ ಕುಟುಂಬದ ಡೊನೇಷನ್ ದಾಹ ತಣಿಸಲು ಬೇಕಾದ ತರಹೇವಾರಿ ಸ್ಕೂಲು ಕಾಲೇಜುಗಳ ಸಾಮ್ರಾಜ್ಯವೇ ಮಲ್ಲಜ್ಜನಕೆರೆ ಏರಿಯ ಮೇಲೆ ಅರಳಿ ನಿಂತಿದೆ.

ಇದಕ್ಕೊಂದು ಸಾಕಷ್ಟು ಭೂಮಿ ಖರೀದಿಸಿದ ಮುಖ್ಯಮಂತ್ರಿಗಳು ಮಗ ರಾಘವೇಂದ್ರನನ್ನು ಮುಂದೆ ಬಿಟ್ಟು ನಿರ್ಗತಿಕ ರೇವಣಕರ್ ಕುಟುಂಬದ ಆಸ್ತಿಯನ್ನೂ ಕಬಳಿಸಿದ್ದು ಸಾಲದೆಂಬಂತೆ ಈಗ ಕೆರೆಯನ್ನೇ ಒತ್ತುವರಿ ಮಾಡಲು ಹೊರಟಿದ್ದು ತಮ್ಮ ಅಧಿಕಾರ ಬಲದಿಂದ ಮಾತ್ರ!

ಕಪಟ ತಂತ್ರ!

ಇಲ್ಲಿಗೆ ವರ್ಷದ ಹಿಂದೆ ಶಿವಮೊಗ್ಗ ಜಿಲ್ಲಾಧಿಕಾರಿ ಪಾಂಡೆಗೆ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಟ್ರಸ್ಟಿ ಸಂಸದ ರಾಘವೇಂದ್ರನಿಂದ ವಿಚಿತ್ರ ಕೋರಿಕೆಯೊಂದನ್ನು ಸಲ್ಲಿಸಲಾಯಿತು. ಅದು ಶಿಕಾರಿಪುರದ ಮಲ್ಲಜ್ಜನ ಕಟ್ಟೆ ಕೆರೆಯನ್ನು ಅಭಿವೃದ್ಧಿಪಡಿಸಲು ತಮ್ಮ ಸಂಸ್ಥೆಗೆ ಅದನ್ನು ವಹಿಸಿಕೊಡುವಂತೆ ಕೋರಿದ ಅರ್ಜಿಯಾಗಿತ್ತು. ಕೆರೆಗೆ ಹೊಂದಿಕೊಂಡಂತೆ ಯಡ್ಡಿಯ ಡೊನೇಷನ್ ಶಾಲೆಗಳು ತಲೆಯೆತ್ತುತ್ತಿದ್ದದ್ದನ್ನು ಗಮನಿಸಿದ್ದ ಜಿಲ್ಲಾಧಿಕಾರಿ ಪಾಂಡೆ, ರಾಘು ಸಲ್ಲಿಸಿದ್ದ ಅರ್ಜಿಯನ್ನು ಕಿರು ನೀರಾವರಿ ಇಲಾಖೆಯ ಸಹಾಯಕ ಇಂಜಿನಿಯರ್ ಸತೀಶ್‌ಕುಮಾರ್‌ಗೆ ವರ್ಗಾಯಿಸಿದ್ದಾರೆ.

ಸರ್ಕಾರಿ ಕೆರೆಯನ್ನು ಖಾಸಗಿ ಸಂಸ್ಥೆಗೆ ವಹಿಸಿಕೊಡಲು ಕಾನೂನಿನಲ್ಲೇ ಅವಕಾಶವಿಲ್ಲವೆಂದು ಷರಾ ಬರೆದ ಇಂಜಿನಿಯರ್ ಅದನ್ನು ಮತ್ತೆ ಜಿಲ್ಲಾಧಿಕಾರಿಗೇ ಹೊತ್ತು ಹಾಕಿ ಕೈತೊಳೆದುಕೊಂಡರು.

ಯಾವತ್ತು ಜಿಲ್ಲಾಧಿಕಾರಿ ಮೂಲಕ ಹೂಡಿದ ತಂತ್ರಕ್ಕೆ ಬರಕತ್ತಾಗಲಿಲ್ಲವೋ ಈ ಬಾರಿ ಹೊಸ ತಂತ್ರವೊಂದಕ್ಕೆ ರಾಘು ಕೈಹಾಕಿದ್ದಾನೆ. ಆಗ ಶಿಕಾರಿಪುರಕ್ಕೆ ತಹಶೀಲ್ದಾರ್ ಆಗಿದ್ದ ಶ್ರೀಧರ್‌ಗೆ ಅರ್ಜಿಯೊಂದನ್ನು ಕೊಟ್ಟು ಅದನ್ನು ಕಂದಾಯ ಇಲಾಖೆಯ ಅಸಿಸ್ಟೆಂಟ್ ಕಮೀಷನರ್ ಮೂಲಕ ಮತ್ತೆ ಜಿಲ್ಲಾಧಿಕಾರಿಗೆ ಪ್ರಸ್ತಾವನೆಯಿಟ್ಟಂತೆ ಮಾಡುವುದು. ಅನಂತರ ಡಿಸಿಯೇ ಅದನ್ನು ಕಂದಾಯ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿಗೆ ಕೋರಿಕೆ ಸಲ್ಲಿಸಿದಂತೆ ಫೈಲು ಬಿಲ್ಡಪ್ ಮಾಡುವುದು. ಆದರೆ ಪ್ರಿನ್ಸಿಪಲ್ ಸೆಕ್ರೆಟರಿ ತಾನೇ ಏನು ಮಾಡಲು ಸಾಧ್ಯ?

ನಡುರಾತ್ರಿ ಸರ್ವೆ!

ಶಿವಮೊಗ್ಗದ ಡಿಸಿ ಕಳಿಸಿಕೊಟ್ಟಿದ್ದ ಕೆರೆ ಉದ್ಧಾರದ ಫೈಲನ್ನು ಪರಿಶೀಲನೆಗೆ ಬಾಕಿ ಇರಿಸಿಕೊಂಡಂತೆ ಕಂದಾಯ ಸಚಿವಾಲಯದಲ್ಲಿ ತಿಪ್ಪೆ ಸಾರಿಸಲಾಯ್ತು. ಇಷ್ಟಾಗಿದ್ದೇ ತಡ 2010ರ ಏಪ್ರಿಲ್ ತಿಂಗಳಲ್ಲಿ ತಾಲ್ಲೂಕು ಸರ್ವೆಯರ್ ರಾಜು ಮತ್ತು ತಹಶೀಲ್ದಾರ್ ಶ್ರೀಧರ್‌ರನ್ನು ಕರೆಸಿಕೊಂಡ ರಾಘು ನಡುರಾತ್ರಿ ಲೈಟು ಹಾಕಿಸಿ ಸರ್ವೆ ಮಾಡಿಸಿದ್ದಾನೆ. ಊರಕೆರೆಯನ್ನು ನಡುರಾತ್ರಿಯಲ್ಲಿ ಸರ್ವೆ ಮಾಡಿಸುವಂತ ಅನಿವಾರ್ಯತೆಯಾದರೂ ಏನಿತ್ತೋ. ಯಾವ ಕಾರಣಕ್ಕೆಂದು ಸರ್ವೆ ನಡೆಯಿತೊ?


ಅಂತೂ ಸರ್ವೆ ನಡೆದ ಮರುದಿನವೇ ಲಾರಿ ಲೋಡುಗಟ್ಟಲೇ ಕಲ್ಲುಮಣ್ಣುಗಳನ್ನು ತರಿಸಿ ಕೆರೆಗೆ ಸುರಿಯಲಾಯ್ತು. ಒತ್ತರಿಸಿದ ಭೂಮಿಯಲ್ಲಿ ಸಿಬಿಎಸ್‌ಸಿ ಶಾಲೆಯ ಬಾಲಕರ ವಸತಿಗೃಹದ ಕಟ್ಟಡ ತಲೆಯೆತ್ತಿತು. ವಸತಿಗೃಹದ ತ್ಯಾಜ್ಯ ಕಲ್ಮಷದ ನೀರನ್ನು ಕೆರೆಗೇ ಬಿಡಲು ಪೈಪನ್ನೂ ಅಳವಡಿಸಲಾಯ್ತು. 2010 ಅಕ್ಟೋಬರ್ ವೇಳೆಗೆಲ್ಲ ಮಲ್ಲಜ್ಜನ ಕಟ್ಟೆಯ ಕೆರೆಯ ದಕ್ಷಿಣ ಭಾಗವೇ ಮಾಯವಾಗಿ ಅಲ್ಲಿ ಕುಮುದ್ವತಿ ಸಿಬಿಎಸ್‌ಸಿ ಶಾಲೆಯ ಕಟ್ಟಡ ರಾರಾಜಿಸತೊಡಗಿತ್ತು.

ಒಂದಿಬ್ಬರು ಕಾಂಗ್ರೆಸ್ ಮುಖಂಡರು ಕೆರೆ ಒತ್ತುವರಿಯ ವಿರುದ್ಧ ಅಲ್ಲಲ್ಲಿ ಕಿಡಿಕಾರಿದ್ದು ಬಿಟ್ಟರೆ ಮುಖ್ಯಮಂತ್ರಿಯೇ ನೇರವಾಗಿ ಕೆರೆ ಒತ್ತುವರಿ ಮಾಡಿದ್ದರ ವಿರುದ್ಧ ದೊಡ್ಡ ಮಟ್ಟದ ಪ್ರತಿಭಟನೆಯಾಗಲಿಲ್ಲ. ರಾಜ್ಯಮಟ್ಟದ ಪತ್ರಿಕೆಗಳಾಗಲಿ, ಟಿವಿಗಳಾಗಲಿ ಇದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ.

ಬೋಗಸ್ ಹಾಸ್ಟೆಲ್

ವಿಚಿತ್ರವೆಂದರೆ ಈ ರೀತಿ ಕೆರೆ ಒತ್ತುವರಿ ಮಾಡಿ ಎಬ್ಬಿಸಿದ ಅಕ್ರಮ ಕಟ್ಟಡಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ 30 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡಿದ್ದರು ಮುಖ್ಯಮಂತ್ರಿ ಯಡ್ಡಿ. ಇದೂ ಕೂಡಾ ಮತ್ತೊಂದು ಸರ್ಕಾರಿ ವಂಚನೆಯಾಗಿತ್ತು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಮತ್ತು ಕುಮುದ್ವತಿ ಕಾಲೇಜು ಕ್ಯಾಂಪಸ್ಸಿಗೆ ಹೊಂದಿಕೊಂಡಂತೆ ಹಿಂಭಾಗದಲ್ಲಿ ಭದ್ರಾಪುರ ರಸ್ತೆಯಲ್ಲೊಂದು ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಇದೆ.

ಹೆಸರಿಗಷ್ಟೆ ಅದು ಹಾಸ್ಟೆಲ್. ಬೋರ್ಡು ಕೂಡ ಇದೆ. ಅದರಲ್ಲಿ ವಿದ್ಯಾರ್ಥಿಗಳೇ ಇಲ್ಲ. ಇದನ್ನೂ ಯಡ್ಡಿಯ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯೇ ನಿರ್ವಹಿಸುತ್ತದೆಯಂತೆ. ಅಧಿಕಾರಿಗಳು ತಪಾಸಣೆಗೆ ಬಂದಾಗಲಷ್ಟೇ ಶಾಲೆಗೆ ಬಂದ ಒಂದಷ್ಟು ವಿದ್ಯಾರ್ಥಿಗಳನ್ನು ಹಾಸ್ಟೆಲಿಗೆ ಕರೆಸಿ ತಲೆ ಎಣಿಕೆಯ ನಂತರ ಮತ್ತೆ ಹಾಸ್ಟೆಲ್ ಖಾಲಿಯಾಗುತ್ತದೆ. ಮಕ್ಕಳ ಪಾಲಿನ ಪ್ರತಿ ತಿಂಗಳ ರೇಷನ್ನು ಮಾರಿಕೊಂಡು ಆ ದುಡ್ಡನ್ನು ಮಗ ರಾಘುವೇ ಜೇಬಿಗಿಳಿಸುತ್ತಾನೆ.



ಕೆರೆ ಕಂಟಕ ಯಡ್ಡಿ

ಇದು ಸಾಲದೆಂಬಂತೆ ಈಗ ಕೆರೆ ಒತ್ತುವರಿ ಮಾಡಿ ಅಲ್ಲಿ ಮತ್ತೊಂದು ಹಾಸ್ಟೆಲ್ ಕಟ್ಟಸುತ್ತೇನೆಂದು ಯಡ್ಡಿ ಕುಟುಂಬ 2009-10ನೇ ಸಾಲಿನಲ್ಲಿ ಮತ್ತೆ 20 ಲಕ್ಷ ರೂ.ಗಳಷ್ಟು ನಿಧಿಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡಿಸಿಕೊಂಡಿದೆ. ಇದೇ ದುಡ್ಡನ್ನು ಬಳಸಿ ತಮ್ಮ ಸಿಬಿಎಸ್‌ಸಿ ಶಾಲೆಯ ಡೊನೇಷನ್ ಕೊಡುವ ಮಕ್ಕಳಿಗೆ ಐಷಾರಾಮಿ ವಸತಿಗೃಹ ಕಟ್ಟಸುತ್ತಿದ್ದಾರೆ.

ಮಲ್ಲಿಗೆಹಳ್ಳಿ ಕೆರೆಗೂ

ವೆಂಕಯ್ಯ ನಾಯ್ಡುವಿನ ರಾಜ್ಯ ಸಭಾ ಸದಸ್ಯರ ನಿಧಿ, ಮಗ ರಾಘವೇಂದ್ರನ ಎಂ.ಪಿ. ಫಂಡಿನಿಂದಲೂ ತಲಾ ಐದೈದು ಲಕ್ಷದಂತೆ ಸಿಬಿಎಸ್‌ಸಿ ಸ್ಕೂಲಿನ ಕಟ್ಟಡಕ್ಕೆ ಸರ್ಕಾರಿ ದುಡ್ಡು ಹರಿದುಬಂದಿದೆ. ಸರ್ಕಾರಿ ದಾಖಲೆಗಳಲ್ಲಿ ವಿವೇಕಾನಂದ ವಿದ್ಯಾಸಂಸ್ಥೆ ದಲಿತ ಹಿಂದುಳಿದವರ ಮಕ್ಕಳಿಗಾಗಿ ವಿದ್ಯಾರ್ಥಿ ನಿಲಯ ನಡೆಸುತ್ತಿದೆ. ಹಾಸ್ಟೆಲ್ ನಿರ್ಮಾಣಕ್ಕೆ ಸರ್ಕಾರಿ ದುಡ್ಡನ್ನೂ ಪಡೆದುಕೊಂಡಿದೆ. ಆದರೆ ವಾಸ್ತವದಲ್ಲಿ ಮಾತ್ರ ಅನುಕೂಲಸ್ಥರಿಂದ ಸಿಕ್ಕಾಪಟ್ಟೆ ಡೊನೇಷನ್ ಕಿತ್ತು ಅವರ ಮಕ್ಕಳಿಗೆ ಐಷಾರಾಮಿ ವಸತಿಗೃಹದ ಸೌಲಭ್ಯ ಕಲ್ಪಿಸುತ್ತದೆ.

ಒಂದೆಡೆ ಸರ್ಕಾರದಿಂದಲೂ ಅನುದಾನ ಜೊತೆಗೆ ಮಕ್ಕಳ ಪಾಲಿನ ರೇಷನ್ನನ್ನೂ ಮಾರಿಕೊಳ್ಳುವುದು ಮತ್ತೊಂದೆಡೆ ಸಿಬಿಎಸ್‌ಸಿ ಮಕ್ಕಳ ಊಟ ಮತ್ತು ಬೋರ್ಡಿಂಗ್ ಖರ್ಚೆಂದು ಅವರ ತಂದೆತಾಯಿಂದಿರಿಂದಲೂ ರೊಕ್ಕ ಕೀಳುವುದು!

ಯಡ್ಡಿ ಒಡೆತನದ ಸ್ವಾಮಿ ವಿವೇಕಾನಂದ ಶಿಕ್ಷಣ ಟ್ರಸ್ಟ್ ಎಂಥಾ ದಗಲ್ಬಾಜಿ ವಂಚಕ ಸಂ... ಇದೊಂದೇ ಸಾಕಲ್ಲವೇ?

ಈಗ ಮಲ್ಲಜ್ಜನಕಟ್ಟೆ ಕೆರೆ ಕಬಳಿಸಿ ತಮ... ಸಾಮ್ರಾಜ್ಯವನ್ನು ವಿಸ್ತರಿಸಿದಂತೆ ಶಿವಮೊಗ್ಗದ... ಕೆರೆಗೂ ಯಡ್ಡಿ ಗ್ಯಾಂಗ್ ಕಣ್ಣುಹಾಕಿದೆ. ಬಿ.ಹೆಚ್. ರಸ್ತೆಯಲ್ಲಿರುವ ಪ್ರತಿಷ್ಠಿತ ಪಿಇಎ... ಕ್ಯಾಂಪಸ್ಸಿಗೆ ಹೊಂದಿಕೊಂಡಂತೆಯೇ ಮಲ್ಲಿಗೆ... ಶಿಕಾರಿಪುರದ ಮಲ್ಲಜ್ಜನಕಟ್ಟೆ ಕೆರೆಯನ್ನು ಅಭ... ಸ್ವಾಮಿ ವಿವೇಕಾನ... ವಿದ್ಯಾಸಂಸ್ಥೆಯಿಂದ ... ಅರ್ಜಿಕೊಟ್ಟಂತೆ ... ಕೆರೆಯನ್ನು ತಮ್ಮ ... ವಹಿಸಿಕೊಡುವಂತೆ ... ಮೈತ್ರಾದೇವಿ ಶಿಕ್ಷ... ಲೆಟರ್‌ಹೆಡ್ ಬಳ... ಮಗ ರಾಘು ಶಿ... ಜಿಲ್ಲಾಧಿಕಾರಿಗೆ ವ... ಅರ್ಜಿ ಸಲ್ಲಿಸಿದ್ದಾನೆ... ಅರ್ಜಿಯನ್ನು ಯ... ಕಂದಾಯ ಸಚಿವಾ... ಸಾಗಹಾಕಲಾಗಿದೆ.

ಬೇಲಿ ಸುತ್ತಿ...


ಈ ರೀತಿ ... ಮಾಡುತ್ತೇವೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿ... ಕ್ರಮೇಣ ಆ ಕೆರೆಯನ್ನೇ ತಮ್ಮ ಡೊನೇಷನ್ ... ಆಕ್ರಮಿಸಿಕೊಳ್ಳುವುದು ಯಡ್ಡಿ ಕುಟುಂಬ... ಮೊನ್ನೆಯ ತನಕ ಮುಕ್ತವಾಗಿದ್ದ ಮಲ್ಲಿಗೆಹ... ತಿಂಗಳ ಹಿಂದಷ್ಟೇ ರಾಘುವೇ ಸಿಂತ... ಹಾಕಿಸಿದ್ದಾನೆ. ಮುಂದೊಮ್ಮೆ ಪಿಇಎಸ್-ಐ... ಕೆರೆತನಕ ವಿಸ್ತರಿಸಿ ಕ್ರಮೇಣ ಕೆರೆಯನ್ನೇ ... ಯಾವ ಅಚ್ಚರಿಯೂ ಇಲ್ಲ.

ಏಕೆಂದರೆ ಈಗಾಗಲೇ ಶಿಕಾರಿಪುರದ ... ಗತಿಕಾಣಿಸಿದ್ದಾಗಿದೆಯಲ್ಲ, ಮುಖ್ಯಮಂತ್ರಿ... ಕೆರೆ ಒತ್ತುವರಿ ಮಾಡಿದರೆ ಮಿಕ್ಕವರಿಗದು ... ನೀಡುತ್ತದೆ ಎಂಬುದಕ್ಕೆ, ಸಣ್ಣ ಉದಾ... ಶಿವಮೊಗ್ಗದ ಜವಾಹರಲಾಲ್ ವಿದ್ಯಾಸಂಸ್ಥೆ... ರೀತಿ ತಮಗೂ ಕೆರೆಯೊಂದನ್ನ ವಹಿಸಿ... ಈಗಾಗಲೇ ಶಿವಮೊಗ್ಗದ ಡಿಸಿಗೆ ಅರ್ಜಿ ...

ಯಾವ ಮುಖ ಹೊತ್ತು ಮುಖ್ಯ... ಇನ್ನು ಕೆರೆ ಕಾಪಾಡುವ ಭಾಷಣ ಬಿಗಿಯ...

ಶಿವಮೊಗ್ಗ-ಶಿಕಾರಿಪುರದಲ್ಲಿ ಇದ... ಪ್ರತಿಭಟಿಸುತ್ತಿಲ್ಲ ಏಕೆ?

● ರಾ. ಸೋ...



...ರಕದಂತಹ ಹಂತವನ್ನು ದಾಟಿ ಬಂದದ್ದು ಹೀಗೆ

ಯಾವುದಕ್ಕೂ ಪರಿಹಾರವಲ್ಲ; ಬದಲಾಗಿ ಸವಾಲುಗಳನ್ನು ಎದುರಿಸಿ ಬದುಕನ್ನು ಗೆದ್ದಾಗ ಸಿಗುವ ...ಷಕ್ಕೆ ಬೆಲೆ ಕಟ್ಟಲಾಗದು ಎಂದು ಪ್ಯಾರಾಪ್ಲೀಜಿಕ್ ಆದ, ಗಾಲಿ ಕುರ್ಚಿ ಹಿಡಿದಿರುವ ಶ್ರೀನಿವಾಸ ...ವರ ಮನಮುಟ್ಟುವ ಜೀವನಾನುಭವ ಇಲ್ಲಿದೆ. ಕಾರ್ಕಳ ಅವರ ಈ ಪತ್ರ ಸಾವಿರಾರು ಜನರಿಗೆ ಎದುರಿಸಲು ಸ್ಫೂರ್ತಿ ನೀಡಲಿ ಎಂಬ ಆಶಯ ನಮ್ಮದು...



...ಗೌರಿ ಲಂಕೇಶ್‌ರಿಗೆ,

...3 ರ ಸಂಚಿಕೆಯಲ್ಲಿ ಸಂಗಮೇಶ್ ಬಳಿಗೇರ್ ಬಗೆಗಿನ 'ಮರೆ...ನಾದಿ ಯುವಕನೊಬ್ಬನ ಸುತ್ತ' ಎಂಬ ತಮ್ಮ ಲೇಖನದಲ್ಲಿ ...ಜಗತ್ತು ಎಷ್ಟು ವಿಸ್ಮಯಕಾರಿ ಅಂದರೆ ನೀವು ಅಂದಾಜಿಸದೆ ...ವ ಸಹಾಯಹಸ್ತ ಚಾಚಿ ಬರುತ್ತದೆ. ಮಾತ್ರವಲ್ಲ ಯಾವುದು ...ಸಹಿಸಲಾಗದಷ್ಟು ನೋವು ಮತ್ತು ಸಂಕಟ ನೀಡುತ್ತಿದೆಯೋ ...ಂದ ನಂತರ ಗೌಣವಾಗುತ್ತದೆ' ಎಂಬ ಸಾಲುಗಳು ನನ್ನನ್ನು ...ಡವು.

...ನನ್ನು ನನ್ನನ್ನೇ ಗಮನದಲ್ಲಿರಿಸಿಕೊಂಡು ನೀವು ಬರೆದಿರುವಿ...ಟ್ಟಿತು. ನೀವು ಹೇಳಿರುವುದು ಅಕ್ಷರಶಃ ಸತ್ಯ ಎನ್ನುವುದಕ್ಕೆ ...ಉದಾಹರಣೆಯಾಗಿರುವುದರಿಂದ ನನ್ನ ಕತೆಯನ್ನು ...ಕೊಳ್ಳೋಣ ಅನಿಸಿತು.

...ಹುಟ್ಟಿದ ನಾನು ಕಾಲೇಜು ದಿನಗಳಿಂದಲೂ ...ಚಾರಣ, ಛಾಯಾಗ್ರಹಣ ಇತ್ಯಾದಿಗಳಲ್ಲಿ ...ಹೊಂದಿ ಕಾಲಿಗೆ ಚಕ್ರಕಟ್ಟಿಕೊಂಡವನಂತೆ ...ವರೆ ಮುಂದೆ ಹೊಟ್ಟೆಪಾಡಿಗಾಗಿ ದುಡಿಯ ...ಬೆಂಗಳೂರಿನ ಎಂಸಿಎಫ್‌ನಲ್ಲಿ (1984 ರಿಂದ). ...ದಿ ಬಿಳಿಮಲೆ ಮತ್ತು ಮಗ ಯಶಸ್ ಸಾಥಿಗಳಾಗಿ ಸೇರಿ ...ನೆಮ್ಮದಿಯ ಸುಖ ಸಂತೋಷದ ಬದುಕಾಗಿತ್ತು.

...ಎಲ್ಲವೂ ಚೆನ್ನಾಗಿದೆ ಸುಖಮಯವಾಗಿದೆ ಎನ್ನುವ ಹಂತದಲ್ಲಿ ...ಮು ದಿನ ವಸತಿಗೃಹದ ಪಕ್ಕದ ಪುಟ್ಟ ಮರವೊಂದರಿಂದ (1998); ಬೆನ್ನುಹುರಿಗೆ ಜಖಂ ಆಯಿತು, ಶಸ್ತ್ರ ಚಿಕಿತ್ಸೆಯೂ ...ರೆ ನಾನು ಶಾಶ್ವತವಾಗಿ ಪ್ಯಾರಾಪ್ಲೀಜಿಕ್ ಆಗಿ ಗಾಲಿಕುರ್ಚಿ ...ರ್ಷಗಳ ಕಾಲ ದುಡಿದ ಕಾರ್ಮಿಕನಿಗೆ ಇಂತಹ ಸಂದರ್ಭದಲ್ಲಿ ...ಸಂಸ್ಥೆ (ಆದಾಗಲೇ ಅದು ಮದ್ಯ ದೊರೆ ವಿಜಯ ಮಲ್ಯರ ...ಮಾನವೀಯತೆ ಮಾಯವಾಗಿ ಖಾಸಗೀಕರಣದ ಕ್ರೌರ್ಯ ...ಂದೆ ನಾನು ಕಾರ್ಮಿಕ ಸಂಘಟನೆಯಲ್ಲಿ ಸಕ್ರಿಯನಾಗಿದ್ದುದನ್ನೇ ನೆಪ ಮಾಡಿಕೊಂಡು ಅಮಾನವೀಯವಾಗಿ ನನ್ನನ್ನು ಕೆಲಸದಿಂದ ವಜಾ ಮಾಡಿತು.

ಒಂದು ಪತ್ರ

ಬದುಕು ಪಾತಾಳವನ್ನು ತಲುಪಿತು. ದೊಡ್ಡದೊಂದು ಶೂನ್ಯ ಬಿದರಿಸಲಾರಂಭಿಸಿತು. ನನ್ನ ಸಂಗಾತಿ ಆಗ ನಿರುದ್ಯೋಗಿ, ಮಗ ಐದನೇ ತರಗತಿಯಲ್ಲಿ ಓದುತ್ತಿದ್ದ. ಯಾವ ಆದಾಯದ ಮೂಲವೂ ಇರಲಿಲ್ಲ. ಮನೆಯೂ ಇಲ್ಲ. ನನಗೆ ಗಾಲಿ ಕುರ್ಚಿಯಲ್ಲೇ ಕುಳಿತು ಮಾಡುವ ಬದಲಿ ಉದ್ಯೋಗವನ್ನಾಗಲಿ, ಬಿಕಾಂ ಪದವೀಧರೆ ನನ್ನ ಪತ್ನಿಗೆ ಅನುಕಂಪ ನೆಲೆಯಲ್ಲಾಗಲಿ ಉದ್ಯೋಗ ನೀಡಲು ನಿರಾಕರಿಸಿದ ಸಂಸ್ಥೆ ಗಾಯದ ಮೇಲೆ ಬರೆ ಎಳೆದಂತೆ ಕ್ವಾರ್ಟರ್ಸ್ ತೊರೆಯಲು ಆದೇಶ ನೀಡಿತು; ಮನೆಯ ನೀರು ವಿದ್ಯುತ್ ಪೂರೈಕೆಯನ್ನು ಕತ್ತರಿಸಿಹಾಕಿತು. ಕಾರ್ಮಿಕ ಗೆಳೆಯರು ಬಹಳ ಕಾಲ ನಮ್ಮನ್ನು ಸಾಕಿದರು. ಆದರೆ ಅವರು ಎಷ್ಟು ಕಾಲ ತಾನೇ ಹಾಗೆ ಮಾಡಬಹುದು?

ಬದುಕುವುದು ಹೇಗೆ ಎಂಬ ಪ್ರಶ್ನೆ ಕಾಡತೊಡಗಿತು. ನಮ್ಮ ಮುಂದಿದ್ದುದು ಎರಡೇ ದಾರಿ. ಸಾಮೂಹಿಕ ಆತ್ಮಹತ್ಯೆ ಅಥವಾ ಧೈರ್ಯವಾಗಿ ಬದುಕನ್ನು ಎದುರಿಸುವುದು. ಹೆಣ್ಣಿನ ಶಕ್ತಿಯ ಪರಿಚಯವಾದುದು ಆಗಲೇ - 'ನೀವೇಕೆ ಚಿಂತಿಸುತ್ತೀರಿ? ನಿಮ್ಮಲ್ಲಿ ಬರೆವಣಿಗೆಯ ಪ್ರತಿಭೆಯಿದೆ, ನಾನೂ ಏನಾದರೂ ಕೆಲಸ ಮಾಡುತ್ತೇನೆ, ಹೇಗಾದರೂ ಬದುಕೋಣ, ಮಗನನ್ನು ಓದಿಸೋಣ' ಎಂದು ನನ್ನ ಸಂಗಾತಿ ಅಂದಳು. ಆ ಮಾತೇ ಒಂದು 'ಟರ್ನಿಂಗ್ ಪಾಯಿಂಟ್' ಆಯಿತು. ಸಂಗಾತಿ ಒಂದು ಎನ್‌ಜಿಒದಲ್ಲಿ ಸಮಾಜ ಕಾರ್ಯಕರ್ತೆಯಾಗಿ ಸೇರಿಕೊಂಡಳು, ನಾನು ಗಾಲಿ ಕುರ್ಚಿಯಲ್ಲಿದ್ದು ಕೊಂಡೇ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸುವ ಕಾರ್ಯದಲ್ಲಿ ತೊಡಗಿದೆ. ಕಂಪ್ಯೂಟರ್ ಕಲಿತೆ; ಬಿಡುವಿಲ್ಲದಷ್ಟು ಕಾರ್ಯನಿರತನಾದೆ. ಇಬ್ಬರೂ ಸಂಪಾದಿಸತೊಡಗಿದೆವು. ನೆಲಸಮವಾದ ಬದುಕನ್ನು ಅನೂಹ್ಯ ರೀತಿಯಲ್ಲಿ ಅದ್ಭುತವೆನಿಸುವಂತೆ ಎತ್ತಿ ಕಟ್ಟಿದೆವು. ಸ್ವಂತ ಮನೆ ಮಾಡಿಕೊಂಡೆವು, ಮಗನನ್ನು ಓದಿಸಿದೆವು (ಎಂಜಿನಿಯರಿಂಗ್ ಓದಿ ಈಗ ಆತ ಇನ್ಫೋಸಿಸ್‌ಗೆ ಆಯ್ಕೆಯಾಗಿದ್ದಾನೆ). ಈ 12 ವರ್ಷಗಳ ಬಳಿಕ ಹಿಂದಿರುಗಿ ನೋಡಿದಾಗ ನಿಜಕ್ಕೂ ಅಚ್ಚರಿಯಾಗುತ್ತದೆ ಗಾಬರಿಯಾಗುತ್ತದೆ.

ಇಲ್ಲಿ ನಾನು ಹೇಳಬೇಕೆಂದುಕೊಂಡಿರುವ ಮುಖ್ಯ ಸಂಗತಿಯೆಂದರೆ- ನೀವಂದಂತೆಯೇ ನನ್ನ ಬಾಳಿನಲ್ಲಿಯೂ ನಡೆದುಹೋಯಿತು. ನಾನು ಚೆನ್ನಾಗಿದ್ದಾಗ ನನ್ನೊಂದಿಗೆ ಭಾರೀ ಸ್ನೇಹಿತರಂತಿದ್ದ, ಸ್ನೇಹಕೂಟಗಳಲ್ಲಿ ನನ್ನೊಂದಿಗೆ ಕುಡಿಯುತ್ತಿದ್ದ ಕುಣಿಯುತ್ತಿದ್ದ ಅನೇಕಾನೇಕ ಗೆಳೆಯರಲ್ಲಿ ಎಷ್ಟು ಜನ ನಿಜವಾದ ಗೆಳೆಯರು, ಹಿತೈಷಿಗಳು ಎನ್ನುವುದು ಸತ್ವಪರೀಕ್ಷೆಯ ಕಾಲದಲ್ಲಿ ನನಗೆ ಅರ್ಥವಾಯಿತು. ನೂರಾರರಲ್ಲಿದ್ದ ಗೆಳೆಯರು, ನಾನು ಕೆಲಸ ಕಳೆದುಕೊಂಡು ಗಾಲಿ ಕುರ್ಚಿ ಸೇರಿದಾಗ ಹತ್ತಾರಕ್ಕಿಳಿದರು. ಇನ್ನೂ ಕೆಲವು ವರ್ಷ ಕಳೆದಾಗ 'ಔಟ್ ಆಫ್ ಸೈಟ್ ಈಸ್ ಔಟ್ ಆಫ್ ಮೈಂಡ್' ಎನ್ನುವುದು ರುಜುವಾತಾಗಿ ಗೆಳೆಯರ ಸಂಖ್ಯೆ ಬೆರಳೆಣಿಕೆಗೆ ಇಳಿಯಿತು. ಆದರೆ ವಿಸ್ಮಯ ಎಂದರೆ ನನಗೆ ಏನೇನೂ ಸಂಬಂಧವಿಲ್ಲದ, ಕಿಂಚಿತ್ತೂ ಪರಿಚಿತವಲ್ಲದ 'ಎಲ್ಲಿಂದಲೋ ಬಂದವರು' ನನ್ನ ನೆರವಿಗೆ ಧಾವಿಸಿದರು. ಊಹಿಸದಂತಹ ಸಹಾಯ ಮಾಡಿದರು. ಒಂದು ಬಾಗಿಲು ಮುಚ್ಚಿದಾಗ ಇನ್ನೊಂದು ಬಾಗಿಲು ತೆರೆದುಕೊಳ್ಳುತ್ತದೆ ಎಂಬುದನ್ನು ಸಾಬೀತು ಪಡಿಸಿದರು. ಬದುಕಿನಲ್ಲಿ ಮಾತ್ರವಲ್ಲ ಜಗತ್ತಿನಲ್ಲಿ ವಿಶ್ವಾಸ ಮೂಡುವಂತೆ ಮಾಡಿದರು.

ಬದುಕು ಮತ್ತು ಜಗತ್ತು ನಾವು ಅಂದುಕೊಂಡಷ್ಟು ಕೆಟ್ಟದಾಗಿಲ್ಲ. ಆತ್ಮಹತ್ಯೆ ಯಾವುದಕ್ಕೂ ಪರಿಹಾರವಲ್ಲ. ನಮಗಿಂತ ಸುಖವಾಗಿರುವ ಮೇಲಿನವರನ್ನು ನೋಡುವುದಲ್ಲ, ನಮಗಿಂತ ಕಷ್ಟದಲ್ಲಿರುವ ಕೆಳಗಿನವರನ್ನು ನೋಡಿ ನಾವು ಬದುಕಬೇಕು. ಸಾಯುವುದು ಬಹಳ ಸುಲಭ, ಆದರೆ ಬದುಕುವುದು ಸುಲಭವಲ್ಲ. ಸವಾಲುಗಳನ್ನು ಎದುರಿಸಿ, ಸುಲಭವಲ್ಲದ ಇಂತಹ ಬದುಕನ್ನು ಗೆದ್ದಾಗ ಸಿಗುವ ಆತ್ಮಸಂತೋಷ ಇದೆಯಲ್ಲ ಅದು ಬೆಲೆಕಟ್ಟಲಾಗದ್ದು.

ನಿಮ್ಮ ಮಾತು ನನ್ನ ಬದುಕನ್ನು ಮತ್ತೊಮ್ಮೆ ತಿರುಗಿನೋಡುವಂತೆ ಮಾಡಿತು. ಅದಕ್ಕಾಗಿ ಧನ್ಯವಾದಗಳು.

ನಿಮ್ಮ,

ಶ್ರೀನಿವಾಸ ಕಾರ್ಕಳ

'ನೆಲೆ' ಭಜನಾಮಂದಿರ ರಸ್ತೆ, ಬಿಜೈ, ಮಂಗಳೂರು, 575004

...ಹಾಬಲಿ V/s ಭಾರತೀಯ (ಬ್ರಾಹ್ಮಣ-ಬನಿಯಾ) ಪ್ರಭುತ್ವ

...ವಿವಾದ ಕುರಿತು ...ಹೈಕೋರ್ಟಿನ 'ಪೌರಾಣಿಕ' ...ರಬಿದ್ದಾಗ JNUನ ಇತಿಹಾಸ ...ಕಾರ್ತಿಕ್ ಎಂಬುವವರು ...ಬನೆಯನ್ನು ಇಲ್ಲಿ ಕೊಂಚ ...ಸಿ ನೀಡುತ್ತಿದ್ದೇವೆ.



...ಆನರ್,

...ಉದ್ಯೋಗಿಗಳು ಕೊಡಮಾಡಿದ ಬಾಬ್ರಿ ...ವಾದದ... ಅಯ್ಯಯ್ಯೋ ಅಲ್ಲಲ್ಲ... ...ು ವಿವಾದದ ಕುರಿತ ತೀರ್ಪನ್ನು ಓದಿ ...ಎಂದು ಹೇಳಲೇಬೇಕಾಗಿದೆ. ನೈಜ ಅಥವಾ ...ಧಾರ್ಮಿಕ ವಿವಾದಗಳನ್ನು ಬಗೆಹರಿಸಲು ...ಆಧುನಿಕ ಭಾರತದ ನ್ಯಾಯ ಸಂಸ್ಥೆಗಳು ...ಜ್ಞೆಯನ್ನು ಗೊತ್ತೇ ಇಲ್ಲದ ಭೂತಕಾಲಕ್ಕೆ ... ಆದ್ದರಿಂದ ನಿಮ್ಮ ಕ್ರಾಂತಿಕಾರಿ ನ್ಯಾಯ ...ೀ ವಿಶ್ವಾಸವಿಟ್ಟು ನಾನು ನನ್ನ ಕಕ್ಷಿದಾರನ ...ಪೀಲು ಮಾಡುತ್ತಿದ್ದೇನೆ.

...ಭೂಮಿ ತೀರ್ಪಿನಲ್ಲಿ 'ಲಾರ್ಡ್' ರಾಮ ...ಕ್ತಿಯಾಗಿ ಮಾನ್ಯತೆ ಪಡೆದುಕೊಂಡಿರು... ಕಕ್ಷಿದಾರ ಚಕ್ರವರ್ತಿ ಮಹಾಬಲಿಯ ...ಪರಿಗಣಿಸಬೇಕೆಂದು ...ವು ರಾಮಲಲ್ಲಾನ ...ಂದು ನಿಖರವಾಗಿ ...ಗೋಳಿಕ ಜಾಗ ...ಡುವಲ್ಲಿ ಶಕ್ತರಾಗಿ ... ಆಗಾಧ Geo- ...ಸಂಶೋಧನೆಯನ್ನು ...ಗಲ್ ಅರ್ಥ್‌ನವರು ...ರುವ ರಾಮನ ...ನ್ನು ತಮ್ಮ ಸ್ಯಾಟ್... ...ಲೊಕೇಟ್ ಮಾಡಲು ನಿರ್ಧರಿಸುವುದು

...ಮಹಾಬಲಿಯು ಕೇರಳ ಪ್ರಾಂತ್ಯದ ...ನು ನಮ್ಮ ವಾದಕ್ಕೆ ಮಾನ್ಯತೆ ನೀಡಬೇಕು.

ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಸರ್. ಮಹಾಬಲಿ ಮತ್ತು ಆತನ ಅನುಯಾಯಿಗಳಿಗಾಗಿರುವ ಐತಿಹಾಸಿಕ ಮತ್ತು ಧಾರ್ಮಿಕ ಅನ್ಯಾಯವನ್ನು ನಾವು ಬೆಳಕಿಗೆ ತರಲು ಬಯಸುತ್ತೇವೆ.

ನೀವು ಕಾನೂನು ಭಾಷೆಯಲ್ಲಿ ಹೇಳುವ 'ಹಿಂದುಳಿದ ಜಾತಿ'ಗೆ ಸೇರಿದ ಚಕ್ರವರ್ತಿಯಾಗಿದ್ದ ಮಹಾಬಲಿ. ಈಗ ಹ್ಯಾಗೆ 'ಲಾರ್ಡ್' ರಾಮಸಾಹೇಬರು ಉಚ್ಚ ಜಾತಿಗಳಿಗೋ, ಹಂಗೇ ಮಹಾಬಲಿ ತುಳಿತಕ್ಕೊಳಗಾದ ಜಾತಿಯವರಿಗೆ ಆಗಿದ್ದ. ಒಂದು ವೇಳೆ ಆತನ ಐತಿಹಾಸಿಕ ಮಹತ್ವದ ಬಗ್ಗೆ ನಿಮಗೆ ಹೆಚ್ಚಿನ ಮಾಹಿತಿ ಬೇಕಿದ್ದರೆ ಮಹಾತ್ಮ ಫುಲೆ ಅವರ ಕೃತಿಗಳನ್ನು ರೆಫರ್ ಮಾಡಬಹುದು. ಮಹಾಬಲಿಯ ಆಡಳಿತದಲ್ಲಿ ಎಲ್ಲಾ ವರ್ಗದವರನ್ನು ಒಂದೇ ರೀತಿಯಲ್ಲಿ ಅಂದರೆ ಸಮಾನತೆಯಲ್ಲಿ ನೋಡಲಾಗುತ್ತಿತ್ತು, ಆದರೇನ್ಮಾಡೋದು? ಕೆಳಜಾತಿಯ ಚಕ್ರವರ್ತಿಯ ಈ ಜನೋಪಕಾರಿ ಆಡಳಿತ ಕಂಡು ಹೊಟ್ಟೆಕಿಚ್ಚು ಪಟ್ಟ ವಿಷ್ಣು ದೇವನು ಬ್ರಾಹ್ಮಣ ಸನ್ಯಾಸಿ ವಾಮನನ ವೇಷದಲ್ಲಿ ಬಂದು ಮಹಾಬಲಿಯನ್ನು ಮೋಸಗೊಳಿಸಿದ. ಆತನನ್ನು ಅಂಡರ್‌ವರ್ಲ್ಡ್‌ಗೆ ನೂಕಿಬಿಟ್ಟ. (ನನಗನಿಸುವಂತೆ ವಿಷ್ಣುವಿನ ವಿರುದ್ಧ Impersanation ಕೇಸನ್ನು ಜಡಿಯಬಹುದೇನೋ...)

ಇರಲಿ, ಮುಂದೆ ಕಾಲಾಂತರದಲ್ಲಿ ಬ್ರಾಹ್ಮಣೀಯ ಆಳುವ ವರ್ಗಗಳು ನನ್ನ ಕಕ್ಷಿದಾರ ಮಹಾಬಲಿಗೆ ಇತಿಹಾಸದಲ್ಲಿ ಸ್ಥಾನ ನೀಡಲು ನಿರಾಕರಿಸಿದವು. ಅಷ್ಟೇ ಅಲ್ಲ, ತಮ್ಮ ಆಳ್ವಿಕೆಯನ್ನು ಕಾನೂನುಬದ್ಧಗೊಳಿಸಿಕೊಳ್ಳಲು ಮತ್ತು ಮಹಾಬಲಿಯ ಸಂಹಾರವನ್ನು ಸರಿ ಎಂದು ತೋರಿಸಲು ಸುಳ್ಳು ಕತೆಗಳನ್ನು ಹೆಣೆದುಬಿಟ್ಟವು. ಇದರ ಪರಿಣಾಮವಾಗಿ, ಜನಸಂಖ್ಯೆಯಲ್ಲಿ ಬಹುಜನರಾಗಿರುವ ಆತನ ಅನುಯಾಯಿಗಳಾದ ಹಿಂದುಳಿದ ಜಾತಿಗಳವರಿಗೆ ಭಾರೀ ಅನ್ಯಾಯವಾಯಿತು. ಅವರು ತಮ್ಮ ರಾಜಕೀಯ -ಆಧ್ಯಾತ್ಮಿಕ ಸಂಕೇತವನ್ನು ಕಳೆದುಕೊಂಡಿದ್ದಲ್ಲದೆ, ಭೌತಿಕ ನಷ್ಟವನ್ನು ಅನುಭವಿಸಿದರು. ವಿಷ್ಣುವಿನ ಕಾರಣದಿಂದಾಗಿ ಅವರು ತಮ್ಮ ಸಂಪತ್ತು, ಭೂಮಿಗಳನ್ನು, ಇದಕ್ಕಿಂತ ಹೆಚ್ಚಾಗಿ ತಮ್ಮ ಆತ್ಮಗೌರವವನ್ನು ಕಳೆದುಕೊಳ್ಳುವಂತಾಗಿ ಶತಮಾನಗಳ ಕಾಲ ಅಮಾನವೀಯ ಶಿಕ್ಷೆ ಅನುಭವಿಸಿದರು. ಯುವರ್ ಆನರ್, ಇದೆಲ್ಲದರ ಸಾಮಾಜಿಕ ಮತ್ತು ಐತಿಹಾಸಿಕ ಮಹತ್ವವನ್ನು ತಾವು ಅರ್ಥಮಾಡಿಕೊಳ್ಳುವಿರೆಂದು ನನಗೆ ಖಂಡಿತಾ ನಂಬಿಕೆ ಇದೆ.

ಹೀಗಾಗಿ ರಾಮಜನ್ಮಭೂಮಿ ಕುರಿತ ಅಲಹಾಬಾದ್ ತೀರ್ಪನ್ನು ಗಮನದಲ್ಲಿಟ್ಟುಕೊಂಡು, ನಾವು ಈ ಪಕ್ಕದ ಅಂಶಗಳನ್ನು ಪರಿಶೀಲಿಸಬೇಕೆಂದು ಕೇಳುತ್ತೇನೆ:

1. ಕೇರಳವು ಮಹಾಬಲಿಯ ರಾಜ್ಯವಾಗಿತ್ತು. (ಮಹಾತ್ಮಾ ಫುಲೆ ಪ್ರಕಾರ ಅದಿನ್ನೂ ದೊಡ್ಡದಿತ್ತು, ಸದ್ಯ ನಾವು ಕೇರಳಕ್ಕಷ್ಟೇ ಸೀಮಿತಗೊಳಿಸಿದ್ದೇವೆ). ವಿಷ್ಣುವಿನ ಅಲಿಯಾಸ್ ರೂಪವಾದ ವಾಮನನ ಸಹಾಯದಿಂದ ಇದನ್ನು ಬ್ರಾಹ್ಮಣರು ಅಪಹರಿಸಿದ್ದಾರೆ.

2. ಕೇರಳವು ಮಹಾಬಲಿ ಲಲ್ಲಾನ ಬರ್ತ್‌ಪ್ಲೇಸ್ ಆಗಿರುವುದರಿಂದ ಕೇರಳದ 2/3 ಭಾಗ ಆತನ ಅನುಯಾಯಿಗಳಾದ ಹಿಂದುಳಿದ ಜಾತಿಗಳವರಿಗೆ ಸೇರಬೇಕೆಂದು ನಾವು ಬಯಸುವೆವು. ಹೌದು, ಸಾಕಷ್ಟು ಚರ್ಚೆಯಾದ ನಂಬೂದಿರಿಪಾದ್‌ರವರ ಭೂ ಸುಧಾರಣೆಯ ನಂತರವೂ, ಈ ರಾಜ್ಯದಲ್ಲಿ ಬ್ರಾಹ್ಮಣರಿಗೆ ಅಪಾರ ಪ್ರಮಾಣದ ಲ್ಯಾಂಡ್ ಹೋಲ್ಡಿಂಗ್ಸ್‌ಗಳಿವೆ.

3. ಕೇರಳದ ಎಲ್ಲ ಬ್ರಾಹ್ಮಣ ದೇವಸ್ಥಾನಗಳ ಅಧ್ಯಯನವನ್ನು ಮಾಡಲು ಒಂದು ಎಎಸ್‌ಐ (ಭಾರತೀಯ ಸರ್ವೇಕ್ಷಣಾ ಇಲಾಖೆ) ಟೀಮನ್ನು ರಚಿಸಬೇಕು. ಈ ದೇವಸ್ಥಾನಗಳನ್ನು ಹಿಂದುಳಿದ ಜಾತಿಯ ದೇವಸ್ಥಾನಗಳನ್ನು ಕೆಡವಿ ಕಟ್ಟಲಾಗಿದ್ದು ಕಂಡುಬಂದರೆ, ಈ ಎಲ್ಲ ದೇವಸ್ಥಾನಗಳನ್ನು ಡೆಮಾಲಿಶ್ ಮಾಡಿ, ಅಲ್ಲಿ ಮೂಲದೇವಸ್ಥಾನಗಳನ್ನು ಮರುನಿರ್ಮಾಣ ಮಾಡಲು ಕೂಡಲೇ ಕ್ರಮ ಕೈಗೊಳ್ಳಬೇಕು.

4. ಗೂಗಲ್ ಅರ್ಥ್ ಮ್ಯಾಪಿನಲ್ಲಿ ಮಹಾಬಲಿಯ ಬರ್ತ್‌ಪ್ಲೇಸ್‌ಗೂ ಸ್ಥಾನ ಕಲ್ಪಿಸಬೇಕು.

ವಂದನೆಗಳೊಂದಿಗೆ,

● 'ಲಂಕೇಶ್' ಬಳಗದ ತರಲೆ

ಲಗತ್ತಿಸಿದ ಪೂರಕ ದಾಖಲೆಗಳು

1. ಮಥುರಾದಲ್ಲೇ ಕೃಷ್ಣ ಹುಟ್ಟಿದ ಎಂಬ ಅಧ್ವಾನಿ, ಸುಷ್ಮಾಗಳ ಸಂಶೋಧನೆ
2. ದತ್ತ ಪುರಾಣ ಪುರುಷನಲ್ಲ, ಆತ ಐತಿಹಾಸಿಕ ಪುರುಷ. ಆತ ಬಾಬಾ ಬುಡನ್‌ಗಿರಿಯಲ್ಲಿ ಉಂಡಿದ್ದ, ಮಲಗಿದ್ದ, ಒಂದಾ ಮಾಡಿದ್ದ ಎಂಬುದಕ್ಕೆ ದಾಖಲೆಗಳಿವೆ. ಮುತ್ತು ಅಲ್ಲಿ ಆತ ಕಾಫಿ ಎಸ್ಟೇಟ್ ಮಾಲೀಕನಾಗಿದ್ದ ಎಂಬುದಕ್ಕೂ ಸಾಕ್ಷ್ಯಾಧಾರಗಳಿವೆ ಎಂದು ಕರ್ನಾಟಕದ 'ಸಂಶೋಧಕ' ಚಿಮೂರವರು ಆವಿಷ್ಕಾರ ಮಾಡಿದ ಒಂದು ಪುಟದ ಸಂಶೋಧನಾ ಬರಹ. ಈ ಕಾರಣಕ್ಕೆ ಬಾಬಾ ಬುಡನ್‌ಗಿರಿಯನ್ನು ದತ್ತ ಪೀಠ ಎಂದು ನ್ಯಾಯಾಧೀಶರಂತೆ ಘೋಷಿಸುತ್ತಲೇ ಬಂದಿರುವ ಅವರ ನೂರಾರು ಹೇಳಿಕೆಗಳನ್ನು ಒಳಗೊಂಡ 786 ಪುಟದ ಪತ್ರಿಕಾ ದಾಖಲೆಗಳ ಸಂಗ್ರಹ.
3. ಅಯೋಧ್ಯೆಯಲ್ಲಿರುವ ಗುಮ್ಮಟದ ಸೆಂಟರ್‌ನಲ್ಲೇ ರಾಮ ಹುಟ್ಟಿದ್ದು ನೂರಕ್ಕೆ ನೂರು ಸತ್ಯ ಎಂದು ಪ್ರತಿಪಾದಿಸಿದ ನ್ಯಾ. ಶರ್ಮಾರವರ ತೀರ್ಪಿನ ಭಾಗ. 'ಹಿಂದೂ ಧರ್ಮದ ಪ್ರಕಾರ ದೇವನು ಒಂದು ಸ್ಥಳದಲ್ಲಿದ್ದಾನೆ ಎಂದು ಭಾವಿಸಿದರೆ ಸಾಕು, ಅಲ್ಲಿ ದೇವರಿರುತ್ತಾನೆ' ಎಂಬ ಅವರ 'ಐತಿಹಾಸಿಕ' ಸಂಶೋಧನೆಯ ಕರಡನ್ನು ಲಗತ್ತಿಸಿದ್ದೇನೆ.
4. ಪ್ರಮೋದ್ ಮುತಾಲಿಕ್, ಪ್ರವೀಣ್ ತೊಗಾಡಿಯಾರಂತಹ ಇತಿಹಾಸ ತಜ್ಞರ ಭಾಷಣಗಳ ಧ್ವನಿಮುದ್ರಿಕೆಗಳು....

ಕಾಮನ್‌ವೆಲ್ತ್ ಬೆಳಕಿನ ಬೆನ್ನ ಹಿಂದಿನ ಕತ್ತಲೆಯ ಉಂಡವರು



ಆಟೋ, ಟ್ಯಾಕ್ಸಿ ಚಾಲಕರಿಗೆ ಕಾಮನ್ವೆಲ್ತ್ ಗೇಮ್ಸ್ ಕೊಂಚ ದುಡ್ಡು ಮಾಡಿಕೊಳ್ಳಲು ಹೊಸ ದಾರಿಯೊಂದನ್ನು ತೋರಿಸಿದರೆ, ಸೈಕಲ್ ರಿಕ್ಷಾಗಳು ಬೀದಿಗಿಳಿಯುವುದೇ ಅಪರಾಧ ಅನ್ನುವಂತೆ ಕಾಮನ್ವೆಲ್ತ್ ಗೇಮ್ಸ್ ಸಮಿತಿ ವರ್ತಿಸತೊಡಗಿತು. ಇದರಿಂದಾಗಿ ಮೆಟ್ರೋ, ಟ್ಯಾಕ್ಸಿ, ಆಟೋ ಜೊತೆಗಿನ ರೇಸಿನಲ್ಲಿ ಸೈಕಲ್ ರಿಕ್ಷಾವಾಲಾಗಳು ನಿಜಕ್ಕೂ ಕುಸಿದು ಹೋದರು. ಮೆಟ್ರೋ ನಿಲ್ದಾಣದಿಂದ ಕರೋಲ್ ಬಾಗ್, ರಾಜೇಂದ್ರ ಪ್ಲೇಸ್‌ಗೆ ಮೂವತ್ತರಿಂದ ಐವತ್ತು ರೂಪಾಯಿ ತೆಗೆದುಕೊಳ್ಳುತ್ತಿದ್ದ ಸೈಕಲ್ ರಿಕ್ಷಾ ಚಾಲಕರು ಕಾಮನ್ವೆಲ್ತ್ ಗೇಮ್ಸ್ ಮುಟ್ಟಿಸಿದ ಬಿಸಿಗೆ ಹತ್ತು ರೂಪಾಯಿಗೆ ಇಳಿದುಬಿಟ್ಟರು.

ವಿಶೇಷ ಲೇಖನ

• ಕೆ.ಎಲ್.ಚಂದ್ರಶೇಖರ್ ಐಜೂರ್
chandruaijoor@gmail.com

ನಾಲ್ಕು ವರ್ಷಗಳ ಹಿಂದೆ ಸುಪ್ರೀಂ ಕೋರ್ಟ್ ದಿಲ್ಲಿಯ ಬೀದಿಗಳಲ್ಲಿ ಅನ್ನ ಮಾರುವ ಜನರೆಡೆಗೆ ವಕ್ರದೃಷ್ಟಿ ಬೀರಿತ್ತು, ಹಾದಿಬೀದಿಗಳಲ್ಲಿ ಕಡಿಮೆ ದುಡ್ಡಿಗೆ ಅನ್ನ ಮಾರುವ ಜನರಿಂದ ಫುಟ್ಪಾತ್‌ಗಳಲ್ಲಿ ಗಲೀಜು ಹೆಚ್ಚಾಗಿ ದಿಲ್ಲಿಯ ಅಸಲಿ ಸೌಂದರ್ಯಕ್ಕೆ ಕುರೂಪ ಮೆತ್ತಿಕೊಳ್ಳುತ್ತದೆಂಬ ನೆಪವೊಡ್ಡಿದ ಸುಪ್ರೀಂ ಕೋರ್ಟ್ ಹಾಗೆ ಬೀದಿ ಬದಿಗಳಲ್ಲಿ ಅನ್ನದಂಗಡಿ ತೆರೆಯುವುದರ ಮೇಲೆ ನಿಷೇಧ ಹೇರಿತು. ದಿಲ್ಲಿಯ ಶಿಸ್ತಿನ ರಸ್ತೆಗಳಲ್ಲಿ ಸೌಂದರ್ಯ ಹುಡುಕ ಹೊರಟವರಿಗೆ ಅದೇ ರಸ್ತೆಗೆ ಬಿದ್ದವರ ಬದುಕು ಹೇಗೆ ತಾನೇ ಕಂಡೀತು? ಸದ್ಯಕ್ಕೆ ಕಾಮನ್ವೆಲ್ತ್ ಗೇಮ್ಸ್ ಮುಗಿದು ದಿಲ್ಲಿ ಕೊಂಚ ನಿರಾಳವಾದಂತೆ ಕಾಣುತ್ತಿದೆ. ಆದರೆ ಆಟದ ನೆಪದಲ್ಲಿ ಕಾಮನ್ವೆಲ್ತ್ ಗೇಮ್ಸ್‌ನ ದುಡ್ಡಿನ ಜನ ಬಡಪಾಯಿ ಸೈಕಲ್ ರಿಕ್ಷಾವಾಲಾಗಳ ಕುಟುಂಬಗಳನ್ನು ಉಪವಾಸದಲ್ಲಿ ಕೆಡವಿದ ನೋವಿನ ಕತೆ ಕಡೆಗೂ ಜಗತ್ತಿಗೆ ಗೊತ್ತಾಗಲೇ ಇಲ್ಲ.

ಕಾಮನ್ವೆಲ್ತ್ ಗೇಮ್ಸ್ ಶುರುವಾಗುವ ಒಂದು ವಾರ ಮುಂಚೆ ದಿಲ್ಲಿಯ ರಾಜಬೀದಿ, ಕಪ್ಪು ಡಾಂಬರು ತುಂಬಿಕೊಂಡಿರುವ ಪ್ರಮುಖ ರಸ್ತೆಗಳಲ್ಲಿ 'ಗೇಮ್ ಲೇನ್' ಹೆಸರಿನಲ್ಲಿ ರಸ್ತೆಯ ಒಂದು ಭಾಗವನ್ನು ಪ್ರತ್ಯೇಕಿಸಿ ಅದಕ್ಕೆ ಹಳದಿ ಬಣ್ಣದ ಗೆರೆ ಎಳೆಯಲಾಯಿತು. ಅಕಸ್ಮಾತ್ ಈ ಗೆರೆ ತುಳಿದು ಒಳಬರುವ ವಾಹನಗಳಿಗೆ ಮುಲಾಜಿಲ್ಲದೆ ದಂಡ ವಿಧಿಸಲಾಯಿತು. ಇಂತಹ ರಸ್ತೆಗಳಿಗೆ, ಆಟದ ನೆಪದಲ್ಲಿ ದಿಲ್ಲಿಗೆ ಬಂದ ವಿದೇಶಿ ಪ್ರತಿನಿಧಿಗಳಿಗೆ ರಾಜಧಾನಿಯ ನಿಜವಾದ ಮುಖ ಗೊತ್ತಾಗಬಾರದೆಂದು ಸೈಕಲ್ ರಿಕ್ಷಾಗಳು ರಸ್ತೆಗಿಳಿಯುವುದರ ಮೇಲೆ ಸರ್ಕಾರ ಹದಿನೈದು ದಿನಗಳ ಮಟ್ಟಿಗೆ ಕಡಿವಾಣ ತಂದಿತು. ಕಾಮನ್ವೆಲ್ತ್ ಗೇಮ್ಸ್ ನಡೆಯುತ್ತಿರುವ ಎಲ್ಲ ಪ್ರದೇಶಗಳಲ್ಲೂ 'ನೋ ಎಂಟ್ರಿ ಫಾರ್ ಸೈಕಲ್ ರಿಕ್ಷಾ' ಬೋರ್ಡನ್ನು ತಗುಲಿ ಹಾಕಲಾಯಿತು. ಇದರ ಪರಿಣಾಮ ಐವತ್ತು ಸಾವಿರಕ್ಕೂ ಹೆಚ್ಚಿನ ಸೈಕಲ್ ರಿಕ್ಷಾಗಳು ಮತ್ತು ಅದರಿಂದಲೇ ಅನ್ನ ಸಂಪಾದಿಸಲು ಹೊರಟವರು ಕಾಮನ್ವೆಲ್ತ್ ಗೇಮ್ಸ್‌ನ ಹಾಲುಬೆಳಕಿನ ಬೆನ್ನ ಹಿಂದಿನ ಕತ್ತಲನ್ನಷ್ಟೆ ಉಣ್ಣುವಂತಾಯಿತು.

ಕಾಮನ್ವೆಲ್ತ್ ಗೇಮ್ಸ್ ಹತ್ತಿರ ಬರುತ್ತಿದ್ದಂತೆಯೇ ಆಟ ನಡೆಯಲಿರುವ ಸೆಂಟ್ರಲ್ ವಿಸ್ತಾ, ಡೆಲ್ಲಿ ವಿಶ್ವವಿದ್ಯಾಲಯ, ಗ್ರೀನ್ ಪಾರ್ಕ್, ಇಂದಿರಾ ಗಾಂಧಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಜವಾಹರಲಾಲ್ ನೆಹರೂ ಸ್ಟೇಡಿಯಂ, ಮೇಜರ್ ಧ್ಯಾನ್‌ಚಂದ್ ನ್ಯಾಶನಲ್ ಸ್ಟೇಡಿಯಂ, ಟಲ್ಕಟೋರ ಇನ್‌ಡೋರ್ ಸ್ಟೇಡಿಯಂ, ಕಾಮನ್ವೆಲ್ತ್ ಗೇಮ್ಸ್ ವಿಲೇಜ್, ಇಂದ್ರಪ್ರಸ್ಥ... ಮುಂತಾದ ಸ್ಥಳಗಳ ಸುತ್ತಲೂ ದಿಲ್ಲಿ ಪೊಲೀಸರೊಂದಿಗೆ ಭಾರತೀಯ ಸೈನಿಕರು ಪಹರೆಗೆ ನಿಂತರು. ಸೆಪ್ಟೆಂಬರ್ ಮೂವತ್ತರ ರಾತ್ರಿ ದಿಲ್ಲಿ ಹಠಾತ್ ಬದಲಾಗಿತ್ತು, ಹತ್ತಾರು ವರ್ಷಗಳಿಂದ ನ್ಯಾಯದ ಬೇಡಿಕೆ ಇಟ್ಟುಕೊಂಡು ಬೀದಿಗಿಳಿದು ಹೋರಾಟ ನಡೆಸುತ್ತಿರುವ ಹರಿಯಾಣ, ಪಂಜಾಬ್, ಚಂಢೀಗಡ, ದಿಲ್ಲಿಯ ರೈತ, ಕೂಲಿ ಕಾರ್ಮಿಕ ಹೋರಾಟಗಾರರನ್ನು ಭಾರತೀಯ ಸೈನಿಕರು ಬಂದೂಕು ತೋರಿಸಿ ಐತಿಹಾಸಿಕ ಪ್ರದೇಶ ಜಂತರ್ ಮಂತರ್‌ನಿಂದ ರಾತ್ರೋರಾತ್ರಿ ಜಾಗ ಖಾಲಿಮಾಡಿಸಿದ್ದರು. ಅಕ್ಟೋಬರ್ ಒಂದನೇ ತಾರೀಖಿನಿಂದ ಕಾಮನ್ವೆಲ್ತ್ ಗೇಮ್ಸ್ ಮುಗಿಯುವ ಕೊನೆಯ ಕ್ಷಣದವರೆಗೂ ದಿಲ್ಲಿ ನಿಜಕ್ಕೂ ಸೈನಿಕರ ಹಿಡಿತದಲ್ಲಿತ್ತು, ಶಾಲೆಗಳಿಗೆ ಹದಿನೈದು ದಿನ ರಜೆ ನೀಡಲಾಗಿತ್ತು, ದಿಲ್ಲಿಯಲ್ಲಿ ಹುಟ್ಟಿಬೆಳೆದಿದ್ದರೂ ಸರಿಯಾದ ಗುರುತಿನ ಪತ್ರವಿಲ್ಲದಿದ್ದವರು ಕಾಮನ್ವೆಲ್ತ್ ಗೇಮ್ಸ್ ನಡೆಯುವ ಪ್ರದೇಶಗಳಲ್ಲಿ ಕಾಲಿಡುವುದು ಕಷ್ಟವಾಗಿತ್ತು.

ಆಟೋ, ಟ್ಯಾಕ್ಸಿ ಚಾಲಕರಿಗೆ ಕಾಮನ್ವೆಲ್ತ್ ಗೇಮ್ಸ್ ಕೊಂಚ ದುಡ್ಡು ಮಾಡಿಕೊಳ್ಳಲು ಹೊಸ ದಾರಿಯೊಂದನ್ನು ತೋರಿಸಿದರೆ, ಸೈಕಲ್ ರಿಕ್ಷಾಗಳು ಬೀದಿಗಿಳಿಯುವುದೇ ಅಪರಾಧ ಅನ್ನುವಂತೆ ಕಾಮನ್ವೆಲ್ತ್ ಗೇಮ್ಸ್ ಸಮಿತಿ ವರ್ತಿಸತೊಡಗಿತು. ಇದರಿಂದಾಗಿ ಮೆಟ್ರೋ,ಟ್ಯಾಕ್ಸಿ,ಆಟೋ ಜೊತೆಗಿನ ರೇಸಿನಲ್ಲಿ ಸೈಕಲ್ ರಿಕ್ಷಾವಾಲಾಗಳು ನಿಜಕ್ಕೂ ಕುಸಿದು ಹೋದರು. ಮೆಟ್ರೋ ನಿಲ್ದಾಣದಿಂದ ಕರೋಲ್ ಬಾಗ್, ರಾಜೇಂದ್ರ ಪ್ಲೇಸ್‌ಗೆ ಮೂವತ್ತರಿಂದ ಐವತ್ತು ರೂಪಾಯಿ ತೆಗೆದುಕೊಳ್ಳುತ್ತಿದ್ದ ಸೈಕಲ್ ರಿಕ್ಷಾ ಚಾಲಕರು ಕಾಮನ್ವೆಲ್ತ್ ಗೇಮ್ಸ್ ಮುಟ್ಟಿಸಿದ ಬಿಸಿಗೆ ಹತ್ತು ರೂಪಾಯಿಗೆ ಇಳಿದುಬಿಟ್ಟರು. ಪ್ರಯಾಣಿಕರೊಂದಿಗೆ ಚೌಕಾಸಿಗಿಳಿದರೆ ಇದು ಗಿಟ್ಟಲಾರದೇನೋ ಎಂಬ ಭಯದಿಂದ ಬರೀ ಹತ್ತು ರೂಪಾಯಿಗೆ ಮೂರ್ನಾಲ್ಕು ಕಿ.ಮೀ.ವರೆಗೂ ದಣಿದು ಸೈಕಲ್ ತುಳಿಯತೊಡಗಿದರು. ಈ ಸೈಕಲ್ ರಿಕ್ಷಾ ತುಳಿಯುವವರಲ್ಲಿ ಬಹಳಷ್ಟು ಮಂದಿ ಹದಿನೈದರಿಂದ ನಲವತ್ತರ ವಯೋಮಾನದವರು. ಈಗ ಸೈಕಲ್ ಹೇರಿರುವ ಪಡ್ಡೆ ಹುಡುಗರನ್ನು ಮಾತನಾಡಿಸಿದರೆ ಸೈಕಲ್ ರಿಕ್ಷಾಗಳಿಂದಲೇ ಮೂರ್ನಾಲ್ಕು ತಲೆಮಾರುಗಳಿಂದ ಬದುಕಿನ ಬಂಡಿ ಎಳೆದ ಕತೆಗಳನ್ನು ಹೇಳುತ್ತಾರೆ. ಹೊಸ ಸೈಕಲ್ ರಿಕ್ಷಾ ಖರೀದಿಸಲಿಕ್ಕೆಂದು ಇಡೀ ಬದುಕು ಸವೆಸಿದವರು, ಟ್ರಾಫಿಕ್ ಜಾಮ್‌ಗಳಲ್ಲಿ ಶ್ರೀಮಂತರ ಕಾರುಗಳಿಗೆ ಢಿಕ್ಕಿಹೊಡೆದು ಒದೆ ತಿಂದು ಕೈಕೈ ಮಿಲಾಯಿಸಿದವರು, ಹಿಂದಿನ ಸೀಟಿನಲ್ಲಿ ಗೆಳತಿಯನ್ನು ಕೂರಿಸಿಕೊಂಡು ದಿಲ್ಲಿ ಹಾಟ್, ಇಂಡಿಯಾ ಗೇಟ್, ಲೋದಿ ಗಾರ್ಡನ್, ಅಕ್ಷರಧಾಮ, ಲೋಟಸ್ ಟೆಂಪಲ್, ಕುತುಬ್ ಮಿನಾರ್, ಸಂತುಷ್ಟಿ ಶಾಪಿಂಗ್ ಕಾಂಪ್ಲೆಕ್ಸ್ ಸುತ್ತ ಗಿರಕಿ ಹೊಡೆದವರು, ರೇಸ್‌ನಲ್ಲಿ ದಿಲ್ಲಿಯಿಂದ ಆಗ್ರಾದ ತಾಜ್‌ಮಹಲ್‌ವರೆಗೂ ಪೆಡಲ್ ತುಳಿದವರು, ಸೈಕಲ್ ರಿಕ್ಷಾವನ್ನೆ ಮೊಬೈಲ್‌ಮನೆ ಮಾಡಿಕೊಂಡು ಬದುಕುತ್ತಿರುವ ಅನೇಕರು ಕಾಣಸಿಗುತ್ತಾರೆ. ಚಂಢೀಗಡ, ಹರಿಯಾಣ, ಪಂಜಾಬ್, ಮಧ್ಯಪ್ರದೇಶಗಳಿಂದ ಮನೆಬಿಟ್ಟು ಓಡಿಬಂದವರು, ಕೆಲಸದ ಬೇಟೆಗಿಳಿದ ನಿರುದ್ಯೋಗಿಗಳು ದಿಲ್ಲಿಯಲ್ಲಿ ಮೊದಲು ಆಯ್ದುಕೊಳ್ಳುವ ಕೆಲಸ ಸೈಕಲ್ ರಿಕ್ಷಾ ಚಾಲನೆ. ಅಷ್ಟರಮಟ್ಟಿಗೆ ಇದು ದಿಲ್ಲಿಯೆಂಬ ಮಹಾನಗರಿಯಲ್ಲಿ ಅಸಹಾಯಕರ ಬೆನ್ನಿಗೆ ನಿಲ್ಲುವ ಮೊದಲ ಗೆಳೆಯನೂ ಹೌದು.


ಹೊಸ ಸೈಕಲ್ ರಿಕ್ಷಾ ಖರೀದಿಸಲು ಮೂರೂವರೆಯಿಂದ ನಾಲ್ಕು ಸಾವಿರ ರೂಪಾಯಿ ತಗಲುವುದರಿಂದ ಅನೇಕರು ಒಂದು ಸಾವಿರಕ್ಕೋ ಒಂದೂವರೆ ಸಾವಿರಕ್ಕೋ ಸಿಗುವ ಸೆಕೆಂಡ್ ಹ್ಯಾಂಡ್ ಸೈಕಲ್‌ನ-ಮೊರೆ ಹೋಗುತ್ತಾರೆ. ಅನೇಕರು ದಿನಗೂಲಿಯ ಲೆಕ್ಕದಲ್ಲಿ ಬಾಡಿಗೆಗೆ ದುಡಿಯುತ್ತಾರೆ. ಆ ಬಾಡಿಗೆ ಸೈಕಲ್‌ಗಳಿಗೂ ತನ್ವೀರ್ ಮತ್ತು ಮುನವರ್ ಎಂಬ ಹುಡುಗರು ಕಾಜಲ್, ಕತ್ರೀನಾ ಎಂದು ಹೆಸರು ಕೊಟ್ಟುಕೊಂಡಿದ್ದರು. ಗೆಳೆಯನೊಂದಿಗೆ ದಿಕ್ಕೆಟ್ಟ ಪರದೇಶಿಯಂತೆ ನಿಂತಿದ್ದ ನನಗೆ ನಿಜವಾದ ದಿಲ್ಲಿ ತೋರಿಸಿದ್ದು ಈ ಹುಡುಗರೇ. ದಿಲ್ಲಿಯಲ್ಲಿ ಕಾಮನ್ವೆಲ್ತ್ ಗೇಮ್ಸ್ ನಡೆಯುತ್ತಿದೆ ಎಂಬ ಕನಿಷ್ಠ ಅರಿವು ಇಲ್ಲದೆ 'ಪಾದ್ರಾ' ಎಂಬ ದೊಡ್ಡ ಊರು ತನ್ನ ಪಾಡಿಗೆ ತಾನಿತ್ತು. ಪಾದ್ರಾದ ಒಳಹೊಕ್ಕರೆ ಹರ್‌ದೇವ್ ಪುರಿ, ದುರ್ಗಾಪುರಿ ಎಂಬೆರಡು ಪುರಾತನ ದಿಲ್ಲಿ ತೋರಿಸುವ ಜಗತ್ತುಗಳು ತೆರೆದುಕೊಳ್ಳುತ್ತವೆ. ಸೈಕಲ್ ರಿಕ್ಷಾ ಬಿಟ್ಟರೆ ಇಲ್ಲಿ ಬರಿಗಾಲೇ ಗಟ್ಟಿ. ಮೆಟ್ರೋ, ಟ್ಯಾಕ್ಸಿ, ಆಟೋಗಳ ಆರ್ಭಟದಲ್ಲಿ ಹೆದರಿ ಹಿಂದೆಬಿದ್ದ ತುಕ್ಕುಹಿಡಿದು ಮೂಲೆ ಸೇರಿದ, ರಿಪೇರಿ ಮಾಡಿಸಲಾಗದೆ ಗುಜರಿ ಅಂಗಡಿ ಸೇರಿದ ಸೈಕಲ್ ರಿಕ್ಷಾಗಳ ಲೆಕ್ಕ ಹಾಕಿ, ಒಂದು ಕಾಲದಲ್ಲಿ ನೂರು ಸೈಕಲ್ ರಿಕ್ಷಾಗಳನ್ನು ಹೊಂದಿದ್ದ ತನ್ನ ಮಾಲೀಕನ ಬಳಿ ಈಗ ಹದಿನೆಂಟು ಸೈಕ[ಲ್...] ಮಾತ್ರ ಇವೆ ಎಂದು ಹೇಳುತ್ತಾ ತನ್ನ[...] ತುಳಿಯುತ್ತಿದ್ದ, ದಿನಕ್ಕೆ ನಾಲ್ಕುನೂರರಿಂದ [...] ರೂಪಾಯಿಗಳಷ್ಟು ದುಡಿಯುವ ಈ ಪು[...] ಹಿಂದೆ ವಿದೇಶಿ ಪ್ರವಾಸಿಗರಿಗೆ ಹೊಸ ದಿಲ್ಲಿ ಹ[...] ತೋರಿಸಿ ಎರಡು ಸಾವಿರದವರೆಗೂ [...] ಹೇಳಿಕೊಳ್ಳುತ್ತಾರೆ. ಇವರು ಎಷ್ಟೇ ದುಡಿ[...] ಹತ್ತರ ಹೊತ್ತಿಗೆ ತಮ್ಮ ಮಾಲಿಕನ ಕೈಗೆ [...] ರೂಪಾಯಿಗಳನ್ನು ಒಪ್ಪಿಸಿಬಿಡಬೇಕು. 'ನೊ[...] ವಲಯಕ್ಕೆ ಕಾಲಿಟ್ಟು ಪೊಲೀಸರಿಗೆ ನೂರು [...] ದಂಡ ಕಟ್ಟಿದ್ದು, ಟ್ರಾಫಿಕ್ ಜಾಮ್‌ನಲ್ಲಿ [...] ಕಾರಿಗೆ ರಿಕ್ಷಾ ತಾಕಿ, ಗಲಾಟೆಯಲ್ಲಿ ಏಟು [...] ಇವರ ಮಾಲಿಕ ಕೇಳಿಸಿಕೊಳ್ಳುವುದಿಲ್ಲವಂತೆ[...] ಆಟೋದವರಂತೆ ನಮಗೂ ಕಾಮನ್ವೆಲ್ತ್ ಗೇಮ್[ಸ್...] ಜಾಗಗಳಿಗೆ ಸಂಚರಿಸುವ ಅವಕಾಶ ಸಿಕ್ಕಿ[...] ಸೈಕಲ್ ರಿಕ್ಷಾ ಖರೀದಿಸುವಷ್ಟು ದುಡ್ಡು ಸಂ[...]ತ್ತಿದ್ದೆ, ಎಲ್ಲಾ ನನ್ನ ದುರದೃಷ್ಟ' ಎಂದು ಮುನ[...] ದಿಂದಲೇ ಹೇಳಿಕೊಂಡ.

ಪುರಾತನ ದಿಲ್ಲಿಯ ಪಳೆಯುಳಿಕೆಗಳ[...] ಜೀವ ಹಿಡಿದುಕೊಂಡು ಬದುಕುಳಿದಿರು[...] ರಿಕ್ಷಾವಾಲಾಗಳು ಆಟೋದವರೊಂದಿಗಿನ ಅಧ[...] ಮೀರಿದ ಸ್ಪರ್ಧೆಯಲ್ಲಿ ಹೇಗೋ ತಮ್ಮ ಅ[...] ಕೊಂಡು ಬಂಡಿ ತುಳಿಯುತ್ತಿದ್ದರು. ಯಾ[...] ಮೆಟ್ರೋ ರೈಲು ಕಾಲಿಟ್ಟತೋ, ಪ್ರತಿವರ್ಷ ಎ[...] ಮೂರು ಸಾವಿರ ಸೈಕಲ್ ರಿಕ್ಷಾಗಳು ಗು[...] ಸೇರತೊಡಗಿದವು. ಅರವತ್ತು ಎಪ್ಪತ್ತರ ದಶಕದ[...] ಹತ್ತು ಲಕ್ಷದಷ್ಟಿದ್ದ ಸೈಕಲ್ ರಿಕ್ಷಾಗಳು ಈಗ [...] ಲಕ್ಷಕ್ಕೆ ಇಳಿದಿವೆ. ಪಾದ್ರಾ ನಗರವೊಂದರಲ್ಲೇ [...] ಎಂಟುನೂರು ಸೈಕಲ್ ರಿಕ್ಷಾಗಳು, ಈಗ ಕೇ[...]ತ್ತಕ್ಕಿಳಿದಿವೆ. ಆಟೋ, ಟ್ಯಾಕ್ಸಿಗಳಂತೆ ಕಡಿ[...] ಪ್ರಯಾಣಕ್ಕೂ ನಿರ್ದಿಷ್ಟ ಶುಲ್ಕ ಪಡೆಯು[...] ಸೈಕಲ್ ರಿಕ್ಷಾಗಳಿಗೆ ಇನ್ನೂ ಒದಗಿಬಂದಿ[...] ಸೈಕಲ್ ರಿಕ್ಷಾಗಳು ಯಾವತ್ತಿದ್ದರೂ ಕಡುಬಡ[...] ಆಪ್ಯಾಯಮಾನವಾಗಿ ಕಾಣತೊಡಗುತ್ತ[...] ಸೈಕಲ್ ರಿಕ್ಷಾ ಆಪರೇಟರ್ಸ್ ಯೂನಿಯ[...] ರಿಕ್ಷಾ ಪುಲ್ಲರ್ಸ್ ಯೂನಿಯನ್ ಎಂ[...] ಸಂಘಟನೆಗಳು ದಿಲ್ಲಿಯಲ್ಲಿ ಇವೆಯಾದರ[...] ಮಾತ್ರ ಇವತ್ತಿಗೂ ತಬ್ಬಲಿಗಳೇ. ಅಸಂಘಟ[...] ಕಾರ್ಮಿಕರಿಗೆ ಸಿಗುವ ಸವಲತ್ತುಗಳು ಇ[...] ಅಷ್ಟು ಸುಲಭವಾಗಿ ದೊರಕಲಾರವು[...] ನಡುವೆ ಬಲಿಷ್ಠ-ದುರ್ಬಲ ಚಾಲಕರ [...] ಆಗಾಗ ಕದನಗಳು ಹುಟ್ಟಿಕೊಳ್ಳುತ್ತವೆ. ತ[...] ಗಡಿ ದಾಟಿದರೆ ಅದು ಚಕಮಕಿಗೊಂದು [...] ಕಾರಣವಾಗುತ್ತದೆ.

ದಿಲ್ಲಿಯ ಬಹುತೇಕ ಎಲ್ಲ ಸೈಕಲ್ ರಿ[...] ಕ್ಯಾಲೆಂಡರಿನಲ್ಲಿ ಕಾಣುವ 'ಶುಕ್ರವಾರ'ವನ್ನು[...]ವನಿಗೆ ಹಿಡಿಶಾಪ ಹಾಕುತ್ತಾರೆ. [...] ಶುಕ್ರವಾರವೆನ್ನುವುದು ಈ ಶ್ರಮಿಕರೊಂದಿ[...] ಜಿದ್ದಿಗೆ ನಿಲ್ಲುತ್ತದೆ. ಆ ದಿನ Traffic C[...] ಹೆಸರಿನಲ್ಲಿ ದಿಲ್ಲಿ ಪೊಲೀಸರು ಸೈಕ[...] ಮೇಲೆ ಮುಗಿಬೀಳುತ್ತಾರೆ. ಶುಕ್ರವಾರ [...] ರಿಕ್ಷಾಗಳನ್ನು ಶನಿವಾರ, ಭಾನುವಾರ [...] ಠಾಣೆಯ ಕಸ್ಟಡಿಯಲ್ಲಿಟ್ಟುಕೊಂಡು [...] ಕೋರ್ಟಿಗೊಪ್ಪಿಸುವ ಪೊಲೀಸರು [...] ರಿಕ್ಷಾ ಚಾಲಕರಿಂದ ದಂಡ ವಸೂಲಿ [...] ಕೋರ್ಟ್ 325 ರೂಪಾಯಿ ದಂಡ[...] ಪೊಲೀಸರು 'ರಿಕ್ಷಾ ಸ್ಟೋರೇಜ್' ಹೆಸ[ರಿನಲ್ಲಿ...] 25 ರೂಪಾಯಿ ಲೆಕ್ಕದಲ್ಲಿ ಐದು ದಿ[...] ಸುಲಿಯುತ್ತಾರೆ. 15 ದಿನಗಳ ನಂತರ ಠಾಣೆಯ[...] ಅಸಹಾಯಕವಾಗಿ ನಿಂತ ಸೈಕಲ್ ರಿಕ್ಷಾಗಳನ್ನು [...] (ವಾರಸುದಾರರಿಲ್ಲದ) ಹೆಸರಿನಲ್ಲಿ ಗುಜರಿ [...] ತೂಕದ ಲೆಕ್ಕದಲ್ಲಿ ಮಾರಾಟಕ್ಕಿಡಲಾಗುತ್ತದೆ. [...] (ಅಧಿಕೃತ ಮಾಲಿಕನಿಲ್ಲದೆ ದೊರೆತ) ಸೈಕಲ್ ರಿ[...] ಸಿಕ್ಕ ಮರುದಿನವೇ ಗುಜರಿ ಅಂಗಡಿಗೆ ಕಳ[...] ಹೀಗೆ ಪ್ರತಿವರ್ಷ ಅರ್ಧ ಲಕ್ಷದಷ್ಟು ಸೈಕಲ್[...] ಗುಜರಿ ಪಾಲಾಗುತ್ತವೆ.

ಮನುಷ್ಯ ಮನುಷ್ಯನನ್ನು ಎಳೆದೊಯ್ಯುವ ಈ[...] ನಂಬಿಕೊಂಡು ದಿಲ್ಲಿಯಲ್ಲಿ 10 ಲಕ್ಷ ಮಂದಿ ಬ[...] ಪಶ್ಚಿಮ ದೇಶಗಳಲ್ಲಿ ಈ ಸೈಕಲ್ ರಿಕ್ಷಾಗ[...] ಬಣ್ಣಗಳ ಜೊತೆಗೆ ಕಲಾತ್ಮಕ ವಿನ್ಯಾಸಗಳನ್ನು ತೊ[...] ಸಲೀಸಾಗಿ ತುಳಿಯುವ ಸಲುವಾಗಿ ಪ[...] ಹೊಂದಿಕೊಂಡಂತೆ ಗೇರ್, ಹ್ಯಾಂಡ್ ಬ್ರೇಕ್‌ಗಳ[...] ಲಾಗಿದೆ. ಆದರೆ ದಿಲ್ಲಿಯ ಸೈಕಲ್ ರಿಕ್ಷಾಗ[...] ಈಗಲೂ ರಾಜ್‌ಕಪೂರನ ಕಪ್ಪುಬಿಳುಪು [...] ಕಾಣಿಸಿಕೊಂಡಿರುವಂತೆಯೇ ಬದುಕು ಸಾಗಿ[...]





ಜಾಪ್ರಭುತ್ವ ಮತ್ತು ಬಿಜೆಪಿ

ಕ ಇಂಡಿಯಾದ ನಂ.1 ಭ್ರಷ್ಟ ರಾಜ್ಯ ಎಂದು 'ಔಟ್‌ಲುಕ್' ಪತ್ರಿಕೆ ಘೋಷಿಸಿದ ಹೊತ್ತಲ್ಲೆ ಇಲ್ಲಿನ ರಾಜಕೀಯ ವಿದ್ಯಮಾನಗಳು ನಮ್ಮ ಪ್ರಜಾಪ್ರಭುತ್ವವನ್ನು ು ಶುರುಮಾಡಿದೆ. ಕಡುಭ್ರಷ್ಟ ಬಿಜೆಪಿಯನ್ನು ತಿಪ್ಪೆಗೆಸೆಯುವ ಒಂದೆರಡು ಅವಕಾಶಗಳನ್ನು ಜನ ಕಳೆದುಕೊಂಡರು ಎಂದು ರಾಜಕೀಯ ಚಿಂತಕರು ಜನತೆಯ ಹಿಡಿದು ಲೇವಡಿ ಮಾಡತೊಡಗಿದರು. ಸಿದ್ಧಾಂತಕ್ಕೆ ಸಿಕ್ಕಿಬೀಳದ ಶಾಸಕರು ದುಡ್ಡಿಗೆ ಬಿಕರಿಯಾಗುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕದ ರಾಜಕಾರಣ ರುವ ರಸಾತಳ ಕಂಡು ಏನನ್ನಿಸುತ್ತಿದೆ? ಚಳವಳಿಗಳ ನಿಷ್ಕ್ರಿಯತೆಯಿಂದಾಗಿ ಬಿಜೆಪಿಯಂತಹ ಪಕ್ಷ ಕೊಬ್ಬಲು ಕಾರಣವಾಯಿತೆ? ಜನತೆಯನ್ನು ಎಚ್ಚರಿಸುವ ಮಾಡುವುದು ಹೇಗೆ? ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಚಿಂತಕರಾದ ಡಾ. ಬಂಜಗೆರೆ ಜಯಪ್ರಕಾಶ್, ಡಾ.ಸಿ.ಎಸ್.ದ್ವಾರಕಾನಾಥ್, ಎನ್.ಎಸ್.ಶಂಕರ್, ಜಾನ್ ದರ್ಗಾ ಮತ್ತು ಪ್ರೊ.ಚಂದ್ರಶೇಖರ ಪಾಟೀಲರನ್ನು ಯುವ ಬರಹಗಾರ ಚಂದ್ರಶೇಖರ ಐಜೂರ್ ಮಾತಿಗೆಳೆದಾಗ ಅವರು ಕೊಟ್ಟ ಉತ್ತರ ಇಲ್ಲಿದೆ:

• ಡಾ. ಬಂಜಗೆರೆ ಜಯಪ್ರಕಾಶ್

ಜೆಪಿ ಕಪ್ಪು ಹಣದ ಪಕ್ಷ...

ರ್ನಾಟಕದ ರಾಜಕಾರಣದ ಸಂದರ್ಭದಲ್ಲಿ ಬಿಜೆಪಿಯನ್ನು ಪಕ್ಷ ಎಂದು ಕರೆಯುವುದಕ್ಕಿಂತ ಕಪ್ಪುಹಣದ ಪಕ್ಷ ಎಂದು ನ್ನ ಕೋಮು ಸಿದ್ಧಾಂತದಿಂದ ಬಿಜೆಪಿಗೆ ಒಬ್ಬ ಶಾಸಕನಿರಲಿ, ನ್ಯನನ್ನು ಖರೀದಿ ಮಾಡಲು, ತನ್ನತ್ತ ಗಲಿಲ್ಲ, ಅದು ಸಾಧ್ಯವಾಗಿದ್ದು ಕಳ್ಳಹಣ



ಭುತ್ವದ qualityಯನ್ನು ಕಾಪಾಡ ನ ಸಂಗ್ರಹ, ವಹಿವಾಟು, ಹಂಚಿಕೆ, ಲೆ ಕೆಲವು ಗಂಭೀರ ಮಿತಿಗಳನ್ನು ಹಿಂದೆ ಹಣವುಳ್ಳ ಟಾಟಾ, ಬಿರ್ಲಾ ರಾಜಕಾರಣಕ್ಕೆ ಇಳಿದವರಲ್ಲ, ಯಾವುದೇ ಸರ್ಕಾರವಿರಲಿ ದುಡ್ಡು ಚೆಲ್ಲಿ ಸಲೀಸಾಗಿ ಡಿಸಿಕೊಂಡು ಹೋಗುತ್ತಿದ್ದರು. ನಮ್ಮ ನ್ನವಾಗಿದೆ. ಹೇರಳವಾಗಿ ಕಪ್ಪುಹಣ ಜದ ಶ್ರೀಮಂತರು ಇವತ್ತು ನೇರ ಟುತ್ತಿದ್ದಾರೆ.

ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ಪಾರ ಧನ ಸಂಗ್ರಹದ ಮೇಲೆ ಪ್ರಭುತ್ವದ ದ್ದರೆ ಪ್ರಜಾಪ್ರಭುತ್ವ ಕುಸಿಯುವ; ದಲ್ ಎಸ್ಟೇಟ್ ದಗಾಕೋರರು ಳ್ಳುವ ಪರಿಸ್ಥಿತಿ ನಮ್ಮ ಮುಂದೆ ಬಂದು ನಿಲ್ಲುತ್ತದೆ. ೀ ಪ್ರಜಾಪ್ರಭುತ್ವವನ್ನೇ ಖರೀದಿ ಮಾಡಿ ತಮಗೆ ಬೇಕಾದ ಸುವ ಸಾಧ್ಯತೆಗಳು ಇಲ್ಲಿ ಕಾಣುತ್ತವೆ. ಅಕ್ರಮವಾಗಿ 1000 ಕೋಟಿ ರೂಪಾಯಿ ಹೊಂದಿರುವ ಒಬ್ಬ ಶ್ರೀಮಂತ ಸಲೀಸಾಗಿ 100 ಶಾಸಕರನ್ನು ಖರೀದಿಮಾಡಿ ತನ್ನಿಚ್ಛೆಯ ರಾಜಕಾರಣ ಮಾಡಬಹುದಲ್ಲವೇ?


ಈ ಹಿಂದೆ ಜನಪರ ಹೋರಾಟಗಳ ಕಾವು ಹೇಗಿರುತ್ತಿತ್ತೆಂದರೆ: ಅನ್ಯಾಯವನ್ನು ಪ್ರತಿಭಟಿಸಲು ಹೋರಾಟಗಾರರು ಸಾಂಘಿಕ ಪ್ರಯತ್ನ ನಡೆಸುತ್ತಾ ಪ್ರಚಾರ, ಭಾಷಾ ಮಾಧ್ಯಮದ ಮೂಲಕ ಚಳವಳಿಗೆ ತೀವ್ರವಾಗಿ ಒಡ್ಡಿಕೊಳ್ಳುತ್ತಿರುವಾಗಲೇ ಅನಕ್ಷರಸ್ಥ ಜನ ಕೂಡ ಚಳವಳಿಯೊಂದಿಗೆ ಸೇರಿಕೊಂಡು ಬಿಡುತ್ತಿದ್ದರು. ಎಲ್ಲೇ ಅನ್ಯಾಯ ಕಂಡರೂ ಅಲ್ಲಲ್ಲಿ ಸಣ್ಣ ಪ್ರತಿಭಟನೆಗಳು ಹುಟ್ಟಿಕೊಂಡು ನಂತರ ಅದು ರಾಜ್ಯವ್ಯಾಪಿ ಬೃಹತ್ ಹೋರಾಟವಾಗುತ್ತಿತ್ತು, ಅವತ್ತಿನ ನಾಯಕ ಸಮುದಾಯದ ಒಳಿತಿಗಾಗಿ ಚಳವಳಿ ರೂಪಿಸುತ್ತಿದ್ದ. ಯಾವಾಗ ಚಳವಳಿಗಳಿಗೆ ಲಾಭಕೋರತನ ಕಾಲಿಟ್ಟಿತೋ, ಸಮುದಾಯದ ಲಾಭಕ್ಕೆ ಹಪಿಹಪಿಸುತ್ತಿದ್ದ ನಾಯಕರು ಮರೆಯಾಗಿ ಆ ಜಾಗದಲ್ಲಿ ವೈಯಕ್ತಿಕ ಮತ್ತು ಕುಟುಂಬದ ಲಾಭ ನೋಡುವ ಲಾಭಕೋರ ನಾಯಕರು ಬಂದು ನಿಂತರು. ಚಳವಳಿಯೊಂದು ತೀರಾ ವೈಯುಕ್ತಿಕಗೊಂಡ ಕೂಡಲೆ ಅದು ನಾಶದ ಹಾದಿ ಹಿಡಿಯುತ್ತದೆ.

ಇವತ್ತು ಕಳ್ಳಹಣದ ವಹಿವಾಟಿಗೆ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನೇ ಖರೀದಿ ಮಾಡುವ ಶಕ್ತಿಯಿದೆ. ಇದನ್ನು ಹಿಮ್ಮೆಟ್ಟಿಸುವುದು ಹೇಗೆ? ಎಷ್ಟೇ ದುಡ್ಡು ಸುರಿದರೂ ಒಬ್ಬ ಶಾಸಕನನ್ನು, ಒಬ್ಬ ಮನುಷ್ಯನನ್ನು ಖರೀದಿ ಮಾಡುವುದು ಸಾಧ್ಯವಿಲ್ಲವೆಂದು ಗೊತ್ತಾಗುತ್ತದೋ ಆಗ ದುಡ್ಡುಬಾಕ ಜನ ಪ್ರಜಾಪ್ರಭುತ್ವದ ಮೇಲಿನ ತಮ್ಮ ಹಿಡಿತವನ್ನು ಸಡಿಲಗೊಳಿಸುತ್ತಾರೆ. ಈ ರಾಜಕಾರಣದ ಸತ್ಯವನ್ನು, ಕಪ್ಪುಹಣದ ಹಿಂದಿರುವ ವಾಸ್ತವವನ್ನು ನಾವು ಜನತೆಗೆ ಎಷ್ಟು ಸಾಧ್ಯವೋ ಅಷ್ಟು ಬಿಚ್ಚಿಡುತ್ತಾ ಹೋಗಬೇಕು. ಇಂತಹ ಪರಿಸ್ಥಿತಿಗಳಲ್ಲಿ ನಮ್ಮ ಸಣ್ಣಪುಟ್ಟ ಪ್ರಯತ್ನಗಳನ್ನು ಯಾವ ಕಾರಣಕ್ಕೂ ನಿಲ್ಲಿಸಬಾರದು.

• ಡಾ. ಸಿ.ಎಸ್.ದ್ವಾರಕಾನಾಥ್

ಇತಿಹಾಸ ಕಂಡ ಅತಿ ಕೆಟ್ಟ ಸರ್ಕಾರ...

"ಇವತ್ತಿನ ಈ ಸರ್ಕಾರದಲ್ಲಿ **Rule of Law** ಅನ್ನೋದೇ ಮಾಯವಾಗಿದೆ. ಹಿಟ್ಲರ್, ಖೊಮೇನಿ, ಇದಿ ಅಮೀನ್ ಇವರ ಆಡಳಿತಗಳ ಬಗ್ಗೆ ಓದಿದ್ದೆವು ಈಗ ಖುದ್ದು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ. ಇಂಥ ಭ್ರಷ್ಟ ಸರ್ಕಾರವನ್ನು ಆಯ್ಕೆ ಮಾಡಿದ



ಪಾಪದ ಪಾಲುದಾರರ ಕಟಕಟೆಯಲ್ಲಿ ಈ ನಾಡಿನ ಜನತೆ ಕೂಡ ನಿಲ್ಲಬೇಕಿದೆ. ನಾವು ಸುಮ್ಮನಿದ್ದಷ್ಟು ಈ ಸರ್ಕಾರದ ನೀಚತನಗಳು ಕೊಬ್ಬುತ್ತಾ ಹೋಗುತ್ತಿವೆ. ಇವತ್ತು ಈ ನಾಡಿನ ಚಳವಳಿಗಳು ಸಂಪೂರ್ಣ ನಿಷ್ಕ್ರಿಯೆಗೊಂಡಿರುವುದು ಕೂಡ ಫ್ಯಾಸಿಸ್ಟ್ ಶಕ್ತಿಗಳು ಬೆಳೆಯಲು ಕಾರಣವಾಗಿದೆ. ಇಂಥ ಬಲಪಂಥೀಯ ತತ್ವ ಪ್ರಣೀತ ಸರ್ಕಾರಕ್ಕೆ ಎದುರಾಗಿ ದಲಿತ, ರೈತ, ಎಡ ಪಂಥೀಯ ಚಳವಳಿಗಳು ಒಟ್ಟಾಗಿ ನಿಲ್ಲಬೇಕಾದದ್ದು ಈ ಹೊತ್ತಿನ ಅನಿವಾರ್ಯ.

ಪೊಲೀಸು, ಕೋರ್ಟು, ಅಧಿಕಾರಶಾಹಿ ವರ್ಗಗಳು ಇವತ್ತು ಜನತೆಯ ಪರವಾಗಿ ನಿಲ್ಲುವ ವ್ಯವಸ್ಥೆಯ ಬುಡಕ್ಕೆ ಈ ಸರ್ಕಾರ ಕೊಡಲಿ ಪೆಟ್ಟು ನೀಡುತ್ತಿದೆ. ಜನರ ಪರ ನಿಲ್ಲಬೇಕಾದ ಸರ್ಕಾರಿ ಅಧಿಕಾರಿಗಳಂತೂ ಮಂತ್ರಿಗಳ ಮನೆಯಲ್ಲಿ ಜೀತಕ್ಕಿರುವವರಂತೆ ವರ್ತಿಸುತ್ತಿದ್ದಾರೆ. ಜನ ತಮ್ಮ ಅಸಹಾಯಕತೆಯನ್ನು, ಸಾತ್ವಿಕ ಸಿಟ್ಟನ್ನು ಯಾರಲ್ಲಿಯೂ ಹೇಳಿಕೊಳ್ಳದಂತಹ ಸ್ಥಿತಿಯನ್ನು ಈ ಸರ್ಕಾರ ನಿರ್ಮಿಸಿದೆ. ಭಾರತ ತನ್ನ ಇತಿಹಾಸದಲ್ಲಿ ಕಂಡ ಅತಿ ಕೆಟ್ಟ ಸರ್ಕಾರವೊಂದು ಆಳ್ವಿಕೆ ನಡೆಸುತ್ತಿರುವ ಸಂದರ್ಭದಲ್ಲಿ ನಾವು ಬದುಕುತ್ತಿದ್ದೇವೆ.

• ...ದ್ರಶೇಖರ ಪಾಟೀಲ್


...ಜಕ್ಕೂ ಪ್ರಜ್ಞಾವಂತರ ಸೋಲು...



ಕರ್ನಾಟಕದ ಮಾನವಂತರು ರಾಜಕಾರಣದ ಬಗ್ಗೆ ಮಾತನಾಡಲು ಹೇಸಿಗೆ ಪಟ್ಟುಕೊಳ್ಳುವಂತಹ ಸಂದರ್ಭ ಇದು. ಬಿಜೆಪಿಯಂತಹ ಪಕ್ಷ ಅಧಿಕಾರಕ್ಕೆ ಬರಲು ಜನ ಕಾರಣ ಅಂಥ ನಾನು ಹೇಳುವುದಿಲ್ಲ, ಇಲ್ಲಿ ಜನತೆಯನ್ನು ದೂಷಿಸಿ ಯಾವುದೇ ಪ್ರಯೋಜನವಿಲ್ಲ. ಕರ್ನಾಟಕ ದುದ್ದಕ್ಕೂ ಪ್ರಜ್ಞಾವಂತರಿದ್ದು ಬಿಜೆಪಿಯಂತಹ ಪಕ್ಷ ಪ್ರಭುತ್ವದ ಚುಕ್ಕಾಣಿ ಹಿಡಿಯಲು ಸಾಧ್ಯವಾಯಿತೆಂದರೆ ಇದು ನಿಜಕ್ಕೂ ಪ್ರಜ್ಞಾವಂತರ ಸೋಲು. 'ವಾಚಕರ ವಾಣಿ'ಗೆ ಪತ್ರ ಬರೆದ ಮಾತ್ರಕ್ಕೆ ರಾತ್ರೋರಾತ್ರಿ ದೊಡ್ಡ ಕ್ರಾಂತಿಯಾಗಿಬಿಡುವುದಿಲ್ಲ, ಈ ಮಣ್ಣಿನ ಪ್ರಜ್ಞಾವಂತರು, ನಮ್ಮ ಚಳವಳಿಗಳು ಇವತ್ತು ನೇರ ಜನರನ್ನು ಮುಟ್ಟಬೇಕಿದೆ. ಇಂಥ ಪ್ರಯತ್ನಗಳು ಶಿವಮೊಗ್ಗ, ಮೈಸೂರಿನಲ್ಲಿ ಅಷ್ಟಿಷ್ಟು ನಡೆಯುತ್ತಿದೆ. ರಾಷ್ಟ್ರೀಯ ಪಕ್ಷಗಳ ಬಗ್ಗೆ ನಮ್ಮ ಜನ ಯಾವತ್ತೋ ನಂಬಿಕೆ ಕಳೆದುಕೊಂಡಿದ್ದಾರೆ. ಇಂಥ ಹೊತ್ತಲ್ಲಿ ಈ ನಾಡಿನ ಕ್ಷರವಂಚಿತ ಜನರಿಗೆ ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡಬೇಕು.

• ಎನ್.ಎಸ್.ಶಂಕರ್

ಸಮಾಜವನ್ನು ಫ್ಯಾಸಿಸಂ ಆವರಿಸಿಕೊಳ್ಳುತ್ತಿದೆ...



ಒಂದು ಸ್ಪಷ್ಟ ರಾಜಕೀಯ ಉದ್ದೇಶವಿರದ ಈ ಸರ್ಕಾರದ ನಡೆಗಳ ಬಗ್ಗೆ ಮಾತನಾಡುವುದೇ ಇವತ್ತು ಸಿನಿಕತನದಂತೆ ಕಾಣುತ್ತಿದೆ. ಜನ ರಾಜಕೀಯದ ಬಗ್ಗೆ ಮಾತಾಡೋದೇ ಅಸಹ್ಯ ಅನ್ನಿಸುವಷ್ಟರ ಮಟ್ಟಿಗೆ ಈ ಸರ್ಕಾರ ಬಂದು ನಿಂತಿದೆ. ಕುಮಾರಸ್ವಾಮಿ, ಯಡಿಯೂರಪ್ಪ ಒಟ್ಟುಗೂಡಿ ಸರ್ಕಾರ ರಚಿಸುವ ಸಂದರ್ಭಗಳು ಬಂದಾಗಲೇ ಈ ನಾಡಿನಲ್ಲಿ ಕೋಲಾಹಲ ಆಗಬೇಕಿತ್ತು, **Money is power, power is money** ಅನ್ನುವ ಸಿದ್ಧಾಂತದ ಬೇರುಗಳ ಮೇಲೆ ಈ ಸರ್ಕಾರ ನಿಂತಿದೆ. ಎಷ್ಟೆಂದರೆ ಈ ಸರ್ಕಾರಕ್ಕೆ ದುಡ್ಡಿನ ಆದ್ಯತೆಯ ಮುಂದೆ ಪ್ರಜಾಪ್ರಭುತ್ವವನ್ನು ಬಲಿಕೊಡುವ ಕಲೆಗಳು ಗೊತ್ತು, ನಮ್ಮ **social atmosphere** ಹೇಗಿದೆ ನೋಡಿ: ಈ ಸರ್ಕಾರದ ಅಜೆಂಡಾಗಳಿಗೆ ತಕ್ಕಂತೆ ಇವತ್ತು ನಾವು ನೋಡುವ ಟಿ.ವಿ.ಗಳಲ್ಲಿ ಜ್ಯೋತಿಷ್ಯ, ಬ್ರಹ್ಮಾಂಡ, ವಾಸ್ತು, ಗುರು ರಾಘವೇಂದ್ರ ಮಹಿಮೆಗಳು ಟಿ.ಆರ್.ಪಿ. ಹೆಸರಿನಲ್ಲಿ ಕಾಲಿಕ್ಕಿವೆ. ಸಮಾಜವನ್ನು ಫ್ಯಾಸಿಸಂ ಆವರಿಸಿಕೊಳ್ಳುವ ಬಗೆ ಇದು. ಜನರಿಗೆ ಸಿಟ್ಟೇ ಬರುತ್ತಿಲ್ಲವೋ ಹೇಗೋ ಗೊತ್ತಾಗುತ್ತಿಲ್ಲ, ಬಿಜೆಪಿಯನ್ನು ಮೂಲೆಗೆ ಸರಿಸುವ ಅವಕಾಶಗಳು ಜನರ ಕೈಗೆ ಬಂದುಹೋಗಿವೆ. ದುಡ್ಡು ದೊಡ್ಡಾಟ ಆಡುತ್ತಿರುವಾಗ ಈ ಜನತೆ ಹೇಗೆ ಬಿಜೆಪಿಗೆ ಬುದ್ಧಿ ಕಲಿಸುತ್ತಾರೆ ಹೇಳಿ. ಇವತ್ತು ಈ ನಾಡಿನ ಜನತೆಯನ್ನು ದೇವರೇ ಕಾಪಾಡಬೇಕು.

ಚಳವಳಿಗಳು ಕೊಂಚ ಎಚ್ಚರ ತಪ್ಪಿದರೆ ಎಂಥ ಹೊಲಸು ನಮ್ಮನ್ನು ಆವರಿಸಿಕೊಳ್ಳಲಿದೆ ಎಂಬುದು ನಮ್ಮ ಜನಪರ ಚಳವಳಿಗಳ ನಾಯಕರಿಗೆ ಈಗ ಗೊತ್ತಾಗಿರಬಹುದು. ಇವತ್ತು ನಮ್ಮ ಚಳವಳಿಗಳು ಅಧಿಕಾರ ರಾಜಕಾರಣದ ಹೊರಗೆ ನಿಂತು ಬಿಜೆಪಿಯಂತಹ ಪಕ್ಷವನ್ನು ಮಣಿಸಬೇಕಿದೆ. ನಮ್ಮ ಕಾಲದ ದುರಂತವೆಂದರೆ ಅಧಿಕಾರದಲ್ಲಿರುವ ಬಿಜೆಪಿ ಜನರ ಕಣ್ಣಿಗೆ ಖಳನಂತೆ ಕಾಣುತ್ತಿರುವಾಗಲೇ ವಿರೋಧ ಪಕ್ಷದಲ್ಲೊಬ್ಬ ಭರವಸೆ ಹುಟ್ಟಿಸಬಲ್ಲ ನಾಯಕ ಕಾಣುತ್ತಿಲ್ಲ, ನಮ್ಮ ಯಾವ ನಾಯಕನ ಮುಖದಲ್ಲೂ ಜನತೆಗೆ ವಿಶ್ವಾಸ ತುಂಬಬಲ್ಲ ಭರವಸೆಯ ಗೆರೆಗಳೇ ಕಾಣುತ್ತಿಲ್ಲ.

• ರಂಜಾನ್ ದರ್ಗಾ

ಇದು ಪ್ರಜಾಪ್ರಭುತ್ವದ ಗೇಲಿ...

...y stabbing democracy. ಪ್ರಜಾಪ್ರಭುತ್ವವನ್ನು ಲೂಟಿ ಮಾಡುವುದರ ಹರಿತ ಆಯುಧಗಳಿಂದ ಗಾಯವನ್ನು ಮಾಡುತ್ತಿರುವ ಸಂದರ್ಭದಲ್ಲಿ ...ವಾಗ ಜೆಡಿ(ಎಸ್) ಪಕ್ಷದ ಮುಖಂಡರು ಬಿಜೆಪಿಯೊಂದಿಗೆ ಕೈ ... ಅವತ್ತಿನಿಂದಲೇ ಈ ನಾಡಿನ ಪ್ರಜಾಪ್ರಭುತ್ವದ ಮೇಲೆ ಗಾಯದ ...ವು. ಈಗ ಬಿಜೆಪಿಯಲ್ಲಿ ರಾಜಕಾರಣಿಗಳಿಲ್ಲ; ಬಂಡವಾಳಶಾಹಿಗಳು ...ಗಲು ತೊಟ್ಟಿದ್ದಾರಷ್ಟೆ. ಇವತ್ತು ಪ್ರಜಾಪ್ರಭುತ್ವವನ್ನು ನಾವು ಈ ನವಲೂಟಿ ...ಸುವ ಸಾಹಸಗಳಿಗೆ ಕೈ ಹಾಕಬೇಕು. ಚಳವಳಿಯ ಕಾರ್ಯಕರ್ತರು ...ಗೆ ಅದರ ನಾಯಕರ ಹೆಗಲ ಮೇಲೆ ಪ್ರಭುತ್ವದ ದೊರೆಗಳು ಕೈಯಿಟ್ಟು ...ನ, ಪರಿಷತ್‌ಗಳಿಗೆ ಗಂಟು ಹಾಕಿದರು. ದಲಿತ, ಬಂಡಾಯ, ರೈತ, ಕನ್ನಡ




ಚಳವಳಿಗಳ ಯಾವುದೇ ನಾಯಕನನ್ನು ನೀವು ಗಮನಿಸಿ ಎಲ್ಲರೂ ಅಧಿಕಾರ ರಾಜಕಾರಣದಿಂದ ದೂರವಿದ್ದವರೇ. ಆದರೆ ಈಗ ಎಲ್ಲರೂ ಪ್ರಭುತ್ವದ ಹಾಲಿ-ಮಾಜಿ ಫಲಾನುಭವಿಗಳೇ.

ನಮ್ಮ ಪ್ರಜಾಪ್ರಭುತ್ವವನ್ನು ಬಿಜೆಪಿಯಂತಹ ಪಕ್ಷ ಎಷ್ಟು ಚೆನ್ನಾಗಿ ಗೇಲಿ ಮಾಡುತ್ತಿದೆ ಎಂದರೆ: ಮೊನ್ನೆ ಈ ಸರ್ಕಾರ ವಾಲ್ಮೀಕಿ ಜಯಂತಿ ನೆಪದಲ್ಲಿ 'ಸರ್ಕಾರಿ ರಜೆ' ಘೋಷಿಸಿದ್ದು ಬೇಡ ಜನಾಂಗದ ಮೇಲಿನ ಪ್ರೀತಿಯಿಂದಲ್ಲ; ರಾಮಾಯಣದೆಡೆಗಿನ ತನ್ನ ಗುಪ್ತ ಅಜೆಂಡಾದಿಂದ. ವಾಲ್ಮೀಕಿ ಹೆಸರಿನಲ್ಲಿ ಬೇಡರನ್ನು ಖರೀದಿಸುವ ಕೆಲಸ ಇದು. ನಾಳೆ ವ್ಯಾಸನನ್ನು ಕೊಂಡಾಡಿ ಬೆಸ್ತರನ್ನು, ಕಾಳಿದಾಸ, ಕನಕದಾಸರ ಭಜನೆ ಕೀರ್ತನೆಗಳಲ್ಲಿ ಕುರುಬರನ್ನು ಖರೀದಿಸುವ ಪ್ರಯತ್ನಗಳಿಗೆ ಬಿಜೆಪಿ ಕೈ ಹಾಕಬಹುದು.

ದಲಿತ, ರೈತ, ಭಂಗಿ, ಮಹಿಳೆ, ಶ್ರಮಿಕರನ್ನೆಲ್ಲ ಒಳಗೊಂಡಿರುವ ಈ ದೇಶದಲ್ಲಿ ಭಗವಧ್ವಜ ಹಿಡಿದವರದ್ದು ಮಾತ್ರ ನಿಜವಾದ ದೇಶಪ್ರೇಮವೆಂದು ಕೋಮುಶಕ್ತಿಗಳು ಮುಗ್ಧ ಜನತೆಯನ್ನು ನಂಬಿಸುವ ಕೆಲಸಗಳಲ್ಲಿ ನಿರಂತರವಾಗಿ ತೊಡಗಿಕೊಂಡಿದೆ. ಒಂದು ಕ್ರೌರ್ಯವನ್ನು ಎದುರಿಸಲಿಕ್ಕೆ ಇನ್ನೊಂದು ಕ್ರೌರ್ಯದ ಜೊತೆ ಸೇರುತ್ತೀನಿ ಅಂದರೆ ಆಗುತ್ತಾ? ಒಂದು ಭರವಸೆಯಿದೆ: ಅದು ಜನತೆಯ ಚಳವಳಿ. ಇವತ್ತು ಹರಿದು ಛಿದ್ರಗೊಂಡಿರುವ ನಮ್ಮ ನಾಡಿನ ಯಾವುದೇ ಮನುಷ್ಯಪರ ಚಳವಳಿಗಳಿರಬಹುದು, ಯಾವುದಕ್ಕೂ ರಕ್ತದ ಕಲೆಗಳು ಮೆತ್ತಿಕೊಂಡಿಲ್ಲ

ಕಿಚ್ಚು ಹತ್ತಿದ ನೆಲದಲ್ಲೊಂದು ಸಹಮತದ ಆಶಾದೀಪ....



ಮತ-ಧರ್ಮಗಳ ನಡುವೆ ಕಿಚ್ಚು ಹಚ್ಚಿ ಮನಸ್ಸು ಮನಸ್ಸುಗಳ ಮಧ್ಯೆ ಗೋಡೆ ಎಬ್ಬಿಸುತ್ತಿರುವ ಹುಟ್ಟು ಹಿಂದೂತ್ವವಾದಿಗಳ ಪಾಲಿಗೆ 'ಕರ್ನಾಟಕದ ಲ್ಯಾಬೋರೇಟರಿ' ಎನಿಸಿರುವ ಕರಾವಳಿಯಲ್ಲಿ ಸಣ್ಣ ಸಣ್ಣ ಮಟ್ಟದಲ್ಲಿ ಸ್ಥಳೀಯವಾಗಿ ಮನ-ಮನಗಳ ಬೆಸೆಯುವ ಕಾರ್ಯಗಳು ಜರುಗುತ್ತಿವೆ. ಇಲ್ಲಿನ ಸೌಹಾರ್ದ ಪರಂಪರೆಗೆ ಶತಮಾನಗಳ ಇತಿಹಾಸವೇ ಇದೆ.

ಇಲ್ಲಿ ಬಹುಸಂಖ್ಯಾತರು, ಅಲ್ಪಸಂಖ್ಯಾತರು ಕೊಡುಕೊಳ್ಳುವಿಕೆಯ ಮೂಲಕ ಸಮ್ಮಿಶ್ರ ಸೌಹಾರ್ದ ಸಂಸ್ಕೃತಿಯನ್ನು ಬೆಳೆಸುತ್ತಾ ಬಂದಿದ್ದಾರೆ.

ಆದರೆ ಕಳೆದ ಒಂದೂವರೆ ದಶಕದಿಂದ ಕೋಮುವಾದಿ ಶಕ್ತಿಗಳು ಈ ನೆಲದಲ್ಲಿ ನಂಜು ಹರಡುವ ಮೂಲಕ ನೆತ್ತರು ಸುರಿಸಿವೆ. ಈಗಲೂ ಅಲ್ಲಿ ಜನರ ನಡುವೆ ಎದ್ದ ಗೋಡೆಗಳು ಶಿಥಿಲಗೊಳ್ಳುತ್ತಿಲ್ಲ. ಬೆಂಕಿ ಕಕ್ಕುವ ಭಜರಂಗಿಗಳ ಅಜೆಂಡಾಕ್ಕೆ ಹಿನ್ನಡೆಯುಂಟುಮಾಡುವ ಸಾಕಷ್ಟು ಸೌಹಾರ್ದ ಪ್ರಯತ್ನಗಳು- ಸಣ್ಣಮಟ್ಟದಲ್ಲಾದರೂ ಇಲ್ಲಿ ತಣ್ಣಗೆ ನಡೆಯುತ್ತಲಿರುವುದು ಆಶಾಭಾವನೆಯ ಸಂಕೇತವಾಗಿದೆ.

ಅಂಥವುಗಳಲ್ಲಿ ಕುಂದಾಪುರದ 'ಸಹಮತ' ಸಂಘಟನೆಯ ಬೆಳಕಿನ ಹಬ್ಬವೂ ಒಂದು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ನರೆಲ್ಲ ಸೇರಿ ಆಚರಿಸುವ ಈ ದೀಪಾವಳಿ ಹಬ್ಬ ಮುರಿದ ಸೌಹಾರ್ದವನ್ನು ಮತ್ತೆ ಕಟ್ಟುವ ಒಂದು ಆಶಾಕಿರಣವಾ[...] ಕಳೆದ ವರ್ಷ ಆರಂಭವಾದ ಸಹಮತದ ಈ ಹಬ್ಬ ಧರ್ಮಾತೀತವ[...] ಜನಮೆಚ್ಚುಗೆ ಪಡೆದಿತ್ತು.

ಈ ವರ್ಷವೂ ಇದೇ ನವೆಂಬರ್ 5ರಂದು ಮತ್ತೆ ಅಂತಹ ಸೌಹಾ[...] ಸಂಜೆ ಕುಂದಾಪುರದಲ್ಲಿ ಮರುಕಳಿಸುತ್ತಿದೆ. ರಂಗಕರ್ಮಿ ಐ.ಕೆ. ಬೋಳುವ[...] ಉದ್ಘಾಟಿಸುವ ಈ ಹಬ್ಬದಲ್ಲಿ 'ಜನರ ಹಬ್ಬಗಳು' ವಿಷಯದ ಕುರಿ[...] ಕೆ.ಫಣಿರಾಜ್ ಮಾತನಾಡುವರು. ಮೂಡ್ಲಕಾಡಿಯ ಶ್ರೀ ಅರ್ಧನಾರೀ[...] ಜನಪದ ಕಲಾಮಂಡಳಿ ಜಾನಪದ ನೃತ್ಯವನ್ನು, ಕೋಟ ಪಡುಕರೆ[...] ರಿಫಾಯಿಯಾ ದಫ್ ಸಮಿತಿಯವರು ದಫ್ ಪ್ರದರ್ಶನವ[...] ಪ್ರಸ್ತುತಪಡಿಸಲಿದ್ದಾರೆ. ಹಿಂದೂ, ಮುಸ್ಲಿಂ, ಕ್ರೈಸ್ತರ ಸಂಗಮದ ಈ ದೀಪಾ[...] ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಲೇರಿಯನ್ ಮೀನೋಸ್ ವಹಿಸಲಿದ[...]

ಸರ್ವಧರ್ಮದ ಶಾಂತಿಯ ತೋಟವೆಂದರೆ ಇದೇ ಅಲ್ಲವೇ?

'ನಿಮ್ಮೊಂದಿಗೆ ನಾವಿದ್ದೇವೆ' ಎಂಬ ಸಂದೇಶದ ಸ್ಫೂರ್ತಿಯೊಂ[...] ಅರಿವಿನ ಬೆಳಕನ್ನು ಹರಡುತ್ತಿರುವ 'ಸಹಮತ'ದ ಶಶಿಧರ್ ಹೆಮ[...] ಮತ್ತು ಮಿತ್ರರ ಈ ಕಟ್ಟುವ ಕೆಲಸ ಊರೂರಿಗೆ ಹರಡಲಿ.

• 'ಲಂಕೇಶ್' ಬಳ[...]

2 ಸಾಂಸ್ಕೃತಿಕ ಲೋಕದ "ಆಪರೇಷನ್ ಕಮಲ"!

ರಿಯಲ್ ಎಸ್ಟೇಟ್ ಲಾಬಿಗಳೇ ಮುಂದೆ ನಿಂತು ಪ್ರಶಸ್ತಿ ವಿಜೇತರು ಸೈಟಿಗಾಗಿ ತುಂಬಬೇಕಾದ ಹಣವನ್ನು ತುಂಬುತ್ತಾರೆ. ನಂತರ ಇನ್ನಷ್ಟು ಹಣಕೊಟ್ಟು ಅವರಿಂದ ಕೊಂಡುಕೊಂಡು ಕೋಟ್ಯಾಂತರ ರೂಪಾಯಿಗೆ ಮಾರಿಕೊಳ್ಳುತ್ತಾರೆ. ಹೀಗಾಗಿ ರಾಜ್ಯೋತ್ಸವ ಪ್ರಶಸ್ತಿ ಹಲವರ ಭಾಗ್ಯದ ಬಾಗಿಲನ್ನು ತೆರೆಯುವುದರಿಂದ ಮೌಲಿಕ ಕಾರಣಗಳಿಗಾಗಿ ಅದನ್ನು ತಿರಸ್ಕರಿಸುವಷ್ಟು ಬದ್ಧತೆ ಬಯಸುವುದು ದುರಾಸೆಯೇ ಆಗಿಬಿಡಬಹುದು.

ಪ್ರಶಸ್ತಿ ಪಡೆದುಕೊಳ್ಳುತ್ತಿರುವ ಎಲ್ಲಾ ಪ್ರಗತಿಪರರೂ ಇದೇ ಕೆಟಗರಿಯವರೇನಲ್ಲ. ಹಣಕ್ಕೆ ಅಥವಾ ಲೋಭಕ್ಕೆ ತಮ್ಮನ್ನು ತಾವು ಮಾರಿಕೊಳ್ಳದ ಪ್ರಗತಿಪರರೂ ಪ್ರಶಸ್ತಿ ಸ್ವೀಕರಿಸಿದ್ದಾರೆ. ಅವರ ವಾದ ಇನ್ನೂ ವಿಚಿತ್ರ. ಮಿಕ್ಕೆಲ್ಲಾ ವಿಷಯಗಳಲ್ಲೂ ಸರ್ಕಾರವೆಂದರೆ ಬಿಜೆಪಿ ಸರ್ಕಾರ-ಕೋಮುವಾದಿ ಸರ್ಕಾರ ಎಂದೇ ಪರಿಗಣಿಸುವ ಇವರು ಪ್ರಶಸ್ತಿಗಳ ಸಂದರ್ಭ ಬಂದಾಗ ವಿಚಿತ್ರ ಗೊಂದಲಕ್ಕೊಳಗಾಗುತ್ತಾರೆ. "ಸರ್ಕಾರ ಅಂದರೆ ಅದು ಎಲ್ಲರ ಸರ್ಕಾರ. ಅದು ಕೊಡುತ್ತಿರುವುದು ಜನರ ದುಡ್ಡು. ಹೀಗಾಗಿ ಸರ್ಕಾರದ ಪ್ರಶಸ್ತಿ ಎಂದರೆ ಬಿಜೆಪಿ ಕೊಡುತ್ತಿರುವ ಪ್ರಶಸ್ತಿ ಎಂದೇನೂ ಅರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ" ಎಂಬ ವಾದವನ್ನು ಅವರು ಮುಂದಿಡುತ್ತಾರೆ. ಸರ್ಕಾರ ತೆಗೆದುಕೊಳ್ಳುವ ಪ್ರತಿ ನಿರ್ಧಾರದ ಹಿಂದೆಯೂ ಅದರ ಸಿದ್ಧಾಂತ ಕೆಲಸ ಮಾಡುತ್ತದೆ ಎಂದು ಮಿಕ್ಕ ಸಂದರ್ಭದಲ್ಲಿ ಇದೇ ವಿದ್ವಾಂಸರೇ ಪಾಠ ಹೇಳುತ್ತಾರೆ. ಆದರೆ ಪ್ರಶಸ್ತಿಯ ವಿಷಯಕ್ಕೆ ಬಂದಾಗ ಮಾತ್ರ ಅದರ ಸಿದ್ಧಾಂತ ಪಕ್ಕಕ್ಕೆ ಸರಿದು ಮೌಲ್ಯಗಳು ಕೆಲಸ ಮಾಡುತ್ತವೆ ಎಂದು ಹೇಗೆ ಭಾವಿಸಿಕೊಳ್ಳಬಹುದು?

ಇನ್ನು ಕೆಲವರು "ತಮಗಿಂತ ದೊಡ್ಡವರು ಪ್ರಶಸ್ತಿ ತಿರಸ್ಕರಿಸಿದರೆ ಅದು ಸರ್ಕಾರದ ಗಟ್ಟಿ ಮೈಚರ್ಮವನ್ನು ತಾಗಬಹುದು. ಆದರೆ ತಮ್ಮಂಥವರು ತಿರಸ್ಕರಿಸಿದರೆ ತಾನೇ ಆಗುವ ಪ್ರಯೋಜನವೇನು" ಎಂದು ಕೇಳುತ್ತಾರೆ. ಆದರೆ ಇಲ್ಲಿ ಪ್ರಶಸ್ತಿಯ ನಿರಾಕರಣೆ ಮಾಡುವುದು ಸರ್ಕಾರವನ್ನು ಪರಿವರ್ತಿಸಲಲ್ಲ, ತಾವು ಬದಲಾಗದಂತೆ ನೋಡಿಕೊಳ್ಳಲು ಎಂಬುದನ್ನು ಮರೆಯುತ್ತಾರೆ. ಅಷ್ಟು ಮಾತ್ರವಲ್ಲ, ಮೌಲ್ಯಗಳಿಗೆ ಬದ್ಧರಾಗಿ ಪ್ರಶಸ್ತಿಯನ್ನು ತಿರಸ್ಕರಿಸುವುದು ಒಂದು ಆದರ್ಶಯುತ ಮೌಲ್ಯ. ಇದು ಸರ್ಕಾರದ ಮೇಲೆ ಏನೇ ಪ್ರಭಾವ ಬೀರದಿದ್ದರೂ ಸಮಾಜದ ಮೇಲೆ ಸತ್ಪರಿಣಾಮವನ್ನು ಬೀರುತ್ತದೆ. ಸರ್ವತ್ರ ಭ್ರಷ್ಟಾಚಾರ ಮತ್ತು ನೈತಿಕ ಅಧಃಪತನಗಳೇ ಕಾಣುತ್ತಿರುವಾಗ ಸಮಾಜದ ನೈತಿಕತೆ ಮೈಕೊಡವಿ ಮೇಲೇಳಲು ಇಂಥಾ ಮಾದರಿಗಳು ಬೇಕಾಗುತ್ತವೆ. ಹೀಗಾಗಿಯೇ ನಾವು ಸಣ್ಣವರು ಎಂಬ ಇಂಥಾ ಗಣ್ಯರ ಮಾತುಗಳೂ ಈ ಸಂದರ್ಭದಲ್ಲಿ ಏಕೋ ವಿನಯ ಅಥವಾ ಸಜ್ಜನಿಕೆಯ ಮಾತಾಗಿ ಕೇಳು ವುದೇ ಇಲ್ಲ.

ಸರ್ಕಾರ ಎಲ್ಲರ ಸರ್ಕಾರವಾಗಬೇಕು ಎಂಬುದು ಆಶಯ, ವಾಸ್ತವವಲ್ಲ. ಸರ್ಕಾರಗಳು ತಾವು ಪ್ರತಿನಿಧಿಸುವ ವರ್ಗ, ಜಾತಿ, ಸಮುದಾಯಗಳ ಸರ್ಕಾರವೇ ಆಗಿರುತ್ತದೆ. ಬಿಜೆಪಿ ಸರ್ಕಾರ ಮೇಲ್ಜಾತಿ ಮತ್ತು ಮೇಲ್ವರ್ಗಗಳನ್ನು ಪ್ರತಿನಿಧಿಸುವ ಬ್ರಾಹ್ಮಣವಾದಿ ಕೋಮುವಾದಿ ಸರ್ಕಾರವೇ ಆಗಿದೆ. ಅದು ನವಂಬರ್‌ನಲ್ಲಿ ಮಾತ್ರ ಬೇರೆಯಾಗುವುದಿಲ್ಲ. ಅದು ಕೊಡು ವುದು ಜನರ ದುಡ್ಡನ್ನೇ! ಆದರೆ ಆ ದುಡ್ಡನ್ನು ಅದು ತನ್ನ ಅಜೆಂಡಾಗಳಿಗೆ ತಕ್ಕಂತೆ ವಿನಿಯೋಗಿಸುತ್ತದೆ. ಬಜೆಟ್ ರೂಪಿಸುವಾಗಲೂ ಅಷ್ಟೆ. ಪ್ರಶಸ್ತಿ ನೀಡುವಾಗಲೂ ಮತ್ತು ಪ್ರಶಸ್ತಿ ವಿಜೇತರ ಸಂಖ್ಯೆಯನ್ನು ಹೆಚ್ಚಿಸುವಾಗಲೂ ಅಷ್ಟೆ.. ಅಲ್ಲಿ ಕೆಲಸ ಮಾಡುವುದು ಬಿಜೆಪಿ ಸಿದ್ಧಾಂತವೇ. ಪ್ರಶಸ್ತಿ ಆಯ್ಕೆಗಾಗಿ ರೂಪಿಸಿದ ಪ್ರಕ್ರಿಯೆಯಲ್ಲಿಯೇ ಇದು ಅಂತರ್ಗತವಾಗಿರುತ್ತದೆ. ಹೀಗಾಗಿ ಪ್ರಶಸ್ತಿ ಕೊಡುವುದು ಸರ್ಕಾರವೇ ಎಂಬುದು ನಿಜವಾದರೂ ಅದು ಬಿಜೆಪಿ ಸರ್ಕಾರ ಎಂಬುದನ್ನು ಮರೆಯಬಾರದು. ಆದರೆ ತನ್ನ ನಾಟಕಗಳ ಒಳ ಉದ್ದೇಶವನ್ನು ಮರೆಮಾಚುವ ಮುಖವಾಡವನ್ನು ಧರಿಸುವಲ್ಲಿ ಪರಿಣಿತವಾಗಿರುವ ಬಿಜೆಪಿ ಸರ್ಕಾರ ತನ್ನ ಈ ಉದ್ದೇಶ ಬಟಾಬಯಲಾಗದಿರಲೆಂದೇ ಕೆಲವು ಉತ್ತಮರಿಗೂ ಪ್ರಶಸ್ತಿಯನ್ನು ಕೊಡುತ್ತದೆ, ಕೊಟ್ಟಿದೆ. ಆದರೆ ಇದು ಅವರ ಜನಪರತೆಗೆ ಮತ್ತು ವಿದ್ವತ್ತಿಗೆ ಅಥವಾ ಸಾಧನೆಗೆ ನೀಡಿರುವ ಮನ್ನಣೆಯಲ್ಲ, ಬದಲಿಗೆ ತನ್ನ ಕೋಮುವಾದಿ ಹುನ್ನಾರಗಳು ಕಾಣಿಸದಂತೆ ಹಾಕಿಕೊಂಡಿರುವ ಮುಖವಾಡಗಳು.



ನಮ್ಮ ಶ್ರೇಷ್ಠ ಮನಸ್ಸುಗಳು ಪ್ರಶಸ್ತಿಯ ಸಂದರ್ಭದಲ್ಲಿ ಸರಿಯಾದ ನಿಲುವನ್ನು ತೆಗೆದುಕೊಳ್ಳದೆ ಬಿಜೆಪಿಯ ಮುಖವಾಡಗಳಂತೆ ಬಳಕೆಯಾಗುತ್ತಿರುವುದು ಈ ನಾಡಿನ ಸಾಂಸ್ಕೃತಿಕ ದುರಂತ.

ಇದು ಕೇವಲ ಬಿಜೆಪಿ ಪಕ್ಷದ ಸರ್ಕಾರ ಎಂದೇನಲ್ಲ. ಎಲ್ಲಾ ಪ್ರಭುತ್ವಗಳು ಪ್ರಶಸ್ತಿ, ಪದವಿ ನೀಡುವ ಮೂಲಕ ಸಾಂಸ್ಕೃತಿಕ ಲೋಕದಲ್ಲಿ ಇದೇ ರಾಜಕಾರಣವನ್ನು ಮಾಡುತ್ತವೆ. ಹೀಗಾಗಿ ಆಂಧ್ರದಂಥಾ ಕಡೆಗಳಲ್ಲಿ ಪ್ರಗತಿಪರ ಸಾಹಿತಿಗಳು ಪ್ರಭುತ್ವದಿಂದ ಗಾವುದ ದೂರವನ್ನು ಉಳಿಸಿಕೊ[...] ಜನರಿಗೆ ಹತ್ತಿರವಿರಬೇಕು, ಪ್ರಭುತ್ವಕ್ಕೆ ದೂರವಿ[...] ಎಂಬುದು ಅಂಥವರು ಪಾಲಿಸಿಕೊಂಡು ಬಂದಿರುವ[...]ದಾಯ. ಏಕೆಂದರೆ ಸಾಮಾಜಿಕ ಜೀವನದಲ್ಲಿ ಪ್ರಭು[...] ಮೇಲ್ವರ್ಗ ಮತ್ತು ಮೇಲ್ಜಾತಿಗಳ ಪರವಾಗಿ ನಿಂತು [...] ಜನತೆಯ ಮೇಲೆ ನಡೆಸುತ್ತಿರುವ ಅನ್ಯಾಯಗಳನ್ನು [...] ನಂತರ ಅಂಥಾ ಪ್ರಭುತ್ವಕ್ಕೆ "ಕಲಾ ಪೋಷಕ" ಸ್ಥಾ[...] ಕೊಡುವುದು ಕೊಲೆಗಾರನಿಗೆ ಸನ್ಮಾನ ಮಾ[...] ಎಂಬುದು ಅವರುಗಳ ನಿಲುವು. ಹೀಗಾಗಿ ಅಲ್ಲಿ [...] ನೈಚ್ಯಾನುಸಂಧಾನಗಳು ಸಂಭವಿಸುವುದೇ ಇಲ್ಲ. [...] ಕಾರಣ ಸ್ಪಷ್ಟ. ಅವರು ಪ್ರಭುತ್ವಕ್ಕೆ ದೂರ. ಕಷ್ಟಜೀ[...] ಹತ್ತಿರ. ನಮ್ಮಲ್ಲಿ???

ಇಷ್ಟಾಗಿಯೂ ಕನ್ನಡ ಸಂದರ್ಭ[...] ಈ ಹಿಂದೆ ಹಿರಿಯ ಎಡಪಂ[...] ಚಿಂತಕರಾದ ಜಿ. ರಾಮಕೃಷ್ಣರವರು, [...] ನೃಪತುಂಗ ಪ್ರಶಸ್ತಿಯನ್ನು ನಿರಾಕರಿ[...] ಹಿರಿಯ ಚಿಂತಕ ದೇವನೂರು ಮಹಾ[...]ರವರು ನಮ್ಮ ಮುಂದಿದ್ದಾರೆ. [...] ಲಿಸ್ಟಿನಲ್ಲಿ ಪ್ರಸ್ತುತ ರಾಜ್ಯೋತ್ಸವ ಪ್ರಶ[...]ತನಗೆ ನೀಡಲಾಗುತ್ತಿದೆ ಎಂಬ ಸ[...]ಸಿಕ್ಕೊಡನೆ ಪ್ರಶಸ್ತಿ ಬೇಡವೆಂದು ಸಕ[...] ಪತ್ರ ಬರೆದ 'ಕನ್ನಡಪ್ರಭ'ದ ಸಂ[...] ಶಿವಸುಬ್ರಹ್ಮಣ್ಯರವರೂ ಸೇರುತ್ತಾರೆ. ಆ[...] ಇಂಥವರು ಅಲ್ಪಸಂಖ್ಯಾತರಲ್ಲಿ ಅಲ್ಪ[...]ತರು.

ಆದ್ದರಿಂದಲೇ ಈ ಸಂದರ್ಭದಲ್ಲಿ ಇಂಗ್ಲಿಷ್[...] ಯೇಟ್ಸ್ ಹೇಳುವ ಮಾತೇ ಮತ್ತೆ ಮತ್ತೆ ಜ್ಞಾಪಕಕ್ಕೆ ಬ[...]

"The best lack all conviction, while [...] worst are full of passionate inten[...]

(ಉತ್ತಮರು ಎಲ್ಲಾ ಬಗೆಯ ನಂಬಿಕೆಗಳನ್ನು ಕಳೆದುಕೊಂ[...] ದುಷ್ಟರು ಭಾವೋನ್ಮತ್ತ ತೀವ್ರತೆಯನ್ನು ತುಂಬಿಕೊಂಡಿ[...]

ಯಡಿಯೂರಪ್ಪ ಕುಂದಾಪುರಕ್ಕೆ ಬಂದರು



ಯಡಿಯೂರಪ್ಪ ಕುಂದಾಪುರಕ್ಕೆ
ಬಂದರು
ಯೋಜನೆಗಳನ್ನು ತಂದರು
ಅಣೆಕಟ್ಟು, ಕಾಲೇಜು, ಬಂದರು.
ಮಗನ ಲೋಕಸಭಾ ಕ್ಷೇತ್ರ
ವಿಶೇಷ ಸವಲತ್ತಿಗೆ ಪಾತ್ರ.
ಹಲವು ಶಂಕುಸ್ಥಾಪನೆ
ಕೆಲವು ಉದ್ಘಾಟನೆ
ಪುರೋಹಿತರ ಮಂತ್ರ
ಜೆಸಿಬಿ ಯಂತ್ರ.

ಆರೋಗ್ಯ ಕೊಡಲಾಗಲಿಲ್ಲ
ಎಂದು ಶ್ರೀರಾಂ-
ಮುಲುಗದಿರಿ, ಮರುಗದಿರಿ.
ಇಗೋ ತಂದಿಹೆನು ಆರೋಗ್ಯ ಕಾರ್ಡು
ಜನಜನರಿಗೂ ಜನರಲ್ ವಾರ್ಡು.
ಯಡ್ಡಿ ಹೇಳಿದರು
ಚಡ್ಡಿ ಹಾಕದ ಮಕ್ಕಳ
ತಾಯಂದಿರು ಕೇಳಿದರು.

ಪತ್ರಕರ್ತರ ದಂಡು
ಕೇಳಿದ ಪ್ರಶ್ನೆಗಳ ಕಂಡು
ಮುಖದಲ್ಲಿ ಸಿಡುಕು.
ದೊರೆಗೆ ಕೋಪ ಬಂದರೆ
ಜಾಹೀರಾತಿಗೆ ಕೆಡುಕು.
ದೇವಸ್ಥಾನ ಕಂಡಲ್ಲಿ
ಕಾರು ನಿಲುಗಡೆ
ಗೃಹಚಾರ ಬಿಡುಗಡೆ.
ಹರಿವಾಣ ಹಿಡಿದು ಹಲ್ಕಿರಿವ ಭಟ್ಟರು
ಆಶೀರ್ವಾದವೋ ಅಮುಲ್ ಬಟರು.

ನಗರದ ತುಂಬೆಲ್ಲ ಸೈರನ್ನು ಕಾರುಗಳು
ಕಟೌಟು, ಬ್ಯಾನರು, ಹೂ ಹಾರಗಳು
ಬೆಂಗಾವಲು ವಾಹನದ
ಕಂಗಾಲು ಪೊಲೀಸರು.
ಅಹಾ! ಎಷ್ಟೊಂದು ಭದ್ರತೆ
ಯಡಿಯೂರಪ್ಪನಿಗೆ
ಅಯ್ಯೊ! ಎಷ್ಟು ಅಭದ್ರತೆ
ನನ್ನ ಸರಕಾರಕ್ಕೆ.
ರಸ್ತೆಯಲಿ ಧೂಳು, ಪಾರ್ಟಿ ಹೋಳು
ಮುಖದಲ್ಲಿ ಎದ್ದು ಕಾಣುವ ಗೋಳು.

ಯಡಿಯೂರಪ್ಪ ಕುಂದಾಪುರಕ್ಕೆ ಬಂದರು
ಗಾಂಧಿ ಮೈದಾನದಲ್ಲಿ ಸೇರಿದರು ಜನ
ದನಗಳೂ ಇದ್ದವು
ಭಾಷಣ ಶುರುವಾಯಿತು.
ಎಲವೋ ವಿಪಕ್ಷವೇ
ನನ್ನ ಮುಟ್ಟು
ಅಬ್ಬಾ! ಎಂತಹ ಸಿಟ್ಟು.
ಪಕ್ಕದಲಿ ಶೋಭಾ-
ಯಮಾನವಾದ ಪಕ್ಷದವರೇ
ಈ ಧೈರ್ಯದ ಗುಟ್ಟು.
ಮುಗಿಯುತ್ತಿಲ್ಲ ಭಾಷಣ
ಕುಮಾರಸ್ವಾಮಿ ಕಾರಣ
ಚಚ್ಚಿದರು, ಚುಚ್ಚಿದರು
ಭಾಷಣದಲ್ಲೇ ಕಚ್ಚಿದರು
ಜನರು ಬೆಚ್ಚಿದರು. ಕಾದರು
ಹತ್ತಬೇಕು ಬೇಗ ಲಾರಿ
ಕತ್ತಲಾದರೆ ಕಾಣದು
ಊರ ದಾರಿ.

ಸಿಳ್ಳೆಗಳು ಬಿದ್ದವು
ಸೊಳ್ಳೆಗಳು ಎದ್ದವು
ಯಡಿಯೂರಪ್ಪನ ಭಾಷಣ ಮುಗಿ[...]
ಜನರು ಚಪ್ಪಾಳೆ ತಟ್ಟಿದರು
ಚಪ್ಪಾಳೆಗಳ ನಡುವೆ ಸಿಕ್ಕು
ಹಲವು ಸೊಳ್ಳೆಗಳು ಸತ್ತವು.
ಚಪ್ಪಾಳೆ ಸಾರ್ಥಕವಾಯಿತು
ಚಪ್ಪಾಳೆ ಸಾರ್ಥಕವಾಯಿತು
ಚಪ್ಪಾಳೆ ಸಾರ್ಥಕವಾಯಿತು.

• ಶಶಿಧರ ಹೆಮ[...]

ತಿದ್ದುಪಡಿ
108 ಅಂಬುಲೆನ್ಸಿನಲ್ಲಿ
ಹೆಣ ಸಾಗಿಸುವಂತಿಲ್ಲ
ಹಣ ಸಾಗಿಸಬಹುದು!

ಈ ಸರ್ಕಾರದಲ್ಲಿ ಮಂತ್ರಿ ಆಗೋರಿಗೆ ಮರ್ಯಾದೆ ಇದ್ದತ್ತಾ?

...ನೆಲ ಶವವಾಗಿದ್ರೂ ರಾಗಿ ತೆನೆ ಕಾಚಕ್ಕಿ ಆಗಿದ್ದೊ. ...ಸೊನೆಯಂತಹ ಒಂದು ಸಣ್ಣ ಮಳೆ ಬೇಕಿತ್ತು ...ನು ಕಾಳಮಾವ ಚಿಂತಿಸುತ್ತಿರುವಾಗಲೇ, ಒಂದು ...ದ ಮಳೆ ಬಂದು ರುಬ್ಬಿ ಹೋಯಿತು. ಅಷ್ಟಲ್ಲದೆ ... ದಿನ ಮುಗಿಲು ಊದಿಕೊಂಡು ಆತಂಕವನ್ನು ...ತ್ತು, ಈ ಹಿಂದೆ ಬೆಳೆಗಾಗುವಷ್ಟು ಮಳೆ ಬರುವುದು, ...ತುಂಬುವಷ್ಟು ಮಾತ್ರ ಮಳೆ ಬರುವುದು ದೇವರ

... ಯ ಲು ಸೀ ಮೆ

ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

...ಮವೆಂದು ಭಾವಿಸಿದ್ದ ಕಾಳಮಾವನ ನಂಬಿಕೆಯೇ ...ಡುವಂತೆ ಮಳೆಗಾಲ ವರ್ತಿಸಿತ್ತು. ಆದ್ದರಿಂದ ಈಗ ...ಕೊಂಡ ಮುಗಿಲು ಮೇಲಿಳಿದರೆ ಕೈಗೆ ಬಂದಿದ್ದು ...ಮುಗಿಲ್ಲದಂತಾಗುತ್ತದೆ ಎಂದು ಯೋಚಿಸುತ್ತಿರುವಾಗ ... ಮತ್ತು ಜುಮ್ಮಿ ಕಾಣಿಸಿಕೊಂಡರು. ಆಗ ಈ ... ರಾಜಕಾರಣ ಮಾತನಾಡಬೇಕಾದ ಅನಿವಾರ್ಯತೆಗೆ ...ದಂತೆ ತಾತ್ಸಾರದ ದನಿಯಲ್ಲಿ

"ಯಾರ್‍ಯಾರು ಮಂತ್ರಿಗಳಾದುರ್ಲ ಉಗ್ರೀ?" ಎಂದ.

"ಯಾರ್ನು ಮಾಡಕ್ಕಾಗಲಿಲ್ಲ ಕಣಮಾವ."

"ಅದ್ಯಾಕೊ?"

"ಅದೂ ರೇಣುಕಾಚಾರಿ, ಶೋಭಾ, ಸೋಮಣ್ಣನ ...ಡಿದಷ್ಟು ಸುಲಬಲ್ಲ. ಅಂಗೆ ನೋಡಿದ್ರೆ ಸೋಮಣ್ಣ ...ಭ ಸೇರಿದಾಗ್ಲೆ ಈ ಸಮಸ್ಯೆ ಹಕನಾಯ್ತಿಗಂಡಿದ್ದು."

"ಯಾವ ಸೂಳೆಮಗ ಮಂತ್ರಿಯಾದ್ರು ತಾನೆ ...ಗೀನ್ಲ?" ಎಂದ ಸೀರ.

"ಅಂಗ್ಯಲ್ಲ ಅನ್ನಬ್ಯಾಡ ಕಣಮಾವ. ಮಂತ್ರಿ ಪದವಿ ...ವತ್ತೂ ದೊಡ್ಡದೆಯ. ಈ ತೂಕವಿಲ್ದವು ಅದರ ... ಹಾಳುಮಾಡ್ಯವೆ ಅಷ್ಟೆಯ."

"ವರತೂರು ಪ್ರಕಾಸ ಅನ್ನೋನು ಮಂತ್ರಿಯಾಗ ...ಬೇನ್ಲ?" ಎಂದ ಸೀರ.

"ಅವುನ್ಯಾರ್ಲ?" ಎಂದ ಕಾಳಮಾವ.

"ಏ, ಅಧೊಂದು ಪೋಲಿ ಬಡ್ಡೆತ್ತುದ್ದು ಕಣಮಾವ. ...ಮೇ ಸರಿಲ್ಲ."

"ಅಂಗರೆ ತಲಿ ಸರಿಲ್ಲೋನೆ ಮಂತ್ರಿಯಾಗಕ್ಕೆ ವಂಟಿದ್ನೆ?"

"ಊ, ಮಂತ್ರಿಗಿರಿ ಕೊಡೋನೂ ಅಂಗೆ ಅಲವೆ ...ಮ. ಈ ವರ್ತೂರು ಪ್ರಕಾಶ್ ಅನ್ನೊ ಗಿರಾಕಿ ಇಲ್ಲೆ ...ಮಂಗಲಕ್ಕೆ ಬಂದಾಗ ಏನಂತ ಬಾಸಣ ಮಾಡಿದ್ದ ...ತ್ತಿ? ಮುಂದೆ ಒಬ್ಬ ಕುರುಬರೋನ್ನ ಎಮ್ಮೆಲ್ಲೆ ...ಚಡೆಯಿದ್ರೆ ರಗುತಪಾತಾಯ್ತದೆ ಅಂದಿದ್ದ."

"ಅಂಗರೆ ತಲಿ ಕೆಟ್ಟದೆ ಬುಡು."

"ಅಂಥೋನ್ನ ಮಂತ್ರಿ ಮಾಡದೆ ಆದ್ರೆ, ನಾನೇನಾಗಿದ್ದಿನಿ ಅಂತ ಬ್ಯಲ್ಲದೋನು ತಕರಾರು ತಗದನಂತೆ."

"ಬ್ಯಲ್ಲದೋನು ಅಂದ್ರೆ ಅವನ್ಯಾರ್ಲ?" ಎಂದಳು ಜುಮ್ಮಿ.

"ಅವುನು ಚಂದ್ರಕಾಂತ ಬ್ಯಲ್ಲದ ಅಂತ ಕಣೆ. ಈ ಹಳೆಕಾಲ್ದ ಕಾಂಗ್ರೆಸಿನೋರು ಇರತರೆ ನೋಡು ಅಂಥೋನು. ಭಾಳ ಹಿಂದ ಲಿಂದ ಬಿಜೆಪಿ ಕಟ್ಟಿ ಬ್ಯಳಿಸಿದ್ದನಂತೆ. ಬೈಳಿಸಿದೋನ್ನ ಬಳಸಿಗಂಡು ಬ್ಯಾರೆಯೋರು ಆಗಕ್ಕೆ ಬುಡಲ್ಲಾ, ನಾಕು ಸತಿ ಗೆದ್ದಿದ್ದಿನಿ, ನ್ಯನ್ನೆ ಮೊನ್ನೆ ಬಂದ ಪ್ರಕಾಶನ್ನ ಮಾಡದೆ ಆದ್ರೆ ನಾನು ರಾಜಿನಾಮೆ ಕೊಟ್ಟು ಬ್ಯಲ್ಲದ್ಯಾಪಾರ ಸುರುಮಾಡ್ತಿನಿ ಅಂದನಂತೆ."

"ಅವನು ಬ್ಯಲ್ಲ ಮಾರೋನೇನು?"

"ಈ ಬಿಜೆಪಿ ವಳಗೆ ಯ್ಯಂತ್ಯಂತವು ಅವೆ ಗೊತ್ತೆನೆ? ಸೀಮೆಯಣ್ಣೆ ಮಾರೋದಿಂದ ಹಿಡದು, ಹೋಟ್ಯಗೆ ನೀರು ಮಾರೋರು; ದಂದೆ ಮಾಡವ್ಯಲ್ಲಾ ಅವೆ. ಅದ್ಕೆ ಒಂದೇ ವಾರಕ್ಕೆ ಮೂಟೆ ಸಿಮೆಂಟು ರೇಟು ಅರವತ್ತು ರೂಪಾಯಿ ಏರ್ತದೆ. ಕೇಳಕ್ಕೆ ಯಾವನಿಗೂ ಆಯ್ತಾಯಿಲ್ಲ, ಯಾಕಂದ್ರೆ ಯಲ್ಲಾ ಕಳ್ರು ಸರಕಾರದ್ವಳಗೇ ಅವುರೆ. ಇದಕೇನೇಳ್ತಿ?"

"ಅಂಗಾದ್ರೆ ಅಂತ ಕಳ್ಳರ್‍ಯಲ್ಲ ಮಂತ್ರಿಯಾಗಕ್ಕೆ ವಂಟಿದ್ರೆ?" ಎಂದ ಕಾಳಮಾವ.

"ಊ ಕಣವಮಾವ, ಒಬ್ಬನೇ ಒಬ್ಬ ಮಾನವಂತ ಇಲ್ಲ."

"ಮಾನವಂತರ್‍ಯಂಗಲ ಇಂತ ಸರಕಾರದಲ್ಲಿ ಮಂತ್ರಿಯಾಗಬೇಕು. ಅವುರ್‍ಯಲ್ಲ ಇರೊ ಮಾನ ಉಳಿಸಿಗಂಡು ತಲೆಮರಸಿಗಂಡಿರದೇ ಆಯ್ತದೆ."

"ಅಂಗೆ ಆಗ್ಯದೀಗ. ಮಂತ್ರಿಯಾಗಬೇಕು ಅಂತ ಓಡಾಡ್ತಯಿರೋರ ನೋಡಿದ್ರೆ ಅಯ್ಯೋ ಪಾಪ ಅನ್ನುಸ್ತದೆ ಕಣಮಾವ. ಅವುನ್ಯಾವನೊ ರಾಜೂಗೌಡ, ಸ್ವಗಡು ಶಿವಣ್ಣ, ಹ್ವಗರು ಸಣ್ಣಣ್ಣ, ಸೀಟಿ ರವಿ ಅಂಥೋರ್‍ಯಲ್ಲ ಮಂತ್ರಿ ರೆಡಿಯಾ ದೇಟಗೆ, ಮೂಡಿಗೆರೆ ಕುಮಾರಸ್ವಾಮಿ, ನರಸಿಂಹ ಸ್ವಾಮಿ, ಕೃಷ್ಣಯ್ಯ ಶೆಟ್ಟಿ ಅನ್ನೊರ್‍ಯಲ್ಲ ರಚ್ಚೆ ಹಿಡದರಂತೆ. ಅಷ್ಟೆ ಅಲ್ಲ, ನಮ್ಮುನ ಬುಟ್ಟು ಅವುರ ಮಂತ್ರಿ ಮಾಡದೆ ಆದ್ರೆ ನಾವು ರಾಜೇನಾಮೆ ಬರೀತಿವಿ ಅಂದರಂತೆ. ಅದ್ಕೆ ಎಡೂರಪ್ಪ ಹೆದ್ರಿಕಂಡು ಪರಾರಿಯಾದನಂತೆ."

"ಪರಾರಿಯಾದ್ರೆ ತಾನೆ ಎಲ್ಲಿಗೋದನೂ? ಮನೆತಕ್ಕೂ ಬತ್ತದಪ್ಪ ಆಗ"ಎಂದ ಸೀರ.

"ಅಂಗೆ ಆಗ್ಯದೆ ಕಣಮಾವ. ಆ ಕೃಷ್ಣಯ್ಯ ಶೆಟ್ಟಿ ಅನ್ನೊ ಶೆಟ್ಟಿ ಮುಜರಾಯಿ ಮಂತ್ರಿಯಾಗಿದ್ದ. ಅವುನ್ನ ಎಡೂರಪ್ಪ ತಗದಾಗ್ಲಿಂದ, ಪ್ರಸಾದ ಹಿಡಕಂಡು ತಿರುಗ್ತಯಿದ್ದನಂತೆ. ಈಗ್ಲು ಎಡೂರಪ್ಪನ ಮನೆತಾವುಲೆ ನಿಂತವುನಂತೆ. ನನಿಗೇ ಮುಜರಾಯಿ ಮಂತ್ರಿ ಮಾಡಿ, ಇಡೀ ಕರ್ನಾಟಕಕ್ಕೆ ತಿರುಪ್ತಿ ದೇವುಸ್ಥಾನದ ತೀರ್ಥ ಪ್ರಸಾದ ಹಂಚಿಕೊಂಡು ಕಾಲಮಾಡ್ತಿನಿ. ಭೂಮಿ ತಗಂಡು ಮಾರದಕ್ಕಿಂತ ಇದೇ ಚನ್ನಾಗ್ಯದೆ. ಒಂಥರದ ಶೂನ್ಯ ಬಂಡವಾಳದ ಯಾಪಾರ ಇದೂ. ಕೈಮುಗಿತೀನಿ ಮಂತ್ರಿ ಮಾಡಿ ಅಂತ ಅಳತನಂತೆ."

"ಮಂತ್ರಿ ಮಾಡಿ ಅಂತ ಅಳತನೆ ಅಂದ್ರೆ ಅವುನಿನ್ನಂತ ಗತಿಗ್ಯಟ್ಟೋನ್ನ."

"ಗತಿಗೆಟ್ಟಿರದಷ್ಟೇ ಅಲ್ಲ ದ್ವಡಪ್ಪ, ಕೆಟ್ಟು ಕೆರ ಹಿಡದೋರೆಲ್ಲಾ ಮಂತ್ರಿಗಳಾಗಬೇಕು ಅಂತ ಫೈಟ್ ಮಾಡ್ತ ಅವುರೆ. ಸದ್ಯ ಎಡೂರಪ್ಪ ಯಾರ್ನೂ ಮಾಡದೆ ಸುಮ್ಮನಾಗಿ ಬಚಾವಾದ. ಇಲ್ಲ ಅಂದ್ರೆ ಇಷ್ಟೊತ್ತಿಗೆ ಸರಕಾರ ಬಿದ್ದು ಕುಮಾರಸ್ವಾಮಿ ಕಡಿಯೋರು ಪಟಾಕಿ ವಡಿಯಂಗಾಗದು" ಎಂದ ವಾಟಿಸ್ಸೆ.

"ಪಟಾಕಿ ವಡಿಯದು ಅಷ್ಟು ಸುಲಬಲ್ಲ ತಿಳಕೊ. ಸ್ಪೀಕರ್ರೂ, ಜಡಜಗಳು, ಕೇಂದ್ರದೋರು ಯಲ್ಲ ಎಡೂರಪ್ಪನ ತಲೆ ಕಾಯ್ತಾ ಅವುರೆ" ಎಂದ ಉಗ್ರಿ.

"ದೇವಾನುದೇವತೆಗಳ್ಯಲ್ಲ ಸತ್ಯ ಹರಿಶ್ಚಂದ್ರನ ತಲೆ ಕಾದರಲ್ಲ ಅಂಗೆ."

"ಅಂಗೆ ಅನ್ನ ಕಳೊ. ಹರಿಶ್ಚಂದ್ರ ಸತ್ಯ ಹೇಳಿತನೆ ಅಂತ ಅವುರ್‍ಯಲ್ಲ ತಲೆಕಾದ್ರು. ಈಗಿನ ದೇವತೆಗಳು ಸುಳ್ಳೇಳೊ ಎಡೂರಪ್ಪನ್ನ ಉಳಿಸಿಗಂಡು ನಾವು ಒಸಿ ಈಸಗಳನ ಅಂತ ಕಾಯ್ತಾ ಅವುರೆ, ಅಷ್ಟೆ."



"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಅದ್ವಾನಿಗೆ ಈಶ್ವರನ ಡ್ರಸ್ಸಾಕಿ, ಸುಸ್‌ಮಾ ಸ್ವರಾಜ್‌ಗೆ ಪಾರ್ವತಿ ಡ್ರಸ್ಸಾಕಿ ಕುಂಡ್ರಿಸಿ, ಮುಂದೆ ಗಡ್ಕರಿ ಕುಂಡಿಸಿದ್ರೆ ಅದು ಥೇಟ್ ಕೈಲಾಸದಂಗೇ ಕಾಣ್ತದೆ. ಆ ಮಹನೀಯರೇ ಇವತ್ತು ಈ ನಮ್ಮ ಎಡೂರಪ್ಪನ್ನ ಕಾಯ್ತಾಯಿರದು."

"ನಿಜ. ನಂದಿರೋಲಿಗೆ ಗಡ್ಕರಿ ಹೇಳಿಮಾಡಿಸಿದಂಗ ವುನೆ. ಅಲ್ಲಾ, ಬೊಂಬಾಯಿಲಿ ಮುಖ್ಯಮಂತ್ರಿ ತನ್ನ ಕಳ್ಳು ಬಳ್ಳಿಗೆ ಮನೆ ಕೊಟ್ಟವುನ್ನೆ ಅಂತ ಗೊತ್ತಾದೇಟಿಗೆ, ಸೋನಿಯಾಗಾಂಧಿ ಕರದು ಏನಿದ್ಯಲ್ಲ, ಬರಿ ರಾಜಿನಾಮೆ ಅಂದಲಂತೆ. ಇದೇ ಅದ್ವಾನಿ ಟೀಮು ಎಡೂರಪ್ಪ ಎಣಸಕ್ಕಾಗದೆಯಿರೊವಷ್ಟು ತಪ್ಪೊ ಮಾಡಿದ್ರೂ ಹೊಗಳತ ಕುಂತವುರಂತೆ."

"ಕ್ಯಟ್ಟ ಜನಗಳು, ಕ್ಯಟ್ಟ ಜನಗಳ ಹೊಗಳದೆ ಇನ್ಯಾರು ಹೊಗಳತರೊ ಉಗ್ರಿ."

"ಏನಪ್ಪ ಅದು?"

"ಪುಗುಳೇಂದಿಗೆ ರಾಜ್ಯೋತ್ಸವ ಪ್ರಸಸ್ತಿ ಬಂತಂತೆ."

"ಅವುನ್ಯಾರ್ಲ ಪುಗಳೇಂದಿ?"

"ಅವುನು ಯಲ್ಲಾ ಸಂಘ ಸಂಸ್ಥೆಗೂ ಜಗಳ ತಂದಿಕ್ಕೊನು ಕಣಕ್ಕ, ಆಮ್ಯಾಲೆ ಯಲ್ಲಾರ್ನು ಆಡಿಕಳೋನು. ಯಲ್ಲಾರತ್ರನೂ ಸಾಲ ಮಾಡೋನು. ಆ ಸಾಲ ತೀರಸಕ್ಕೆ ಇನ್ಯಾರತ್ರನೊ ಸಾಲ ಮಾಡೋನು. ಇದನ್ಯಲ್ಲ ನೋಡಿದ ಎಡೂರಪ್ಪನ ಸರಕಾರ ರಾಜ್ಯೋತ್ಸವದ ಪ್ರಸಸ್ತಿ ಕೊಟ್ಟುಬುಟ್ಟರೆ."

"ವಳ್ಳೆದಾಯ್ತು ಬುಡು. ಇನ್ನು ಮ್ಯಾಲಾರ ಸುಮ್ಮ ನಿರತನೆ."

"ಸುಮ್ಮನಿರದಲ್ಲಾ, ಕೋತಿಗೆ ಯಂಡ ಕುಡಿಸಿ ಬಂಗಿ ಸೇದಿಸಿ ಕೈಬುಟ್ಟಂಗಾಯ್ತದೆ. ಅಲ್ಲಾ ಈ ಸರಕಾರಕ್ಕೆ ಯಾರು ಪ್ರಸಸ್ತಿಗೆ ಯೋಗ್ಯರು, ಯಾರು ಅಯೋಗ್ಯರು ಅಂತ್ಲೂ ಗೊತ್ತಾಗದಿಲ್ಲವಲ್ಲಾ."

"ಅದನ್ಯಲ್ಲ ಅವುರು ನೊಡ್ತ ಕುಂತಗಳಕ್ಕಾದತೇನೊ? ಇಲ್ಲೆಲ್ಲಾರ ಈಶ್ವರಪ್ಪ ಬಂದಾಗ 'ಕುರುಬ ಕುಲ ತಿಲಕನಿಗೇ ಜೈ', 'ಸಂಗೊಳ್ಳಿ ರಾಯಣ್ಣನಿಗೆ ಜೈ', 'ಆಧುನಿಕ ಕನಕದಾಸನಿಗೆ ಜೈ' ಅಂತ ಕೂಗಿದ್ರೆ ಈಶ್ವರಪ್ಪ ನಿನಿಗೂ ಒಂದು ಕೊಡಸೋನು. ಅದೇ ತರ ಪುಗಳೇಂದಿನೂ ಯಾರ್ನೊ ಹಿಡು ಕೊಂಡು ವಡಕಂಡವುನೆ ಬುಡು" ಎಂದ ಉಗ್ರಿ.


"ಅವುನಿಗೆ ಬಂದಿಲವಲ್ಲಾ ಅದ್ಕೆ ವಟ್ಟೆ ಕಿಚ್ಚು" ಎಂದು ಜುಮ್ಮಿ ನಕ್ಕಳು.

"ಯಕ್ಕವ್, ನಾನ್ಯಾವತ್ಲೂ ನನಿಗಿಂತ ಯೋಗ್ಯರಿಗೆ ಬಂದಾಗ ಖುಷಿಪಟ್ಟಿದ್ದಿನಿ. ನನಿಗಿಂತ ಅಯೋಗ್ಯರಿಗೆ ಬಂದಾಗ ಬೈದಿದ್ದಿನಿ. ಆದ್ರೆ ಈ ಪ್ರಶಸ್ತಿಗಳು ನನಿಗ್ಯಾಕ್ ಬರಲಿಲ್ಲವಲ್ಲಾ ಅಂತ ಯಾವತ್ತೂ ನಾನು ಫೀಲ್ ಮಾಡಿಕಂಡಿಲ್ಲ. ಆದ್ರೆ ಎಡೂರಪ್ಪ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟರೊ ಪಟ್ಟಿ ನೋಡಿದಾಗ, ಅಲ್ಲಿ ನಾನೂ ಇರಬೇಕಾಗಿತ್ತು ಅಂತ ಒಂದು ಸಣ್ಣ ಮನಸು ವರುಕ ಮಾಡ್ತು ಅಷ್ಟೆಯಾ."

"ಅದ್ಯಾಕೆ?"


"ಈ ಪ್ರಶಸ್ತಿ ಜೊತೆಗೆ ಒಂದು ಲಕ್ಷ ರೂಪಾಯಿ ಕೊಡ್ತರೆ. ಎರಡು ಗ್ರಾಂ ಚಿನ್ನ ಸಿಗತದೆ. ಬೆಂಗಳೂರಲ್ಲೊಂದು ಸೈಟು ಸಿಗತದೆ ಗೊತ್ತಾ?"

"ಓಹೊಹೊ, ಅದ್ಕೆ ಕಣೊ ಜನ ಅರ್ಜಿ ಕೊಟ್ಟು ಹಲ್ಲುಗಿಂಜದೂ!" ●



ಬೆಳೆಯುವ ಶೈಲಿ.....

ನಾವೆಲ್ಲ 'ಜೀವಂತ ಬರವಣಿಗೆ', 'ಬರಡು ಕತೆ', 'ಅಮರ ಸಾಹಿತ್ಯ', ಇತ್ಯಾದಿಯಾಗಿ ಮಾತಾಡುತ್ತೇವೆಯೇ ಹೊರತು ನಮ್ಮ ಮಾತಿನ ಅರ್ಥ ಏನೆಂದು ನೋಡಿಕೊಳ್ಳುವುದಿಲ್ಲ. ಯಾವುದು ಅಮರ ಸಾಹಿತ್ಯ? ಈ ಬಗೆಯ ಪ್ರಶ್ನೆ ಯಾವ ಉತ್ತರವನ್ನೂ ಹೊಮ್ಮಿಸುವುದಿಲ್ಲ. ಗೊಡ್ಡು ಪಂಡಿತರು ಇಂಥ ಪ್ರಶ್ನೆಯನ್ನು ಎತ್ತಿಕೊಂಡೊಡನೆ ಲೈಬ್ರರಿಗೆ ಇನ್ನೊಂದಿಷ್ಟು ಪುಸ್ತಕಗಳು ಸೇರುತ್ತವೆಯೇ ಹೊರತು ಇನ್ನೇನೂ ಆಗುವುದಿಲ್ಲ. ಆದ್ದರಿಂದ ಇದನ್ನು ನಾನು ತೀರಾ ಸರಳವಾಗಿ ಉತ್ತರಿಸಲು ಬಯಸುತ್ತೇನೆ. ಸಾಹಿತ್ಯ ಗಿಡಮರದಂತೆ, ಗರುಕೆಯಂತೆ, ಮಗುವಿನಂತೆ, ಕರುವಿನಂತೆ ಬೆಳೆಯದಿದ್ದರೆ ಅದು ಜೀವಂತ ಸಾಹಿತ್ಯವಲ್ಲ. ಚೆಕಾವ್‌ನ ಒಂದು ಕತೆ, ಆರ್ವೆಲ್‌ನ ಒಂದು ಪ್ರಬಂಧ, ವರ್ಡ್ಸ್‌ವರ್ತ್‌ನ ಒಂದು ಪದ್ಯ ಓದಿದರೆ ಇವತ್ತಿಗೂ ಜೀವಂತವಾದದ್ದನ್ನು ಸ್ಪರ್ಶಿಸಿದ ಥ್ರಿಲ್ ಆಗುತ್ತದೆ. ಇದು ಚೆಕಾವ್‌ನ ವಿನಯ, ಸರಳತೆ ...ತ ಮುಗ್ಧತೆಯಿಂದ ಬರುತ್ತದೆ; ಅವನು ಬರೆಯಲು ತೆಗೆದುಕೊಳ್ಳುವ ವಸ್ತು, ಅದನ್ನೆಲ್ಲ ...ವ ತಾನು ಬಲ್ಲ ಜೀವಂತ ನುಡಿಯಲ್ಲಿ ರೂಪಿಸುವ ರೀತಿ, ಅವನ ಮೂಲಭೂತ ...ಚಪಲ ಮತ್ತು ಮುಗ್ಧತೆ ಆತ ಬರೆಯುವ ಕತೆ ಅಥವಾ ನಾಟಕಕ್ಕೆ ಜೀವ ತರುತ್ತವೆ. ... ಅಲ್ಲ, ಚೆಕಾವ್‌ನ ಕತೆಗಳು ಸೃಷ್ಟಿಸುವ ಲೋಕ ಮತ್ತು ಆ ಲೋಕವನ್ನು ತುಂಬುವ ...ಗಳು ಕೂಡ ಮನಮುಟ್ಟುತ್ತವೆ. ಸರಿಯಾದ ಅನುವಾದದಲ್ಲಿ ಇವತ್ತು ಓದಿದರೆ ನಿನ್ನೆ ...ದಂತೆ ಕತೆ, ನಾಟಕಗಳೆಲ್ಲ ಕಾಣುವುದಕ್ಕೆ ಇದೇ ಕಾರಣ. ಹೀಗೆಂದು ನಾವು ಸಾಹಿತ್ಯ ...ವ ಲೋಕ ಮತ್ತು ಅದರಲ್ಲಿ ಕಾಣುವ ಪದ್ಯದ ಸಂಭಾಷಣೆ ಇತ್ಯಾದಿಯ ಬಗ್ಗೆ ...ಚಿಸುತ್ತಾ ಓದುಗರಿಗೆ ದೊಡ್ಡ ಸಿದ್ಧಾಂತಗಳನ್ನು ಕೊಡಲು ಯತ್ನಿಸಬಾರದು. ಯಾಕೆಂದರೆ ...ಲ ಸಾಹಿತ್ಯದ ಜೀವಂತಿಕೆ ಇವನ್ನೆಲ್ಲ ಮೀರಿದ್ದು. ಆರ್ವೆಲ್ ಬರೆದ ಕಾದಂಬರಿ ...84', 'Animal Fam' ಮತ್ತ ಆತನ ಲೇಖನಗಳು ಮತ್ತು ಪ್ರಬಂಧಗಳನ್ನು




ನೋಡಿದರೆ ಇದು ತಿಳಿಯುತ್ತದೆ. ಆರ್ವೆಲ್‌ನ ಕಾದಂಬರಿಗಳು ಬಹುಪಾಲು ತೀರಿಕೊಂಡಿವೆ; '1984' ಕಾದಂಬರಿ ಯಲ್ಲಿ ಅವನು ನಿರೀಕ್ಷಿಸಿದ್ದೆಲ್ಲ ಆಗಲಿಲ್ಲ ಎಂಬುದು ಇದಕ್ಕೆ ಕಾರಣವಲ್ಲ; 'ಗಾರ್ಕಿ'ಯ 'ತಾಯಿ' ಕಾದಂಬರಿ ಕಮ್ಯುನಿಸಮ್ಮನ್ನು ಆಧಾರವಾಗಿಟ್ಟುಕೊಂಡಿದ್ದರಿಂದ ಅದು ತೀರಿಕೊಂಡಿತು ಎಂಬುದೂ ಕಾರಣವಲ್ಲ. ಆರ್ವೆಲ್‌ನ ಲೇಖನಗಳು ಅಷ್ಟೊಂದು ಜೀವಂತವಾಗಿದ್ದು ಓದುಗರ ಮನಸ್ಸಿನಲ್ಲಿ ಬೆಳೆಯುತ್ತಲೇ ಹೋಗುತ್ತಿವೆ; ಗಾರ್ಕಿಯ ಕತೆಗಳೂ ಅಷ್ಟೆ. ವರ್ಡ್ಸ್‌ವರ್ತ್ ತನ್ನ ಕವನಗಳನ್ನು ಬರೆದು ಇನ್ನೂರು ವರ್ಷವಾಯಿತು-ಆದರೂ ಅವು ಜೀವದಿಂದ ಪುಲಕಗೊಳಿಸುತ್ತವೆ.

ಹೀಗೆ ಹಲವಾರು ಉದಾಹರಣೆ ತೆಗೆದುಕೊಂಡರೆ ಬರವಣಿಗೆಯ ರೀತಿ, ಜೀವನವನ್ನು ಗ್ರಹಿಸುವ ರೀತಿ, ಜೀವ ತುಂಬಿ ಹೊರಟಿದ್ದು ಬೆಳೆಯುವ ಬಗೆ-ಹೀಗೆಲ್ಲ ಹೇಳಬೇಕಾಗುತ್ತದೆ. ಇವಕ್ಕೆಲ್ಲ ಸಂಬಂಧಿಸದೆ ಇದ್ದರೂ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ನಮ್ಮಲ್ಲಿ ಕೆಲವರು ಇಂಗ್ಲಿಷ್‌ನಲ್ಲಿ ಕತೆ, ಕಾದಂಬರಿ, ಜೀವನ ಚರಿತ್ರೆ ಬರೆಯುತ್ತಾರೆ. ನಿನ್ನೆ ಬರೆದ ಇಂಗ್ಲಿಷ್ ಕಾದಂಬರಿ ಇವತ್ತು ಚೆನ್ನಾಗಿ ಕಾಣಬಹುದು; ಆದರೆ ಭಾರತೀಯನೊಬ್ಬನು ನೂರು ವರ್ಷದ ಹಿಂದೆ ಇಂಗ್ಲಿಷ್‌ನಲ್ಲಿ ಬರೆದ ಕಾದಂಬರಿ ಇವತ್ತು ನಿರ್ಜೀವವಾಗಿ, ಹಾಸ್ಯಾಸ್ಪದವಾಗಿ ಕಾಣುತ್ತದೆ. ನಾನು ಮೊನ್ನೆ ಹತ್ತೊಂಭತ್ತನೆ ಶತಮಾನದ ಭಾರತೀಯರ ಇಂಗ್ಲಿಷ್ ಕೃತಿ ಓದಿ ಇದನ್ನು ಹೇಳುತ್ತಿದ್ದೇನೆ. ಭಾರತೀಯ ಬಳಸುವ ಇಂಗ್ಲಿಷ್ ಪುಸ್ತಕಗಳಿಂದ ಕಲಿತದ್ದು, ಕಿವಿಯಿಂದ ಕೇಳಿ ಆತ್ಮಕ್ಕೆ ಇಳಿದದ್ದಲ್ಲ. ಇದರಿಂದಾಗಿ ಕಾಲ ಕಳೆದಂತೆ ಇದು ಜಾಳುಜಾಳಾಗುತ್ತದೆ. ಸತ್ತ ಮಾತುಗಳ ಹಂದರವಾಗುತ್ತದೆ. ಮೊನ್ನೆ 'ಎಸ್ ಫಾರ್ ನೋ ಬಡಿ' ಎಂಬ ಪ್ರಾಧ್ಯಾಪಕರೊಬ್ಬರ ಪುಸ್ತಕ ಅಲ್ಲಲ್ಲಿ ಓದಿದೆ. ನಿಜವಾದ **fake** ಬರಹ ಅಂದರೆ ಅದು. ಓದುತ್ತಾ ಹೋದಂತೆ ದೊಡ್ಡದಾಗಿ ನಕ್ಕುಬಿಟ್ಟೆ. ಇಟ್ಟ ಪುಸ್ತಕ ಎತ್ತಿಕೊಳ್ಳಲಾಗಲಿಲ್ಲ.

ಭಾರತೀಯ ಇಂಗ್ಲಿಷ್‌ನಲ್ಲಿ ಬರೆಯಲು, ಸೆಮಿನಾರ್‌ಗಳಲ್ಲಿ ಮಾತಾಡಲು, ಬುದ್ಧಿಜೀವಿಗಳೊಂದಿಗೆ ಮೆರೆಯಲು ಖರ್ಚು ಮಾಡುವ ಮಾನಸಿಕ ಶಕ್ತಿ ಅಪಾರ. ಅದೆಲ್ಲ ಅನವಶ್ಯಯ. ಇವರು ಗ್ರಹಿಸುವಲ್ಲಿಂದ, ಸಂವೇದಿಸುವಲ್ಲಿಂದ ಜೀವಂತ ಚಿಂತನೆ, ಬರವಣಿಗೆ ಬರುವುದಿಲ್ಲ...

-ಜುಲೈ 20,1994




ಮರೆಯುವ ಮುನ್ನ

▶ ಪಿ.ಲಂಕೇಶ್

ಮಚ್ಚೆ ಮಹದೇವ

ಭಾರತೀಯ ಜನತಾ ಪಕ್ಷದ ನೇತಾರರು 'ಕೈ' ಕಂಡರೆ ಕೆಂಡ ಕಾರ್ತಾರೆ. ಹಸ್ತ ಕಾಂಗ್ರೆಸ್ ಚಿಹ್ನೆ ಆಗಿರುವುದರಿಂದ ಈ ಆಕ್ರೋಶ ಇರಬಹುದು. ಸನ್ಮಾನ್ಯ ಈಶ್ವರಪ್ಪನವರಿಗೆ ಹಿಂದೂತ್ವ ರಕ್ಷಣೆ ಮಾಡುವ ಉಮೇದು. ಗೋವಿನ ರಕ್ಷಣೆ ಅಂದರೆ ಹಿಂದೂತ್ವದ ರಕ್ಷಣೆಯಾಗಿರುವುದರಿಂದ ಅದರ ವಧೆಯನ್ನು ಅವರು ಸಹಿಸಲಾರರು. ಮಾನ್ಯರು 'ಗೋವಧೆ ಮಾಡುವವರ ಕೈ ಕತ್ತರಿಸಿ' ಎಂದು ಚೀರುತ್ತಲೇ ಇರುತ್ತಾರೆ. ಯಡ್ಯೂರಪ್ಪನವರಿಗೆ ಯಾವಾಗ

ಅಣಕ



▶▶ ಎಚ್.ಎಲ್. ಕೇಶವಮೂರ್ತಿ

ಯಾವುದರ ಮೇಲೆ ಪ್ರೀತ್ಯಾಭಿಮಾನಿಗಳು ಭೋರ್ಗರೆಯುತ್ತೆ ಎಂಬುದನ್ನು ಹೇಳುವುದು ಸುಲಭವಲ್ಲ. ಅದು ಸಭಿಕರನ್ನು ಅವಲಂಬಿಸಿರುತ್ತದೆ. ಭಾಗ್ಯಲಕ್ಷ್ಮಿ ಯೋಜನೆ ಅಡಿ ಸೀರೆಗಳನ್ನು ತಾಯಂದಿರಿಗೆ ಹಂಚುವಾಗ ಭ್ರಷ್ಟ ಅಧಿಕಾರಿಗಳ ಮೇಲೆ ಕತ್ತಿ ಝುಳಪಿಸಿದರು. ಈ ಸೀರೆಗಳನ್ನು ಕೊಳ್ಳುವಲ್ಲಿಯೂ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಲಾಗುತ್ತಿದೆ. ಅದು ಇಲ್ಲಿ ಅಪ್ರಸ್ತುತ. ಕತ್ತಿ ಝುಳಪು ರಾಜಕಾರಣಿಗಳ ಮೇಲಲ್ಲ, ಅಧಿಕಾರಿಗಳ ಮೇಲೆ. ಬಡವರಿಂದಲೂ ಲಂಚ ಕೀಳುವ ಭ್ರಷ್ಟ ಅಧಿಕಾರಿಗಳನ್ನೇನು ಮಾಡಬೇಕು? ಎಂಬುದು ಇಲ್ಲಿನ ಪ್ರಶ್ನೆ. 'ಅವರ ಕೈ ಕತ್ತರಿಸಿ' ಎಂದು ಯಡ್ಯೂರಪ್ಪನವರು ತಾಯಂದಿರಿಗೆ ಕರೆ ನೀಡಿದರು!

ಅಂದರೆ ಏನಾಯಿತು....

ಹಿಂದೂತ್ವ ರಕ್ಷಣೆಗೆ-ಕೈ ಕತ್ತರಿಸಿ!

ಭ್ರಷ್ಟತೆ ನಿರ್ಮೂಲನೆಗೆ-ಕೈ ಕತ್ತರಿಸಿ!

ಅಂದರೆ ಮಚ್ಚೆ ಮಹಾದೇವ!

* * * * * *

ಶಾಲೆಯಲ್ಲಿ ಓದುತ್ತಿದ್ದ ದಿನಗಳು. ದೇವರು ಎಲ್ಲೆಲ್ಲೂ ಇದ್ದಾನೆ ಎಂದು ತಿಳಿ ಹೇಳುವ ಪಾಠ ಇತ್ತು, ಹುಡುಗರು ಅದು ಸತ್ಯವೆಂದೇ ನಂಬಿದ್ದರು. ಪಠ್ಯದಲ್ಲಿ ಇದೆ ಅಂದ ಮೇಲೆ ಮುಗಿಯಿತು. ಅದೇ ಪ್ರಾಮಾಣ್ಯ. ಆದರೆ ಗುರುಮಠಗಳು, ಧರ್ಮದ ಗುತ್ತಿಗೆ ಹಿಡಿದಿರುವ ಧರ್ಮಾಧಿಕಾರಿಗಳು, ಭಕ್ತರು ಇಂತಹವರೆಲ್ಲರೂ ಸೇರಿ ಅವನಿರುವ ಸ್ಥಳವನ್ನು ಪತ್ತೆಹಚ್ಚಿದರು. ಹಿಂದೂ ದೇವರು ದೇವಸ್ಥಾನಗಳಲ್ಲೂ, ಮುಸಲ್ಮಾನರ ದೇವರು ಮಸೀದಿಗಳಲ್ಲೂ, ಕಿರಿಸ್ತಾನರ ದೇವರು ಚರ್ಚುಗಳಲ್ಲೂ ಇರುತ್ತಾನೆ ಎಂಬುದನ್ನು ಸಂಶೋಧಿಸಿದರು. ಅವರ ವಾಸಸ್ಥಳ ಅಂದಮೇಲೆ ಅದು ವೈಭವೋಪೇತ ಆಗಿರಬೇಕು ಎಂಬುದು ಅವರ ಅಭಿಲಾಷೆಯಾಗಿತ್ತು. ಯೋಗ್ಯಸ್ಥಳವನ್ನು ಪತ್ತೆಹಚ್ಚಿ ತಮ್ಮ ಮನೋಭಿಲಾಷೆ ಪೂರೈಸಿಕೊಂಡರು ಮಾತ್ರ ಅಲ್ಲ ಪೂರೈಸಿಕೊಳ್ಳಲೂ ಕಟಿಬದ್ಧರಾಗಿದ್ದರು. ಅವರ ಈ ಸುತ್ಯಕಾರ್ಯ ಜನ ಮೆಚ್ಚಿ 'ಅಹುದಹುದು' ಎನ್ನುವಂತಹದಾಗಿತ್ತು, ಆದರೆ ಇದು ಧರ್ಮಾಂಧರಾದ ಸುಪ್ರೀಂಕೋರ್ಟ್ ನ್ಯಾಯಾಧೀಶರುಗಳ ಮೆಚ್ಚುಗೆ ಪಡೆಯುವಲ್ಲಿ ವಿಫಲವಾಯಿತು! ಇಂತಹ ಕಟ್ಟಡಗಳಲ್ಲಿ ಬಹುಪಾಲು ಅಕ್ರಮವೆಂದು ಅವರು ಪರಿಗಣಿಸಿದರು! ಅಕ್ರಮವಾಗಿ ನಿರ್ಮಿಸಿರುವ ದೇವಸ್ಥಾನ, ಮಸೀದಿ, ಚರ್ಚು ಮೊದಲಾದ ಪೂಜಾಸ್ಥಳ ಗಳನ್ನು ತೆರವುಗೊಳಿಸಬೇಕೆಂದು ಆಜ್ಞೆ ಮಾಡಿದರು! ಅಕಟಕಟಾ ಈ ದೇವಸಂಕಟಕ್ಕೆ ಏನೆಂಬಲಿ!

ಎಲ್ಲ ರಾಜ್ಯಗಳೂ ಸುಪ್ರೀಂಕೋರ್ಟಿನ ಈ ಆಜ್ಞೆಯನ್ನು ಜಾರಿಗೆ ತರುವುದಕ್ಕೆ ಕಟಿಬದ್ಧರಾಗಿ ನಿಂತಿರುವುದು ಆಘಾತಕಾರಿ ಸಂಗತಿ ಎಂದು ಹೇಳದೆ ವಿಧಿ ಇಲ್ಲ, ಬೇರೆ ರಾಜ್ಯಗಳು ಹಾಗಿರಲಿ. ಭಾಜಪದಂತಹ ಭಾಜಪವೇ ಅಧಿಕಾರದಲ್ಲಿರುವ ರಾಜ್ಯಗಳಲ್ಲೂ ಇದನ್ನು ಜಾರಿಗೆ ತರಬೇಕು ಎಂದು ಹೊರಟಿರುವುದು ಆಶ್ಚರ್ಯಕರವಾಗಿದೆ. ಮಸೀದಿ, ಚರ್ಚುಗಳನ್ನು ಬೇಕಿದ್ದರೆ ತೆರವುಗೊಳಿಸಲಿ. ಬೆಂಬಲಿಸೋಣವಂತೆ. ಆದರೆ ದೇವಾಲಯಗಳನ್ನು ತೆರವುಗೊಳಿಸಲಿ ಎಂದರೇನು ಅರ್ಥ?

ಬಾಗಲುಕೋಟೆ ಅಂದರೆ ಭಾಜಪದ ಭದ್ರಕೋಟೆ. ಅಂತಹ ಪ್ರದೇಶದಲ್ಲಿ ದೇವಾಲಯ ತೆರವುಗೊಳಿಸುವಂತ ದೈವದ್ರೋಹಿ ಕೆಲಸಕ್ಕೆ ಜಿಲ್ಲಾಧಿಕಾರಿ ನಿಂತರೆ ಹಿಂದೂಗಳ ಭಾವನೆ ಕೆರಳುವುದಿಲ್ಲವೆ? ಪ್ರತಿಭಟಿಸಿದರು. ಅದನ್ನು ಲೆಕ್ಕಿಸದ ಆ ದೈವದ್ರೋಹಿ ದೇವಸ್ಥಾನಗಳನ್ನು ಕೆಡವಿದ್ದಾನೆಂದರೆ ಏನು ಅರ್ಥ?

ಸಿಡಿದೆದ್ದಿತು ಹಿಂದೂ ಜಾಗರಣ ವೇದಿಕೆ.

ಪ್ರಶ್ನಿಸಿತು: ದೇವಸ್ಥಾನ ನಿರ್ಮಾಣ ಅಕ್ರಮವೂ ಸಕ್ರಮವೊ ಎಂದು ನಿರ್ಧರಿಸುವವರು ಯಾರು?

ಅದೇ ಉತ್ತರಿಸಿತು! ಸರ್ಕಾರ ಅಲ್ಲ, ಮಹಾಜನತೆ! ಅವರು ಅಕ್ರಮ ಎಂದರೆ ಅಕ್ರಮ, ಸಕ್ರಮ ಅಂದರೆ ಸಕ್ರಮ!

ಮಹಾ ಜನತೆ ಸಕ್ರಮ ಎಂದಿದೆ. ಆದ್ದರಿಂದ ಇದು ಸಕ್ರಮ!

ಮುಂದಿನ ಕ್ರಮ ಏನು?

ವೇದಿಕೆಯ ಅಧ್ಯಕ್ಷರಾದ ಜಗದೀಶ ಕಾರಂತರು ಮಹಾಜನತೆಗೆ ಕರೆ ನೀಡಿದರು: 'ದೇವಸ್ಥಾನ ತೆರವುಗೊಳಿಸಲು ಬಂದವರ ಕೈ ಕತ್ತರಿಸಿ!'

ಇಲ್ಲಿಯೂ ಮಚ್ಚೆ ಮಹದೇವ ಆದ!

ಕೈ ಕತ್ತರಿಸಿದವರಿಗೇನು ಲಾಭ? ದೇವಸ್ಥಾನ ಉಳಿಸಿದ್ದೇ ಲಾಭವೇ? ಇಲ್ಲ ಇಲ್ಲ ಹಾಗೆ ಭಾವಿಸದಿರಿ. ಸನ್ಮಾನ್ಯ ಕಾರಂತರು ಕೈಕಡಿದವರಿಗೆ ಒಂದು ಲಕ್ಷ ರೂಪಾಯಿ ನೀಡುತ್ತಾರಂತೆ!

ಆಯಿತು. ಕೈ ಕತ್ತರಿಸಿದೆವು. ಕಾನೂನು ಸುಮ್ಮನಿರುತ್ತದೆಯೆ?

ಅದಕ್ಕೂ ಅಂಜಬೇಕಿಲ್ಲ, ಕಾನೂನಿನ ಭಯ ಬಿಡಿ. ಕೈ ಕಡಿದವರ ಪರವಾಗಿ ಮಾನ್ಯರೆ ಹೋರಾಡಿ, ಬಿಡುಗಡೆ ಮಾಡಿಸುವರಂತೆ! ಬಿಡುಗಡೆಯ ನಂತರ ವೇದಿಕೆಯಿಂದ ಸನ್ಮಾನಗಳ ಸುರಿಮಳೆ ಖಚಿತ!



ಇದೊಂದು ರೀತೀಲಿ ಸುಪಾರಿ ಕೊಲೆ ಇದ್ದಂಗೆ. 'ಸುಪಾರಿ ಕೈ' ಎಂದು ಭಾವಿಸಿ!

ಹೌದು ಈ 'ಕೈ ಕತ್ತರಿಸುವ' ಮಹಾಯಜ್ಞನನ್ನು ಸನ್ಮಾನ್ಯ ಜಗದೀಶ ಕಾರಂತರೇ ನಿರ್ವಹಿಸಬಹುದಲ್ಲಾ ಅಂದರೆ... ಇದು ಅತಿಯಾಯಿತು. ಯಡ್ಯೂರಪ್ಪ, ಈಶ್ವರಪ್ಪ ಅವರೂ ಹೇಳುತ್ತಾರೆ 'ಕೈ ಕತ್ತರಿಸಿ' ಅಂತ 'ಅದೆಂಗೆ ಕತ್ತರಿಸಿತೋರ್ರಿ' ಅಂದ್ರೆ.....!

ಬಾಗಲಕೋಟೆ ಶಾಸಕರಿಗೆ 'ದೇವಸ್ಥಾನ ಉರುಳಿ ಯಜ್ಞ ಬಲೀ ಘಾಸಿ ಮಾಡಿದೆಯಂತೆ. ಅವರೇನಿದ್ದ 'ಮಸೀದಿ ಉರುಳಿಸುವ', 'ಚರ್ಚು ಕೆಡ ಸಂಸ್ಕೃತಿಯಲ್ಲಿ ಬೆಳೆದವರಿರಬಹುದು. ಆದರೆ ದೇವ ತೆರವುಗೊಳಿಸಿರುವುದನ್ನು ದೈವ ವಿರೋಧಿ ಕ್ರಿ ಎಂದೇ ಪರಿಗಣಿಸಿದ್ದಾರೆ. ಬೇರೆ ವಿಷಯಗಳಲ್ಲಿ ಜ ಭಾವನೆಗಳಿಗೆ ಮನ್ನಣೆ ನೀಡದಿರಬಹುದು. ಇದ ಮಾತ್ರ ಸ್ಪಂದಿಸಿದ್ದಾರೆ. ದೀಪಾವಳಿಯ ಶುಭ ದಿನದಂ ತೆರವುಗೊಳಿಸಿರುವ ಎಲ್ಲ ದೇವಾಲಯಗಳ ಪುನ ನಿರ್ಮಾಣಕ್ಕೆ ಗುದ್ದಲಿಪೂಜೆ ಮಾಡುವರಂತೆ!

ಸುಪ್ರೀಂಕೋರ್ಟಿನ ಆಜ್ಞೆ?

ನ್ಯಾಯಾಲಯದ ಆಜ್ಞೆ ಎಂದು ಜ ಭಾವನೆಗಳನ್ನು ಹತ್ತಿಕ್ಕುವುದು ಅಸಾಧ್ಯ!

ಇದೆಲ್ಲ ಸರೀನೆ. ಧರ್ಮದೀಕ್ಷೆ ಪಡೆದ ಹಿಂ ಜಾಗೃತ ವೇದಿಕೆಯ ಸನ್ಮಾನ್ಯ ಅಧ್ಯಕ್ಷರಾದ ಜಗದಿ ಕಾರಂತ ಅವರು ಬೀದೀಲಿ ಮಲಗಿರೋ ನಾಯಿ ಕಲ್ಲು ತೆಗೆದುಕೊಂಡು ಹೊಡೆದರೆ ಆದೆ ಮಾಡುತ್ತೆ ಅಟ್ಟಾಡಿಸಿಕೊಂಡು ಕಚ್ಚುತ್ತೆ ಅಂದಿದ ಈ ಹೋಲಿಕೆ ಸಮಂಜಸವಾಗಲಿಲ್ಲವೇನೋ ಕಲ್ಲಲಿ ಹೊಡೆಸಿಕೊಂಡ ನಾಯಿ ಕಯ್ಯಂಯೆ ಅಂತ ಕಚ್ಚಕ್ಕೆ ಬರ್ತದೆ ಅಂದ್ರೆ ಹಿಂದೂ ಜಾಗ ವೇದಿಕೆಯವರನ್ನ ನಾಯಿಗಳು ಅಂದ ಹಾಗಾಯಿ ಅಂತ.....

ಹೆಂಡತಿಯೂ ಸ್ವಾಮಿಯೂ

ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾಗಿವೆ. ಹಲವು ರೀತಿಯ ಪ್ರತಿಕ್ರಿಯೆಯೂ ಬಂದಿ ಹಲವರ ಕುರಿತು ಕೆಲವರ ಪ್ರಶ್ನೆ:

'ಇವರ ಸಾಧನೆ ಏನು?'

'ಮಸ್ಕಾ ಹೊಡೆದದ್ದೇನು ಕಡಿಮೆ ಸಾಧನೆಯ ಎಂಬುದು ನಮ್ಮ ಉತ್ತರ.

ಮಸ್ಕಾ ಲಗಾಯಿಸಿ ಪ್ರಕ ಹೊಡ್ಕೊಂಡವರಿಗಂತೂ ಅತಿ ಸಂಭ್ರಮದ ಇದಾಗಿದೆ. ಇಂತಹ ಸಾಧಕರೊಬ್ಬರನ್ನು ಯಾರ ಪ್ರಶ್ನಿಸಿದರಂತೆ-

'ಪ್ರಶಸ್ತಿ ದೊರಕಿದ್ದಕ್ಕೆ ಸಂತೋಷ ಆಗಿದೆಯ

'ಬಹಳ ಸಂತೋಷ ಆಗಿದೆ... ಮಾತು ಹೊರಡುತ್ತಿಲ್ಲ'

'ಈ ಪ್ರಶಸ್ತಿ ದೊರಕಲು ಏನು ಕಾರಣ?'

'ನನ್ನ ಹೆಂಡತಿ ಹಾಗೂ ಸ್ವಾಮಿಗಳು' ಅಂದರ

ಛೇ, ಹಾಗನ್ನಬಾರದಿತ್ತು,

ವೃಥಾ ಧರ್ಮಗುರುಗಳ ಬ್ರಹ್ಮಚರ್ಯ ಧರ್ಮಪತ್ನಿಯ ಶೀಲ... ಅಲ್ಲವಾ....

ಪಾಂಚ್-ಸಾಲ್‌ಕಾ-ಲಾಚಾರ್ ರಾಜಕಾರಣಿಗಳು

ಈ ವಾರದ ಸಂಚಿಕೆಯಲ್ಲಿ ತಾವು ಕೇಳಿದ ಸೂಕ್ತ ಪ್ರಶ್ನೆ 'ಘಟಸರ್ಪ ಯಡ್ಡಿಯಿಂದ (ಮತ್ತು 115 ಕೊಳಕು ಮಂಡಲ ಹಾವುಗಳಿಂದ) ಮುಕ್ತಿ ಎಂದು?' ಎಂಬುದು ಸಮಸ್ತ ಕನ್ನಡ ಜನತೆಯ ಒಡಲಾಳದ ಪ್ರಶ್ನೆಯೂ ಹೌದು.

"ಜನರೇ ಪಾಠ ಕಲಿಸುತ್ತಾರೆ. ಜನರೇ ಉತ್ತರ ಕೊಡುತ್ತಾರೆ. ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಜನರ ಆದೇಶಕ್ಕೆ ದ್ರೋಹ, ಜನರ ಭಾವನೆಗಳಿಗೆ ಘಾಸಿ, ಜನತೆಯೇ ಬುದ್ಧಿ ಕಲಿಸುತ್ತದೆ"-ಹೀಗೆ ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳ ಸ್ವಾರ್ಥಪರ ರಾಜಕಾರಣಿಗಳು ಮಾತುಮಾತಿಗೆ ತಮ್ಮ ಹೇಳಿಕೆಗಳ ನಡುವೆ ಜನತೆಯನ್ನು ಎಳೆದು ತರುತ್ತಾರೆ. ತಾವೇನೋ ಮಹಾಜನರ ಅಭಿಪ್ರಾಯಗಳಿಗೆ ಭಾರೀ ಗೌರವ ಕೊಡುವಂತೆ ಪೋಜ್ ಕೊಡುತ್ತಾರೆ. ನಿಜದಲ್ಲಿ ಜನರು ಒಮ್ಮೆ ಓಟ್ ಹಾಕಿದರೆ ಮುಗಿಯಿತು, ನಂತರ 5 ವರ್ಷ ನಿಸ್ಸಹಾಯಕರಾಗಿ ರಾಜಕಾರಣಿಗಳ ಕಪಟ ನಾಟಕ ಕಣ್ಣಾರೆ ನೋಡುತ್ತಾ ಮೈ ಪರಚುತ್ತಾ ಕುಳಿತಿರಬೇಕಾಗುತ್ತದೆಯೇ ವಿನಃ ರಾಜಕಾರಣಿಗಳಿಗೆ ಪಾಠ ಕಲಿಸುವ, ಬುದ್ಧಿ ಕಲಿಸುವ, ಉತ್ತರ ಕೊಡುವ ಸ್ಥಾನದಲ್ಲಿ ಜನತೆ ಇರುವುದೇ ಇಲ್ಲ, ಕೇವಲ ಮೂಕಪ್ರೇಕ್ಷಕರಾಗಿ ತಮ್ಮ ಹೆಸರಲ್ಲಿ ಭ್ರಷ್ಟ-ದುಷ್ಟ ರಾಜಕಾರಣಿಗಳು ನಡೆಸುವ ಹೊಲಸು ಸರ್ಕಸ್‌ಅನ್ನು ನೋಡುತ್ತಾ ಇರಬೇಕಾದ ಕರ್ಮ, ಅನುಭವಿಸದೇ ಗತ್ಯಂತರವಿಲ್ಲ ಸಾಮಾನ್ಯ ಜನತೆಗೆ. ಮತದಾರ ಏಕ್-ದಿನ್‌ಕಾ-ರಾಜಾ, ಪಾಂಚ್-ಸಾಲ್‌ಕಾ-ಲಾಚಾರ್-ಪ್ರಜಾ. ರಾಜಕಾರಣಿ ಪಾಂಚ್-ಸಾಲಕಾ-ಲುಟೇರಾ-ರಾಜಾ, ಉಡಾಯಿ ಪಾಂಚ್ ಸಾಲ್ ಮಜಾ ಹೀ ಮಜಾ.

ಹೊಗಳಿಕೆ ತೆಗಳಿಕೆ

ರಾಜಕಾರಣಿಗಳು ಕೊನೆಗೆ ಸಿಕ್ಕಿ ಬಿದ್ದಾಗ ಅರಚುವುದು-"ನಾನು ನಿರಪರಾಧಿ, ಇದು ನನ್ನ ವಿರುದ್ಧ ಷಡ್ಯಂತ್ರ, ಪಿತೂರಿ. ಇದರ ಹಿಂದೆ ಯಾರ್‍ಯಾರು ಇದ್ದಾರೆಂದು ನನಗೆ ಗೊತ್ತಿದೆ. ಸೂಕ್ತ ಸಮಯದಲ್ಲಿ ಸೂಕ್ತ ವೇದಿಕೆಯಲ್ಲಿ ಎಲ್ಲಾ ಬಹಿರಂಗಪಡಿಸುವೆ"-ಎಂಬ ಬ್ಲಾಕ್‌ಮೇಲ್. ಆ ಸೂಕ್ತ ಸಮಯವೆಂದೂ ಬರುವುದೇ ಇಲ್ಲ, ಕಾರಣ ಇವರೋ ಸೂಕ್ತ ಸಮಯದಿ ಸೂಕ್ತ ವ್ಯಕ್ತಿಗಳೊಂದಿಗೆ ಸೇರಿ, ಹಗರಣದ ಹಣ ಸೂಕ್ತವಾಗಿ ಹಂಚಿಕೊಂಡು, ಸತ್ಯಕ್ಕೆ ಸೂಕ್ತ ಸಮಾಧಿ ಕಟ್ಟಿ ಬಿಡುತ್ತಾರೆ. ಈ ರೀತಿ ಹಗರಣದಿಂದ ಬಿಡುಗಡೆ ಹೊಂದಿದ ನಂತರ ಅವೇ ಸವಕಲು ಹೇಳಿಕೆಗಳು-"ದೇವರು ದೊಡ್ಡವನು, ಪ್ರಾಮಾಣಿಕರ ಕೈ ಬಿಡಲಿಲ್ಲ, ಸತ್ಯಕ್ಕೆ ಜಯವಾಯಿತು. (ಅಂತರಾರ್ಥ ದೇವರು ದಡ್ಡ, ಸತ್ಯಕ್ಕೆ ಸಾವು). ಒಂದು ವೇಳೆ ಹಗರಣದಿಂದ ಬಿಡುಗಡೆ ಆಗದಿದ್ದರೆ ಇದ್ದೇ ಇದೆ. ಸಣ್ಣ ಮಕ್ಕಳಂತೆ "ಅವನು ಮೊದಲು ಹೊಡೆದಿದ್ದಕ್ಕೆ ನಾನು ಹೊಡೆದೆ" ಎಂಬಂತಹ ಬಾಲಿಶಾ ಸಮರ್ಥನೆ- "ಅವರು ಮಾಡಿಲ್ಲವಾದ, ಇವರು ಮಾಡಿಲ್ಲವಾ, ಈಗ ನಾವು ಮಾಡಿದರೆ ಮಾತ್ರ ತಪ್ಪಾ? ನಮ್ಮ ಕುಟುಂಬರವರು ತಪ್ಪು ಮಾಡಿದರೆ ನಮಗೇಕೆ ಶಿಕ್ಷೆ?" ಇಂತಹವರಿಂದ ಮುಕ್ತಿ ಎಂದು??

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಬಹುರಾಷ್ಟ್ರೀಯ ಸಂಘಟನಾ ಚಾತುರ್ಯದಿಂದಾಗಿ ಇಂದು ಲಭ್ಯವಿರುವ ತಾಂತ್ರಿಕ ಕೌಶಲ, ಸಂಪರ್ಕ ತಂತ್ರಜ್ಞಾನ ಮತ್ತು ವೈದ್ಯ ವಿಜ್ಞಾನದ ಆವಿಷ್ಕಾರಗಳನ್ನೆಲ್ಲ ಬಳಸಿಕೊಂಡು, ಚಿಲಿ ಗಣಿಯಲ್ಲಿ ಸಿಕ್ಕಿಬಿದ್ದ ಕಾರ್ಮಿಕರನ್ನು ಹೊರತಂದ ಅದ್ಭುತ ಮತ್ತು ಅವಿಸ್ಮರಣೀಯ ಗಾಥೆಯನ್ನು ಕಳೆದ ವಾರದ 'ಕಂಡ ಹಾಗೆ'ಯಲ್ಲಿ ವಿವರಿಸಿದ್ದು ಚೆನ್ನಾಗಿತ್ತು, ಹಾಗೆಯೇ ಜ್ಯೋತಿಗುರುಪ್ರಸಾದರ ಕವಿತೆ 'ಪಾರಿವಾಳ'.

-ಡಾ.ಎಂ.ಬಿ.ರಾಮಮೂರ್ತಿ, ಬೆಂಗಳೂರು

ಮೈಸೂರು ಕೆ.ಆರ್.ನಗರ ತಾಲ್ಲೂಕಿನ ಸಾಲಿಗ್ರಾಮದ ದಲಿತರಿಗೆ, ಸವರ್ಣೀಯರು ಕ್ಷುಲ್ಲಕ ಕಾರಣಕ್ಕಾಗಿ ಸೆಪ್ಟೆಂಬರ್ 26, 2010ರಂದು ಸಾಮಾಜಿಕ ಬಹಿಷ್ಕಾರ ಹಾಕಿರುವುದು ಖಂಡನೀಯ ಘಟನೆಯಾಗಿದೆ. ಅಸ್ಪೃಶ್ಯತೆಯನ್ನು ರಾಜ್ಯಾಂಗದಲ್ಲಿ ತೊಡೆದುಹಾಕಲಾಗಿದೆ ಎಂದು ಹೇಳುತ್ತಲೇ ಇದ್ದರೂ, ವಾಸ್ತವವಾಗಿ ಅದಿನ್ನೂ ಒಂದಲ್ಲ ಒಂದು ರೀತಿಯಲ್ಲಿ ಆಚರಣೆಗೊಂಡೇ ಇದೆ. ಅಲ್ಲದೆ ದಲಿತರಿನ್ನೂ "ಸಾಮಾಜಿಕ ಬಹಿಷ್ಕಾರಕ್ಕೆ" ಬಲಿಯಾಗುತ್ತ ಇದ್ದಾರೆ. ಸಾಮಾಜಿಕ ನ್ಯಾಯ, ಸಮಾನತೆ, ರಕ್ಷಣೆಯಂಥ ಪ್ರಜಾಪ್ರಭುತ್ವದ ಆಶಯಗಳ ಜಾತಿವ್ಯವಸ್ಥೆ ಹೊಸಕಿ ಹಾಕುತ್ತಿರುವುದಂತ ಸತ್ಯ. 'ಲಂಕೇಶ್' ಈ ಕುರಿತು ವ ಮಾಡಿದ್ದರೂ ಪ್ರಭುತ್ವ ಎಚ್ಚರಗೊಳ್ಳುತ್ತಿಲ್ಲ.

ಈ ನಿಟ್ಟಿನಲ್ಲಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿರುವ ಸಾಲಿಗ್ರಾಮದ ದಲಿತರ ಸ್ವಯಂ ಉದ್ಯೋಗ, ಕೂಲಿ, ಸಂವಿಧಾನಬದ್ಧ ಹಕ್ಕುಗಳು, ಮೂಲಸೌಕರ್ಯ, ರ ಒದಗಿಸುವ ಜವಾಬ್ದಾರಿ ಜನಪ್ರತಿನಿಧಿಗಳ ಆದ್ಯ ಕರ್ತವ್ಯವಾಗಿದೆ.

ಪ್ರತಿ ಆರು ತಿಂಗಳಿಗೊಮ್ಮೆ ನಡೆಯಬೇಕಿರುವ ಪರಿಶಿಷ್ಟ ಜಾತಿ/ಪಂಗಡ ದೌರ್ಜನ್ಯ ನಿಯಂತ್ರಣ ನಿಯಮಗಳಡಿ ರಚಿಸಲಾದ ರಾಜ್ಯಮಟ್ಟದ ಜಾಗೃತ ಮ ಉಸ್ತುವಾರಿ ಸಮಿತಿ 3 ವರ್ಷ 9 ತಿಂಗಳ ನಂತರ ಈಚೆಗೆ ಸಭೆ ಸೇರಿದ್ದು ಸರ್ಕಾ ದಲಿತರ ಬಗ್ಗೆ ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಇಂದು ದೇಶದ ನಾನಾ ಭಾಗಗಳಲ್ಲಿ ಕೆಳವರ್ಗದ (ದಲಿತರ) ಸಮಸ್ಯೆಗಳ ಆಲಿಸುವ, ಸ್ಪಂದಿಸುವ ಹಾಗೂ ಅವರ ಹಕ್ಕುಗಳಿಗೆ ಕೇಳುವ ಪ್ರಜಾತಾಂತ್ರಿಕ ವ್ಯವಸ್ಥೆ ಇಲ್ಲದೆ ಆ ಜಾಗದಲ್ಲಿ ಲೆಕ್ಕಾಚಾರದ ರಾಜಕೀಯ ಪಕ್ಷ, ಗುಂಪುಗಳೇ ಲಾಬಿ ಮಾಡುತ್ತಿ ವುದರಿಂದ ನೈಜ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಹುಟ್ಟುಹಾಕಿ, ಮಾನವ ಹಕ್ಕು ಹರಣವಾಗದಂತೆ (ಕಾಪಾಡುವ ಜವಾಬ್ದಾರಿ) ಹೋರಾಟ ನಡೆಸಬೇಕಿದೆ.

-ಹೆಚ್. ಮಾರುತಿ, ಬೆಂಗಳೂ

ಪ್ರೀತಿಯ ಮೇಡಂ ಗೌರಿ,

ಇವತ್ತು ಮೊದಲನೆ ಬಾರಿಗೆ ನಿಮ್ಮ ಪತ್ರಿಕೆಯನ್ನು ಖರೀದಿಸಿ ಓದಿದೆ. ನಿ ಪತ್ರಿಕೆ ನನಗೆ ತುಂಬಾ ಇಷ್ಟವಾಗಿದ್ದರಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ.


ನಿಮ್ಮ ಸಂಪಾದಕೀಯ ತುಂಬಾ ಚೆನ್ನಾಗಿತ್ತು. ಯಾವುದೇ ಹಿಂಜರಿಕೆ ಇ ಯಡಿಯೂರಪ್ಪನ ಕರಾಳ ಮುಖವನ್ನು ತೆರೆದಿಟ್ಟಿದ್ದೀರಿ. ವಿಸಿಗಳ ನೇಮಕಾತಿಯ ಯಡಿಯೂರಪ್ಪನ ಜಾತಿ ಅಭಿಮಾನ ಹೇಸಿಗೆ ಹುಟ್ಟಿಸುವಂತಹದ್ದು.

ಎಚ್.ಎಲ್.ಕೇಶವಮೂರ್ತಿಯವರ 'ಅಣಕ' ಚೆನ್ನಾಗಿದೆ. ಸಂಗಮೇಶನ ಸಾ ಬಗ್ಗೆ ಓದಿ ದುಃಖವಾಯಿತು.


ಒಟ್ಟಾರೆ ನಿಮ್ಮ ಪತ್ರಿಕೆ ಇಷ್ಟವಾಗಿದ್ದು ಇನ್ನು ಮುಂದೆ ಇದನ್ನು ತಪ್ಪದೇ ಓದುತ್ತ ನಿಮ್ಮ ಅಭಿಮಾನಿ,

- ರಾಜೇಶ್, ಇಮೇಲ್ ಮೂ

ಹೀರೋಗಳಿಗೆ ಡೈರೆಕ್ಟರ್ ಸ್ಪೆಷಲ್ ಅಮಲು








ದನ್ನು ಪ್ರಯೋಗ ಎನ್ನಬೇಕೋ? ಸಾಹಸ ಎನ್ನ ? ಅಥವಾ ಪುತ್ರವ್ಯಾಮೋಹ ಎನ್ನಬೇಕೋ? ನಿಮ್ಮ ಬಿಟ್ಟದ್ದು. ಆದರೆ ಗಾಂಧಿನಗರದಲ್ಲಿ ಮೂವರು ನಟರು ತಮ್ಮ ಚಿತ್ರಗಳಲ್ಲಿ ನಟಿಸುವ ಬದಲು ಶಕರಾಗಲು ಹೊರಟಿದ್ದಾರೆ.

ನಾಯಕ ನಟರುಗಳ್ಯಾರೆಂದರೆ ಸುದೀಪ್, ಜಗ್ಗೇಶ್ ದೇವರಾಜ್.

ಗಾಗಲೇ ತಾನು ನಟಿಸಿರುವ ಚಿತ್ರಗಳನ್ನು ನಿರ್ದೇಶಿಸಿ ಯುಲ್ಲೂ ಚಿತ್ರವನ್ನು ನಿರ್ದೇಶಿಸಲು ಹೊರಟಿರುವ ಸುದೀಪ್ ಸದ್ಯದ ಮಟ್ಟಿಗೆ ಗಾಂಧಿನಗರದಲ್ಲಿ ಅತ್ಯಂತ ಚಾಲ್ತಿಯಲ್ಲಿರುವ ನಿರ್ದೇಶಕ ಕಮ್ ನಾಯಕನಟ ಎಂದರೆ ತಪ್ಪಾಗಲಾರದು. ಈ ಸುದೀಪ್ ಮುಂದಿನ ವರ್ಷ ಒಂದು ಹೊಸ ಚಿತ್ರ ನಿರ್ದೇಶನಕ್ಕೆ ಕೈಹಾಕಲಿದ್ದಾರೆ. ಈ ಹಿಂದೆ ತಮ್ಮ ನಿರ್ದೇಶನದ ಚಿತ್ರಗಳಲ್ಲಿ ತಾವೇ ನಾಯಕನಟನಾಗಿ ನಟಿಸಿದ್ದ ಸುದೀಪ್ ಈ ಬಾರಿ ನಿರ್ದೇಶನದ ಜವಾಬ್ದಾರಿಯನ್ನು ಮಾತ್ರ ನಿರ್ವಹಿಸಲಿದ್ದಾರಂತೆ! ಅಂದರೆ ಅವರ ಚಿತ್ರಕ್ಕೆ ಹೊಸ ನಾಯಕನಟನನ್ನು ತಲಾಶ್ ಮಾಡಿದ್ದಾರೆಂದಾಯಿತು. ಆ ನಾಯಕನಟ ಬೇರಾರೂ ಅಲ್ಲ; ನೂರು ಚಿತ್ರಗಳ ಸರದಾರ ಶಿವರಾಜ್‌ಕುಮಾರ್!

ಸ್ವತಃ ತಾನೇ ನಾಯಕನಾಗಿ ನಟಿಸುವ ಬದಲು ನಿರ್ದೇಶನದತ್ತ ಮನಸು ಮಾಡಿರುವ ಸುದೀಪ್ ಮನೋಇಚ್ಛೆಯನ್ನು ಮೆಚ್ಚಲೇಬೇಕು. ಸದ್ಯಕ್ಕೆ ಗಾಂಧಿನಗರದಲ್ಲಿ ನಾಯಕನಾಗಿ ಸುದೀಪ್‌ಗೆ ಸಖತ್ ಬೇಡಿಕೆಯಿದ್ದರೂ ಸುದೀಪ್ ತಂತ್ರಜ್ಞರಾಗಲು ಹೊರಟಿರುವುದು ಆತನ ಬದಲಾದ ಮನೋಧರ್ಮವನ್ನು ತೋರಿಸುತ್ತದೆ. ಈಗಾಗಲೇ ತಾನೇ ನಟಿಸಿರುವ 'ಮೈ ಆಟೋಗ್ರಾಫ್', 'ಶಾಂತಿನಿವಾಸ', 'ಜಸ್ಟ್ ಮಾತ್ ಮಾತಲ್ಲಿ', 'ವೀರಮದಕರಿ' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿ ಸುದೀಪ್ ನಿರ್ದೇಶಕರಾಗಿ ದೊಡ್ಡ ಹೆಸರನ್ನು ಪಡೆದಿದ್ದಾರೆ. ಸದ್ಯಕ್ಕೆ 'ಕೆಂಪೇಗೌಡ' ಮತ್ತು 'ಕನ್ವರ್‌ಲಾಲ್' ಚಿತ್ರಗಳನ್ನು ಸುದೀಪ್ ನಿರ್ದೇಶಿಸುತ್ತಿದ್ದಾರೆ. ಇದರ ನಡುವೆ ಈಗ ಶಿವರಾಜ್‌ಕುಮಾರ್‌ಗಾಗಿ ಸುದೀಪ್ ಒಂದು ಕಥೆಯನ್ನು ಹೆಣೆದಿರುವುದು ವಿಶೇಷ. ಒಬ್ಬ ನಾಯಕನಟನಿಗಾಗಿ ಚಾಲ್ತಿಯಲ್ಲಿರುವ ಮತ್ತೊಬ್ಬ ನಾಯಕನಟ ಕತೆ ಬರೆದು ನಿರ್ದೇಶನ ಮಾಡುತ್ತಿರುವುದು ಕನ್ನಡ ಚಿತ್ರರಂಗದ ಮಟ್ಟಿಗೆ ಸ್ನೇಹ-ಬಾಂಧವ್ಯದ ಒಂದು ಹೊಸ ಅಧ್ಯಾಯವನ್ನೇ ತೆರೆದಿದೆ ಎಂದು ಹೇಳಬಹುದು.

ನಿರ್ದೇಶನದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೊರಟಿರುವ ಇನ್ನಿಬ್ಬರು ನಾಯಕ ನಟರೆಂದರೆ ನವರಸನಾಯಕ ಜಗ್ಗೇಶ್ ಮತ್ತು ಡೈನಾಮಿಕ್ ಸ್ಟಾರ್ ದೇವರಾಜ್. ಇವರಿಬ್ಬರ ಪಾಲಿಗೂ ನಿರ್ದೇಶನ ಒಂದು ಹೊಸ ಅನುಭವವಾಗಲಿದೆ. ಆದರೆ ಇವರಿಬ್ಬರೂ ಕಳೆದ ಕಾಲುಶತಮಾನದಿಂದ ಕನ್ನಡ ಚಿತ್ರರಂಗದ ಒಂದು ಭಾಗವಾಗಿ ಹೋಗಿರುವುದರಿಂದ, ಜೊತೆಗೆ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಅನುಭವ ಹೊಂದಿರುವುದರಿಂದ ಅವರಿಗೆ ನಿರ್ದೇಶನದ ಹೊಸ ಕೆಲಸ ತೊಂದರೆಯಾಗಲಾರದು.





ತನ್ನ ಮಗ ಗುರುರಾಜ್ ನಟಿಸಲಿರುವ ಚಿತ್ರವನ್ನು ನಿರ್ದೇಶಿಸುವ ಹಂಬಲವನ್ನು ಜಗ್ಗೇಶ್ ತೋರಿದರೆ, ದೇವರಾಜ್ ಕೂಡ ತಮ್ಮ ಮಗ ಪ್ರಜ್ವಲ್ ನಟಿಸಲಿರುವ ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾರೆ. ಮೇಲ್ನೋಟಕ್ಕೆ ನಿಮಗೆ ಇದು ಪುತ್ರವ್ಯಾಮೋಹದ ತರಹ ಕಾಣಿಸಬಹುದು. ಜಗ್ಗೇಶ್ ಮತ್ತು ದೇವರಾಜ್ ಇಬ್ಬರಿಗೂ ನಿರ್ದೇಶಕರಾಗಿ ಇದು ಚೊಚ್ಚಲ ಅನುಭವವಾಗಲಿದೆ. ಹೀಗಾಗಿ ಮಗನ ಭವಿಷ್ಯದ ಜೊತೆಗೆ ನಿರ್ದೇಶಕರಾಗಿ ಅವರಿಬ್ಬರ ಭವಿಷ್ಯವೂ ಈ ಚಿತ್ರಗಳ ಯಶಸ್ಸಿನಲ್ಲಿ ಅಡಕವಾಗಿದೆ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು.

ಸಾಧಾರಣವಾಗಿ ಯಾವುದೇ ನಿರ್ದೇಶಕ ತನ್ನ ಮೊದಲ ಚಿತ್ರಕ್ಕೆ ಒಂದು ಪ್ರೇಮಕಥಾವಸ್ತುವಿನ ಕಮರ್ಷಿಯಲ್ ಚಿತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಜಗ್ಗೇಶ್ ಮತ್ತು ದೇವರಾಜ್ ಈ ವಿಷಯದಲ್ಲಿ ವಿಭಿನ್ನರಾಗಿದ್ದಾರೆ. ಜಗ್ಗೇಶ್ ತನ್ನ ಮಗನನ್ನು ಆತನ ವಯಸ್ಸಿಗೆ ಮೀರಿದ ಪಾತ್ರದಲ್ಲಿ ತೋರಿಸಲು ನಿರ್ಧರಿಸಿದ್ದಾರೆ. ಅಂದರೆ ಸಿಂಗೀತಂ ಶ್ರೀನಿವಾಸ್ ನಿರ್ದೇಶನದ 'ಮೇಕಪ್' ಚಿತ್ರದಲ್ಲಿ ಹೇಗೆ ಜಗ್ಗೇಶ್ ನಡುವಯಸ್ಸಿನ ಹೆಂಗಸಿನ ಪಾತ್ರದಲ್ಲಿ ಕಾಣಿಸಿಕೊಂಡರೋ ಅದೇ ಮಾದರಿಯ ನಾಯಕನ ಪಾತ್ರದಲ್ಲಿ ತನ್ನ ಮಗ ಗುರುರಾಜ್‌ನನ್ನು ತೋರಿಸಲು ಜಗ್ಗೇಶ್ ನಿರ್ಧರಿಸಿದ್ದಾರೆ. ಗುರುರಾಜ್ ಈಗಾಗಲೇ 'ಗಿಲ್ಲಿ' ಎಂಬ ಚಿತ್ರದ ಮುಖಾಂತರ ನಾಯಕನಟನಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಾಗಿದೆ. ಅದಕ್ಕಿಂತಲೂ ಮೊದಲು 'ಮೇಕಪ್' ಚಿತ್ರದ ಕಥೆಗಾರನಾಗಿಯೂ ಗುರುರಾಜ್ ಉದ್ಯಮದಲ್ಲಿ ಎಲ್ಲರ ಗಮನ ಸೆಳೆದಿದ್ದ. ಈಗ ಇಪ್ಪತ್ತರ ಹರೆಯದ ಈ ಹುಡುಗ ಪ್ರೇಮಕಥಾವಸ್ತುವಿನ ಬದಲು ಮಧ್ಯವಯಸ್ಸಿನ ಪಾತ್ರದಲ್ಲಿ ಕಾಣಿಸಿಕೊಳ್ಳಲು ಹೊರಟಿದ್ದಾನೆ.

ಆದರೆ ದೇವರಾಜ್ ಅವರ ಕಥೆಯೇ ಬೇರೆ. ಅಪ್ಪನ ಚಿತ್ರವನ್ನು ನಿರ್ದೇಶಿಸಬೇಕೆಂದು ಆರಂಭದಲ್ಲಿ ಹಂಬಲಿಸಿದ್ದು ಮಗ ಪ್ರಜ್ವಲ್ ದೇವರಾಜ್! ಈಗ ಅದು ಉಲ್ಟಾಪಲ್ಟಾ ಆಗಿದೆ. ಸ್ವತಃ ದೇವರಾಜ್ ತನ್ನ ಮಗ ಪ್ರಜ್ವಲ್‌ಗಾಗಿ ಒಂದು ಕಥೆಯನ್ನು ಹೆಣೆಯುತ್ತಿದ್ದಾರೆ ಮಾತ್ರವಲ್ಲ ಅದನ್ನು ತಾನೇ ನಿರ್ದೇಶಿಸುವುದಾಗಿ ದೇವರಾಜ್ ತೀರ್ಮಾನಿಸಿದ್ದಾರೆ. ರಂಗಭೂಮಿಯಿಂದ ಚಿತ್ರರಂಗಕ್ಕೆ ಕಾಲಿಟ್ಟ ದೇವರಾಜ್ ನಾಯಕ ಮತ್ತು ಖಳನಾಯಕ ಪಾತ್ರಗಳಲ್ಲಿ ವಿಜೃಂಭಿಸಿ ಅಪಾರ ಅನುಭವವನ್ನು ಗಳಿಸಿದವರು. ಈಗ ಈ ಅನುಭವದ ಧಾರೆಯನ್ನು ತಮ್ಮ ಮಗನ ಭವಿಷ್ಯಕ್ಕಾಗಿ ದೇವರಾಜ್ ಎರೆಯಲಿದ್ದಾರೆ.

ಪ್ರಜ್ವಲ್ ದೇವರಾಜ್ ನಾಲ್ಕು ವರ್ಷಗಳ ಹಿಂದೆ 'ಸಿಕ್ಸರ್' ಚಿತ್ರದ ಮೂಲಕ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಹುಡುಗ. ಆರಡಿ ಎತ್ತರದ ಈ ಸುಂದರಾಂಗ ಚಿತ್ರರಂಗದಲ್ಲಿ ಪ್ರಜ್ವಲಿಸುತ್ತಾನೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಆತ ಆರಕ್ಕೇರದ ಮೂರಕ್ಕಿಳಿಯದ ನಟನಾಗಿ ಈಗ ಚಾಲ್ತಿಯಲ್ಲಿದ್ದಾನೆಯೇ ಹೊರತು ಆತ ಅಂತಹ ದೊಡ್ಡ ಯಶಸ್ಸನ್ನು ಕಂಡಿಲ್ಲ. ಆ ಕಾರಣಕ್ಕಾಗಿ ತನ್ನ ಮಗನ ಪ್ರತಿಭೆಯನ್ನು ಚಿತ್ರಜಗತ್ತಿಗೆ ತೋರಿಸಲು ದೇವರಾಜ್ ಅಖಾಡಕ್ಕೆ ಇಳಿಯುತ್ತಿದ್ದಾರೇನೋ?


ಹೀಗೆ ಮೂವರು ನಾಯಕ ನಟರು ತಮ್ಮ ಮುಖಕ್ಕೆ ಬಣ್ಣ ಹಚ್ಚುವ ಬದಲು ನಿರ್ದೇಶನದತ್ತ ಮನಸು ಮಾಡಿರುವುದು ನಿಜಕ್ಕೂ ಒಂದು ಒಳ್ಳೆಯ ಬೆಳವಣಿಗೆಯೇ ಸರಿ. ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕರಾಗಿ ಹೆಸರು ಗಳಿಸಿದ ಉಪೇಂದ್ರ, ಪ್ರೇಮ್, ಮಹೇಂದರ್, ಎಸ್.ನಾರಾಯಣ್, ಶಿವಮಣಿ ಮೊದಲಾದವರಿಗೆಲ್ಲಾ ನಾಯಕರಾಗುವ ಹುಚ್ಚು ಹಿಡಿದಿರುವಾಗ ಸ್ವತಃ ನಾಯಕರುಗಳೇ ನಿರ್ದೇಶನದ ಜವಾಬ್ದಾರಿ ಕೈಗೆತ್ತಿಕೊಳ್ಳುತ್ತಿರುವುದು ಆಶಾದಾಯಕ ವಿಷಯ.


• ಶೆಣೈ

ರೆಡಿಯಾಗುತ್ತಿವೆ 'ಪ್ರಶಸ್ತಿ' ಪಿಕ್ಚರುಗಳು

ಕ್ಟೋಬರ್-ನವೆಂಬರ್ ತಿಂಗಳಲ್ಲಿ ಕಲಾತ್ಮಕ ಚಿತ್ರ ವಲಯದ ಪಕ-ನಿರ್ದೇಶಕರಿಗೆ ಎಲ್ಲಿಲ್ಲದ ಉತ್ಸಾಹ ಉಕ್ಕಿ ಬರುತ್ತದೆ. ಈ ಬಾರಿಯೂ ನಗರದಲ್ಲಿ ಅಂತದ್ದೇ ವಾತಾವರಣ ಕಾಣಿಸುತ್ತಿದೆ.


ರ್ಷವಿಡೀ ಸೆಮಿನಾರ್‌ಗಳಲ್ಲೇ ಕಾಲ ಕಳೆಯುತ್ತಿದ್ದ ಪಿ.ಶೇಷಾದ್ರಿ ರಾಮದಾಸ ಈಗ ಚಕನೆ ರ್ದೇಶನಕ್ಕೆ ದ್ದಾರೆ. ಅವರಿಬ್ಬರು ಶಿಸುತ್ತಿರುವ ಚಿತ್ರಗಳ ಪಕರು ಕುಮಾರ್ ಎಂಬುದು ತಿಳಿದಿರಬಹುದು. ಇವು ಗಾಗಿ ಗುತ್ತಿರುವ ಗಳು ಎಂದು ವಿಶೇಷವಾಗಿ ಹೇಳಬೇಕಾಗಿಲ್ಲ ತಾನೇ? ಶೇಷಾದ್ರಿ ಶಿವರಾಮ ಕಾರಂತರ ಕಾದಂಬರಿ 'ಬೆಟ್ಟದ ಜೀವ' ಕೈಗೆತ್ತಿಕೊಂಡರೆ ಸ ನಾಯ್ನು ಮಕ್ಕಳ ಚಿತ್ರ ನಿರ್ದೇಶಿಸುತ್ತಿದ್ದಾರೆ. ಅಂದರೆ ಚಿತ್ರ ಮತ್ತು ಅತ್ಯುತ್ತಮ ಮಕ್ಕಳ ಚಿತ್ರ ಎರಡನ್ನೂ ತನ್ನ ಹಾಕಿಕೊಳ್ಳುವ ಉತ್ಸಾಹದಲ್ಲಿದ್ದಾರೆ ನಿರ್ಮಾಪಕ ಪಾಟೀಲರು.


ಬಿ.ಸುರೇಶ್


ಪ್ರಕಾಶ್ ರೈ


ಮಧ್ಯೆ ಕಲಾತ್ಮಕ ವಲಯದಲ್ಲೇ ಯಾರಿಗೂ ಗೊತ್ತಾಗದಂತೆ ನಿಗೂಢವಾಗಿ ರ್ಮಿಸುವುದರಲ್ಲಿ ಎತ್ತಿದ ಕೈ ಎನಿಸಿರುವ ಬರಗೂರು ರಾಮಚಂದ್ರಪ್ಪ ಚಿತ್ರ ನಿರ್ದೇಶಿಸುತ್ತಿದ್ದಾರೆ ಎಂಬ ಸುದ್ದಿಯಿದೆ. ಆದರೆ ಇವರ ಚಿತ್ರ ರ್ಮಾಣವಾಗುತ್ತಿದೆ? ಯಾರು ನಾಯಕ-ನಾಯಕಿ? ಎಂಬಿತ್ಯಾದಿ ಗಳೇನೂ ಸಿಗುತ್ತಿಲ್ಲ. ಅಂತೂ-ಇಂತೂ ಇವರೂ ಕೂಡಾ ಪ್ರಶಸ್ತಿಯ ದ್ದಾರೆಂದಾಯಿತು. ಈ ಮಧ್ಯೆ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾಗಿ ರ್ವಹಿಸುತ್ತಿರುವ ನಾಗಾಭರಣ ಅವರ ಚಿತ್ರವೊಂದು ಸೆಟ್ಟೇರುವ ಆದರೆ ಯಾಕೋ ಏನೋ ಅದು ಕಾರ್ಯಗತವಾಗುವ ಸೂಚನೆಗಳು ಗುತ್ತಿಲ್ಲ. ಅಲ್ಲಿಗೆ ಈ ಬಾರಿ ಭರಣ ಅವರು ಪ್ರಶಸ್ತಿಗಾಗಿನ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ ಎಂದಾಯಿತು.

ಸುರೇಶ್ ಮತ್ತು ಪ್ರಕಾಶ್ ರೈ ಇಬ್ಬರೂ 'ಪುಟ್ಟಕ್ಕನ ಹೈವೇ' ಎಂಬ ಆರಂಭಿಸಿ, ಬಹಳ ಬಿರುಸಿನಿಂದ ಮುನ್ನುಗ್ಗುತ್ತಿದ್ದಾರೆ. 'ನಾನು ನನ್ನ ಕನಸು' ಚಿತ್ರದ ನಂತರ ಈ ಇಬ್ಬರು ಗೆಳೆಯರು ಸೇರಿ ನಿರ್ಮಿಸುತ್ತಿರುವ ಎರಡನೆಯ ಚಿತ್ರವಿದು. ಕಳೆದ ಬಾರಿ ಪ್ರಕಾಶ್ ರೈ ಚಿತ್ರ ನಿರ್ದೇಶಿಸಿದ್ದರೆ ಈ ಬಾರಿ ನಿರ್ದೇಶನದ ಜವಾಬ್ದಾರಿಯನ್ನು ಬಿ.ಸುರೇಶ್ ವಹಿಸಿಕೊಂಡಿದ್ದಾರೆ. ಎಂದಿನಂತೆ ಈ ಚಿತ್ರದಲ್ಲೂ ಪ್ರಕಾಶ್ ರೈಗೆ ಪ್ರಮುಖ ಪಾತ್ರವಿದೆ.


ಹಂಸಲೇಖ

ತನ್ನ ಚಿತ್ರಗಳಿಗೆ ಒಂದಲ್ಲ ಒಂದು ಪ್ರಶಸ್ತಿಯನ್ನು ಪಡೆಯುವುದರಲ್ಲಿ ನಿಸ್ಸೀಮನಾಗಿರುವ ನಿರ್ದೇಶಕ ಶಿವರುದ್ರಯ್ಯನವರ 'ಭಗವತಿ ಕಾಡು' ಈಗಾಗಲೇ ಆಯ್ದ ಅತಿಥಿಗಳಿಗೆ ಪ್ರದರ್ಶನವಾಗಿದೆ. ವಿಶೇಷವೆಂದರೆ ಈ ಚಿತ್ರದ ಮುಖಾಂತರ ಸಂಗೀತ ನಿರ್ದೇಶಕ ಹಂಸಲೇಖ ಕೂಡಾ ಪ್ರಶಸ್ತಿಯ ಲೋಕದೊಳಗೆ ಕಾಲಿಟ್ಟಂತಾಗಿದೆ. ಆದರೆ ಈ ಚಿತ್ರ ಮುಗಿಯುವಷ್ಟರಲ್ಲಿ ಹಂಸಲೇಖ ಮತ್ತು ಶಿವರುದ್ರಯ್ಯನವರ ನಡುವೆ ಮನಸ್ತಾಪವಾಗಿದೆ ಎಂಬ ಸುದ್ದಿ ಹರಡಿದೆ. ಈ ಕಾರಣಕ್ಕೋ ಏನೋ, ಶಿವರುದ್ರಯ್ಯ ಈಗ ಯಾರಿಗೂ ಹೇಳದೇ ಗುಟ್ಟಾಗಿ ಇನ್ನೊಂದು ಕಲಾತ್ಮಕ ಚಿತ್ರವನ್ನು ನಿರ್ದೇಶಿಸುತ್ತಿದ್ದಾರಂತೆ. ಶಿವರುದ್ರಯ್ಯನವರಿಗೆ 'ಭಗವತಿ ಕಾಡು' ಚಿತ್ರಕ್ಕಿಂತ ತನ್ನ ಹೊಸ ಚಿತ್ರಕ್ಕೆ ಪ್ರಶಸ್ತಿ ಗಿಟ್ಟಿಸಿಕೊಳ್ಳುವ ಹುಮ್ಮಸ್ಸಿದೆಯಂತೆ!

ಇನ್ನು ಈ ವರ್ಷವೇ ಚಿತ್ರವನ್ನು ನಿರ್ದೇಶಿಸಬೇಕು ಎಂದು ಹೊರಟು ಕೊನೇ ಕ್ಷಣದಲ್ಲಿ ಸುಮ್ಮನಾದವರೆಂದರೆ ನಿರ್ದೇಶಕ ಲಿಂಗದೇವರು ಮತ್ತು ಗಿರೀಶ್ ಕಾಸರವಳ್ಳಿ. ಲಿಂಗದೇವರು ಭಾರೀ ದೊಡ್ಡ ಕಥೆಯನ್ನು ತಯಾರು ಮಾಡಿ ಕುಳಿತಿದ್ದರೂ ಅದ್ಯಾಕೋ ಮನಸ್ಸು ಬದಲಾಯಿಸಿ ಮುಂದಿನ ವರ್ಷ ಈ ಚಿತ್ರ ಮಾಡುವ ಮನಸ್ಸು ಮಾಡಿದ್ದಾರೆ. ಕಾಸರವಳ್ಳಿಯವರು ತಮ್ಮ ಪತ್ನಿ ವೈಶಾಲಿ ನಿಧನದ ನಂತರ ಬಹುಶಃ ಒಂದು ಬ್ರೇಕ್ ಅನ್ನು ಅಪೇಕ್ಷಿಸಬಹುದೋ ಏನೋ?



ಶಿವರುದ್ರಯ್ಯ

ನಂಜುಂಡೇ ಗೌಡ ಕೂಡಾ ಒಂದು ಮಕ್ಕಳ ಚಿತ್ರ ಮಾಡುವ ಸುದ್ದಿ ಅಲ್ಲಲ್ಲಿ ಕೇಳಿ ಬರುತ್ತಿದೆ. ಕಳೆದ ಬಾರಿ ತನ್ನ ಮಗ ಲಿಖಿತ್‌ನನ್ನು ಹಾಕಿಕೊಂಡು 'ನಾನು ಗಾಂಧಿ' ಎಂಬ ಮಕ್ಕಳ ಚಿತ್ರವೊಂದನ್ನು ಗೌಡರು ನಿರ್ದೇಶಿಸಿದರು. ಆದರೆ ಆ ಹುಡುಗನಿಗೆ ಈಗ ಮೀಸೆ ಬಂದಿರುವುದರಿಂದ ಈ ಬಾರಿ ಮಕ್ಕಳ ಚಿತ್ರದಲ್ಲಿ ಲಿಖಿತ್ ಇರುವ ಸಾಧ್ಯತೆ ಕಡಿಮೆ.

ತುಳು ಮತ್ತು ಕೊಂಕಣಿ ಚಿತ್ರಗಳಿಗೂ ಪ್ರಶಸ್ತಿ ಇರುವುದರಿಂದ ಆ ವಲಯದಲ್ಲೂ ಈಗ ಚಟುವಟಿಕೆ ಆರಂಭವಾಗಿದೆ. ಕಳೆದ ಬಾರಿ 'ಕೋಟಿ-ಚೆನ್ನಯ' ಎಂಬ ಚಿತ್ರ ನಿರ್ಮಿಸಿ ಪ್ರಶಸ್ತಿಯ ರುಚಿ ಅನುಭವಿಸಿದ ನಿರ್ಮಾಪಕ ಧನರಾಜ್ ಈ ಬಾರಿ ಪೂಜಾ ಗಾಂಧಿ ನಾಯಕಿಯಾಗಿ ನಟಿಸುತ್ತಿರುವ ಚಿತ್ರವೊಂದನ್ನು ನಿರ್ಮಿಸುತ್ತಿದ್ದಾರೆ. ಮತ್ತೊಂದೆಡೆ ಕಾಸರಗೋಡು ಚಿನ್ನ ಎಂಬ ಕಲಾವಿದ ಕೊಂಕಣಿ ಚಿತ್ರವೊಂದನ್ನು ನಿರ್ದೇಶಿಸಲು ಸಕಲ ತಯ್ಯಾರಿಯನ್ನು ನಡೆಸಿ, ಒಳ್ಳೆಯ ಸಮಯಕ್ಕಾಗಿ ಕಾದು ಕುಳಿತಿದ್ದಾರೆ. ವಿಮರ್ಶಕನ ಬದಲು ನಿರ್ದೇಶಕರಾಗಿ ನಮ್ಮ ಪತ್ರಿಕೆಯ ಸದಾಶಿವ ಶೆಣೈ ಕೂಡಾ 'ಪ್ರಾರ್ಥನೆ' ಚಿತ್ರದ ಮುಖಾಂತರ ಚಿತ್ರರಂಗಕ್ಕೆ ಕಾಲಿಟ್ಟಿರುವುದು ಗಮನಾರ್ಹ.

ಅಂದರೆ ಡಿಸೆಂಬರ್ 31ರೊಳಗಡೆ ಕನಿಷ್ಠ ಇನ್ನೂ ಐದಾರು ಕಲಾತ್ಮಕ ಚಿತ್ರಗಳು ಸೆಟ್ಟೇರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಅಂತೂ-ಇಂತೂ ಕನಿಷ್ಠವೆಂದರೂ ಸುಮಾರು 15 ಚಿತ್ರಗಳು ಕಲಾತ್ಮಕ ಚಿತ್ರಗಳೆಂಬ ಬ್ರ್ಯಾಂಡ್ ಅಡಿಯಲ್ಲಿ ನಿರ್ಮಾಣವಾಗಲಿವೆ.

ಇದೊಂದು ಆರೋಗ್ಯಪೂರ್ಣ ಪೈಪೋಟಿ. ಇದರಲ್ಲಿ ಕೆಲವು ಚಿತ್ರಗಳ ನಿರ್ದೇಶಕರಿಗೆ ಪ್ರಶಸ್ತಿ ಬರುತ್ತದೆ. ಪ್ರಶಸ್ತಿ ಬಂದಾಕ್ಷಣ ಅವರು ಹಾಕಿದ ಬಂಡವಾಳ ವಾಪಸ್ಸು ಬಂದಂತೆಯೇ. ಹಾಗಾಗಿ ಆ ಚಿತ್ರದ ನಿರ್ಮಾಪಕರು ಅದನ್ನು ಬಿಡುಗಡೆ ಮಾಡುವ ಗೋಜಿಗೆ ಹೋಗುವುದಿಲ್ಲ. ಮತ್ತೊಂದೆಡೆ ಪ್ರಶಸ್ತಿಯಿಂದ ವಂಚಿತರಾದವರೂ ತಮ್ಮ ಚಿತ್ರವನ್ನು ರಿಲೀಸ್ ಮಾಡುವ ದುಸ್ಸಾಹಸಕ್ಕೆ ಕೈಹಾಕುವುದಿಲ್ಲ. ಯಾಕೆಂದರೆ ಯಾವುದೇ ಕಾರಣಕ್ಕೂ ಅವರಿಗೆ ಹಾಕಿದ ಬಂಡವಾಳ ವಾಪಸ್ಸಾಗುವುದಿಲ್ಲ. ತಮಾಷೆಯೆಂದರೆ ಪ್ರಶಸ್ತಿ ಗೆದ್ದ ಚಿತ್ರಗಳನ್ನು ಪ್ರೇಕ್ಷಕ ನೋಡಲಾಗುವುದಿಲ್ಲ; ಹಾಗೆಯೇ ಸೋತ ಚಿತ್ರಗಳನ್ನೂ ನೋಡಲಾಗುವುದಿಲ್ಲ. ಈ ಕಾರಣದಿಂದಲೇ ಇಂತಹ ಚಿತ್ರಗಳು ಅದೆಷ್ಟೇ ಸಂಖ್ಯೆಯಲ್ಲಿ ನಿರ್ಮಾಣಗೊಂಡರೂ ಪ್ರೇಕ್ಷಕ ಮಹಾಪ್ರಭು ದಿವ್ಯ ನಿರ್ಲಕ್ಷ್ಯ ತೋರಿಸುತ್ತಾನೆ. ●


ಶೇಷಾದ್ರಿ

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 17-11-2010 RNI No. KARKAN200

ಸಿನಿಮಾ ಮತ್ತು ರಾಜ್ಯೋತ್ಸವ ಪ್ರಶಸ್ತಿ

ರವಿಚಂದ್ರನ್ ಎಂಬ ಗಾಂಧಿನಗರದ ಮಹಾಕನಸುಗಾರ ಈ ಮಾಯಾಲೋಕದಲ್ಲಿ ಕಾಲು ಶತಮಾನಗಳ ಕಾಲ ಜೀವನ ನಡೆಸಿದ ನಂತರ ಇದೀಗ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಅದೂ ಸೆಕೆಂಡ್ ಲಿಸ್ಟ್‌ನಲ್ಲಿ...!



ಸುಮಾರು ಎರಡೂವರೆ ದಶಕಗಳ ಕಾಲ ಕರ್ನಾಟಕದ ಜನತೆಯನ್ನು ರಂಜಿಸಿದ ಈ ಸೂಪರ್ ಕಲಾವಿದನಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಲು ಇಷ್ಟೊಂದು ಸಮಯಬೇಕಾಯ್ತು ಎಂಬುದೇ ಆಶ್ಚರ್ಯ. ಕೋಟಿ ಕೋಟಿ ರೂ.ಗಳ ಜೊತೆ ಸದಾ ಚೆಲ್ಲಾಡುವ ಈ ಕನಸುಗಾರನ ಕೊಡುಗೆ ಕನ್ನಡ ಚಿತ್ರರಂಗಕ್ಕೆ ಅಸಾಮಾನ್ಯವಾದುದ್ದೇ. ಕನ್ನಡ ಚಿತ್ರರಂಗಕ್ಕೆ ಶ್ರೀಮಂತಿಕೆಯ ಲೇಪ ನೀಡಿದ್ದೇ ಈ ಮನುಷ್ಯ. ಕನ್ನಡಿಗರು ಬಾಯ್ಬಿಟ್ಟು ನೋಡುತ್ತಿದ್ದ ಬಾಲಿವುಡ್‌ನ 'ಕಾಮದೇವತೆ'ಯರನ್ನು ಗಾಂಧಿನಗರಕ್ಕೆ ಕರೆತಂದವರೇ ಈ ರವಿಚಂದ್ರನ್ ಎಂಬ 'ಪ್ರೇಮ' ಸರದಾರ. ಹಾಗೆಯೇ ಸುಂದರಿಯರನ್ನು 'ಸೌಂದರ್ಯ ದೇವತೆ'ಯ ತರಹ ತೋರಿಸುವ ಕಲೆಯನ್ನು ಕಲಿಸಿದ್ದೇ ಈ 'ಹಳ್ಳಿಮೇಷ್ಟ್ರು'. ಸಂಗೀತಕ್ಕೂ ಒಂದು ಮಾರುಕಟ್ಟೆಯಿದೆ ಎಂದು ಮೊದಲ ಬಾರಿಗೆ ಆವಿಷ್ಕಾರ ಮಾಡಿದ್ದೂ ಇದೇ ಕ್ರೇಜಿಸ್ಟಾರ್. ಸಾಹಸ, ಸಾಧನೆಯೇ ತನ್ನ ಉಸಿರು ಎಂಬಂತೆ ಕಳೆದ ಎರಡೂವರೆ ದಶಕಗಳಿಂದ ಕನ್ನಡ ಚಿತ್ರರಂಗದಲ್ಲಿರುವ ಕ್ರೇಜಿಸ್ಟಾರ್ ರವಿಚಂದ್ರನ್ ನಿಜಕ್ಕೂ ಪ್ರಶಸ್ತಿ ಅರ್ಹರು.

ಹಾಗೇ ನೋಡಿದರೆ ಈ ಪ್ರಶಸ್ತಿ ಅವರಿಗೆ ಎಂದೋ ಬರಬೇಕಾಗಿತ್ತು, ಆದರೆ ಪ್ರಶಸ್ತಿಯ ಬಗ್ಗೆ ಯಾವತ್ತೂ ತಲೆಕೆಡಿಸಿಕೊಳ್ಳದ ರವಿಚಂದ್ರನ್, ಪ್ರಶಸ್ತಿಗಳನ್ನು ಮೀರಿ ಬೆಳೆದ ಸಾಧಕ ಎಂದು ಹೇಳಿದರೂ ತಪ್ಪಾಗಲಾರದು. ಏನೋ ಯಡಿಯೂರಪ್ಪನ ಸರ್ಕಾರ ರವಿಚಂದ್ರನ್ ಅವರಿಗೆ ಈ ಪ್ರಶಸ್ತಿ ನೀಡಿದ್ದರಿಂದ ಅವರ ಸರ್ಕಾರವೇ ಒಂದು ರೀತಿಯಲ್ಲಿ ಗೌರವ ಪಡೆದುಕೊಂಡಿದೆ ಎನ್ನಬಹುದು.

ಅದೇರೀತಿ ನಾಗತಿಹಳ್ಳಿ ಚಂದ್ರಶೇಖರ್ ಕೂಡಾ ಪ್ರಶಸ್ತಿಗೆ ಅರ್ಹರಾದ ವ್ಯಕ್ತಿಯೆಂದೇ ಹೇಳಬೇಕು. ನಾಗತಿಹಳ್ಳಿ ಎಂಬ ಪುಟ್ಟ ಹಳ್ಳಿಯಿಂದ ಪಟ್ಟಣಕ್ಕೆ ಬಂದು, ಅದರಲ್ಲೂ ಗಾಂಧಿನಗರಕ್ಕೆ ಬಂದು ಇವರು ಮಾಡಿದ ಸಾಹಸ ಅಸಾಮಾನ್ಯವಾದುದ್ದೇ. ಮಾತ್ರ ವಿದೇಶಗಳಲ್ಲಿ ಚಿತ್ರೀಕರಣ ಟ್ರೆಂಡನ್ನು ಕನ್ನಡ ಚಿತ್ರರಂಗಕ್ಕೆ ನೀಡಿದವರೇ ನಾಗತಿಹಳ್ಳಿ. ಸಾಮಾನ್ಯವಾಗಿ ಬರಹಗಾರ ಕಲಾತ್ಮಕ ಚಿತ್ರಗಳಲ್ಲಿ ಮಾತ್ರ ತೊಡಗಿಸಿಕೊಂಡರೆ ನಾಗತಿಹಳ್ಳಿ ಕಮರ್ಷಿಯಲ್ ಚಿತ್ರಗಳಲ್ಲೂ ಜಯಭೇರಿ ಬಾ ಅಲ್ಲೂ-ಇಲ್ಲೂ ಸಲ್ಲುವರಾಗಿ ಬೆಳೆದವರು. ಜೊತೆಗೆ ಬರವಣಿಗೆ, ಅಂಕಣಗಳು, ಸಾಹಿತ್ಯಕ ಪ್ರವಚನಗಳು ಇವೆಲ್ಲ ನಾಗತಿಹಳ್ಳಿಯ ವರ್ಚಸ್ಸನ್ನು ವೃದ್ಧಿಸಿವೆ. ಇತ್ತೀಚಿನ ಅವರ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಸೋಲುತ್ತಿರುವ ಅವರಿಗೆ ಈ ಪ್ರಶಸ್ತಿ ಮತ್ತೆ ಜೀವನೋತ್ಸಾಹ ತಂದುಕೊಡಲಿ ಎಂಬುದು ನಮ್ಮ ಆಶಯ.

'ಗುಂಡಿ'ನ ಹಾಡಿಂದ ಒಮ್ಮೆಲೇ ಜನಪ್ರಿಯತೆ ಗಳಿಸಿದ ಮಂಜುಳಾ ಗುರುರಾಜ್ ಮತ್ತು 'ಹಿಂದೂಸ್ತಾನ ಎಂದೂ ಮರೆಯದ....' ಹಾಡಿಂದ ಕನ್ನಡಿಗರ ಹೃದಯವನ್ನು ಗೆದ್ದ ಬಿ.ಆರ್.ಛಾಯ ಇವರಿಬ್ಬರಿಗೂ ಈ ಬಾರಿ ಪ್ರಶಸ್ತಿ ಸಿಕ್ಕಿರುವುದು ಸಂತೋಷವೇ ಸರಿ. ಹಿನ್ನೆಲೆ ಗಾಂ ಎಸ್.ಜಾನಕಿ ಅತ್ಯಂತ ಉನ್ನತ ಸ್ಥಾನದಲ್ಲಿರುವಾಗ ಇವರಿಬ್ಬರಿಗೆ ಅವಕಾಶಗಳೇ ಕಡಿಮೆಯಿ ಸಿಕ್ಕ ಅವಕಾಶಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದ ಮಂಜುಳಾ ಮತ್ತು ಛಾಯಾ ಸಂಗಿ ಲೋಕದಲ್ಲಿ ಕ್ರಮೇಣವಾಗಿ ತಮ್ಮದೇ ಆದ ಛಾಪು ಮೂಡಿಸಿದವರು. ಇತ್ತೀ ದಿನಗಳಲ್ಲಿ ಇವರ ಪ್ರತಿಭೆಯನ್ನು ಚಿತ್ರರಂಗ ಸಮರ್ಪಕವಾಗಿ ಬಳಸಿಕೊಳ್ಳದಿದ್ದರೂ, ಇ ಇಂಪಾದ ಮಧುರ ಕಂಠವನ್ನು, ಹಾಡುಗಳನ್ನು ಕನ್ನಡಿಗರು ಮರೆತಿಲ್ಲ ಎಂಬುದು ನಿ ಅದಕ್ಕೆ ಈ ರಾಜ್ಯೋತ್ಸವ ಪ್ರಶಸ್ತಿ ಒಂದು ಪುಟ್ಟ ಸಾಕ್ಷಿ.

ಇವರೆಲ್ಲರ ಜೊತೆ ಚಿತ್ರ ಸಂಗೀತ ಮತ್ತು ಸುಗಮ ಸಂಗೀತ ಕ್ಷೇತ್ರದಲ್ಲಿ ದೊ ಹೆಸರು ಮಾಡಿರುವ ಲಹರಿ ಮ್ಯೂಸಿಕ್ ಸಂಸ್ಥೆಯ ಮಾಲೀಕ ವೇಲು ಕೂಡಾ ರಾಜ್ಯೋ ಪ್ರಶಸ್ತಿ ಪಡೆದಿರುವುದು ಅರ್ಥಪೂರ್ಣವಾಗಿದೆ. ಯಾಕೆಂದರೆ ಜನಪ್ರಿಯ ಚಿತ್ರಗೀತೆಗಳನ್ನ ಖರೀದಿಸುತ್ತಿದ್ದ ಕಾಲದಲ್ಲಿ ಸುಗಮ ಸಂಗೀತವನ್ನು ಕ್ಯಾಸೆಟ್ ಮಾಡಿ ಕರ್ನಾಟ ಮನೆಮನೆಗೆ ತಲುಪಿಸಿದವರು ಇವರು. ಸಾಹಿತಿಗಳಿಗೆ ತಾರಾವರ್ಚಸ್ಸು, ಸುಗಮಸಂಗಿ ಗಾಯಕರಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಬರುವುದಕ್ಕೆ ಲಹರಿ ಸಂಸ್ಥೆಯ ಕೊಡ ಅಪಾರವಾದುದು.

ನಾಲ್ಕು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದ ಪ್ರಕಾಶ್ ರೈ ತರಹದ ಮೇರುನಟನ ಸಮ ಇನ್ನೂ ಅನೇಕ ಸಾಧಕರನ್ನು ನಮ್ಮ ರಾಜ್ಯ ಸರ್ಕಾರ ಗುರುತಿಸಿಲ್ಲ ಎಂಬ ಆರೋಪ ಸರ್ಕಾರದ ಮೇಲಿದೆ. ಮುಖ್ಯವಾಗಿ ಹಳೇ ಕಾಲದ ಅನೇಕ ಹಿರಿಯ ಜೀವಗಳು ತ ಜೀವನದ ಮುಸ್ಸಂಜೆಯಲ್ಲಿದ್ದು ತಮ್ಮ ಸಾಧನೆಯನ್ನು ಅವರೊಬ್ಬರೇ ಮೆಲುಕು ಹಾಕುತ್ತಿದ್ದ ಅಂತಹವರನ್ನು ಹುಡುಕಿ ಈ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದ್ದರೆ ಇ ಭೇಷ್ ಎಂದು ಹೇಳಬಹುದಿತ್ತು.

● ಶೆ

ಗಾನ ಬಜಾನಾ ಎಂಬ ಗಬ್ಬು ಪುರಾಣಾ....

ಕಳೆದ ವರ್ಷ 'ಲವ್ ಗುರು' ಹೆಸರಿನ ಚಿತ್ರವೊಂದು ಬಂದಿತ್ತು, ಸಣ್ಣಮಟ್ಟದಲ್ಲಿ ಹಿಟ್ ಕೂಡಾ ಆಗಿತ್ತು. ಸಾಫ್ಟ್‌ವೇರ್ ಕ್ಷೇತ್ರದಿಂದ ಚಿತ್ರರಂಗಕ್ಕೆ ಬಂದ ನಿರ್ದೇಶಕ ಪ್ರಶಾಂತ್ ರಾಜ್ ಸ್ವಲ್ಪಮಟ್ಟದ ಪ್ರಶಂಸೆಯನ್ನೂ ಪಡೆದಿದ್ದರು. ಆ ಚಿತ್ರಕ್ಕೆ ಫಿಲಂಫೇರ್ ಅವಾರ್ಡು ಕೂಡಾ ಬಂದಿತ್ತು. ಈ ಎಲ್ಲ ಯಶಸ್ಸುಗಳನ್ನು ಪ್ರಶಾಂತ್ ರಾಜ್ ಜವಾಬ್ದಾರಿಯನ್ನಾಗಿ ಸ್ವೀಕರಿಸಿದ್ದರೆ 'ಲವ್ ಗುರು'ಗಿಂತ ಭಿನ್ನವಾದದ್ದನ್ನೋ, ಅಥವಾ ವಿಶೇಷವಾದ ಸಿನಿಮಾವನ್ನೋ ಮಾಡುತ್ತಿದ್ದರು. ಆದರೆ ಈಗ ಪ್ರಶಾಂತ್ ರಾಜ್ ಆ ಚಿತ್ರ ತಂದ ಯಶಸ್ಸನ್ನು ನೆತ್ತಿಗೇರಿಸಿಕೊಂಡು ಪ್ರೇಕ್ಷಕರ ಕಿವಿಗೆ ಹೂ ಮುಡಿಸುವ ಪ್ರಯತ್ನ ಮಾಡಿದ್ದಾರೆ.



ತಾನು ನಿರ್ದೇಶಿಸಿರುವ ""ಗಾನ ಬಜಾನ' ಸಿನಿಮಾ ಕನ್ನಡ ಚಿತ್ರಗಳಿಗೆ ಹೋಲಿಕೆಯೇ ಆಗುವುದಿಲ್ಲ. ಬಾಲಿವುಡ್ ರೇಂಜಿನಲ್ಲಿ ನಮ್ಮ ಸಿನಿಮಾ ಮೂಡಿಬಂದಿದೆ" ಎಂದೆಲ್ಲ ಇದೇ ಪ್ರಶಾಂತ್ ರಾಜ್ ಪುಂಗಿ ಬಜಾಯಿಸಿದ್ದ. ಅಷ್ಟೇ ಅಲ್ಲ ಪತ್ರಿಕಾಗೋಷ್ಠಿಯೊಂದರಲ್ಲಿ ಕನ್ನಡ ಚಿತ್ರಗಳು ನಿಕೃಷ್ಟವಾಗಿವೆ ಎಂದೆಲ್ಲ ಮಾತಾಡಿದ್ದ ಪ್ರಶಾಂತ್ ರಾಜ್. ಆನಂತರ ಆತ ಕ್ಷಮೆ ಯಾಚಿಸಿದ್ದ ಬಿಡಿ.

'ಏನೋ ಹುಡುಗ, ತನ್ನ ಸಿನಿಮಾ ಬಾಲಿವುಡ್ಡು, ಹಾಲಿವುಡ್ಡು ರೇಂಜಲ್ಲೈತೆ ಎಂದಿದ್ದನಲ್ಲ' ಎಂದು ಜನ 'ಗಾನ ಬಜಾನ' ಸಿನಿಮಾ ನೋಡಲು ಹೋದರೆ 'ಅದರಲ್ಲಿ ಗಾನವೂ ಇಲ್ಲ, ಬಜಾನವೂ ಇಲ್ಲ, ಇರುವುದು ಬರಿ ಗಬ್ಬು ಪುರಾಣ' ಎಂಬುದು ಗೊತ್ತಾ ಗುತ್ತದೆ. ಅಸಲಿಗೆ ಈ ಚಿತ್ರದಲ್ಲಿ ಕಥೆಯೆಂಬುದಾಗಲಿ, ಚಿತ್ರಕಥೆಯಾಗಲಿ ಯಾವುದೂ ನೆಟ್ಟಗಿಲ್ಲ. ಜೋಶ್ವಾ ಶ್ರೀಧರ್ ಸಂಗೀತ ನಿರ್ದೇಶನದ ಸುಮಾರಾಗಿರುವ ಒಂದೆರಡು ಹಾಡು ಬಿಟ್ಟರೆ ಇಡೀ ಸಿನಿಮಾದಲ್ಲಿ ಏನೆಂದರೆ ಏನೂ ಇಲ್ಲ. ಶರಣ್‌ನ ಥರ್ಡ್‌ಗ್ರೇಡ್ ಕಾಮಿಡಿ ಸೀನುಗಳು ಗಳಿಗೆಗೊಮ್ಮೆ ತಲೆಮೇಲೆ ಸುತ್ತಿಗೆ ಏಟು ಕೊಡುತ್ತವೆ. ರಾಧಿಕಾ ಪಂಡಿತ್ ನಟಿಸಿದ ಸಿನಿಮಾಗಳು ಫ್ಲಾಪ್ ಆದರೂ 'ಪ್ರಬುದ್ಧ ನಟಿ' ಎಂಬ ಲೇಬಲ್ ಪಡೆದಿದ್ದಾಳೆ. ಆಕೆಯ ಪಾಲಿಗೆ 'ಗಾನ ಬಜಾನಾ' ಒಂದು ದೊಡ್ಡ ಹೊಡೆತ. ಆಕೆಯ ಪಾಪ್ಯುಲಾರಿಟಿಯನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಪ್ರತಿ ಫ್ರೇಮಿನಲ್ಲೂ ರಾಧಿಕಾಳನ್ನೇ ವೈಭವೀಕರಿಸಲಾಗಿದೆ. ಆದರೂ ಅದರಿಂದ ನಯಾಪೈಸೆಯ ಲಾಭವಾಗಿಲ್ಲ. ಪ್ರಶಾಂತ್ ರಾಜ್‌ನಂಥವರು ಎಲ್ಲಾ ಬಿಟ್ಟು ಇಷ್ಟು ಜಾಳುಜಾಳು ಸಿನಿಮಾ ಮಾಡುವುದಕ್ಕಿಂತ ಸಾಫ್ಟ್‌ವೇರ್ ಡೆವಲಪ್ ಮಾಡಿಕೊಂಡೇ ಇರುವುದೊಳಿತು...



● ಅರುಣ್

'ಲೂಸ್' ಫ್ಯಾಮಿಲಿಯ ಹುಚ್ಚಾಟ

" 'ದುನಿಯಾ' ಸಿನಿಮಾದಲ್ಲಿ ನನ್ನ ಮಗ ಯೋಗಿ ಆ್ಯಕ್ಟ್ ಮಾಡಿದ್ದಕ್ಕೆ ಅದು ಸೂಪರ್‌ಹಿಟ್ ಆಗಿದ್ದು. ಬಾರಿ ನಮ್ಮ ಫ್ಯಾಮಿಲಿಯವರೆಲ್ಲಾ ತೆರೆಯ ಮೇಲೆ ಮುಖ ತೋರಿದರೆ 'ಯಕ್ಷ' ಭಯಾನಕ ಹಿ ಆಗಿಬಿಡುತ್ತದೆ" ಎಂದಿದ್ದ ನಿರ್ಮಾಪಕ ಟಿ.ಬಿ. ಸಿದ್ದರಾಜು ಅವರ ಪ್ಲಾನು ಎಕ್ಕುಟ್ಟಿಹೋಗಿದೆ.

ಹಿಂದಿಯ ನಾನಾ ಪಾಟೇಕರ್‌ರನ್ನು ಕರೆಸಿ, ಸಿಕ್ಕಾಪಟ್ಟೆ ಅದ್ದೂರಿಯಿಂದ ಅವರು ನಿರ್ಮಿಸಿರುವ 'ಯಕ್ಷ' ಚ ಮೊದಲ ವಾರವೇ ಮಕಾಡೆ ಬಿದ್ದಿದೆ. ಈ ಚಿತ್ರದಲ್ಲಿ ನಿರ್ಮಾಪಕ ಸಿದ್ದರಾಜು, ಮಗ ಲೂಸ್ ಮಾದ, ಮತ್ತೊ ಮಗ ಮಹೇಶ್, ಲೂಸ್ ತಾಯಿ ಅಂಬುಜಾ ಸೇರಿದಂತೆ ಅವರ ಕುಟುಂಬದ ಚಿಳ್ಳೆಪಿಳ್ಳೆ ಮೆಂಬರುಗಳೇ ನಟಿಸಿದ್ದಾರೆ. ಆದರೂ ಹಾಕಿದ ಬಂಡವಾಳದ ಅರ್ಧ ಕೂಡಾ ವಾಪಸು ಬರುವುದು ಕಷ್ಟವಾಗಿದೆ.

ಲೂಸ್ ಮಾದನನ್ನು ಕುರಿತಂತೆ ಇನ್ನೊಂದು ವಿಚಾರವಿದೆ...

ಡಾ.ರಾಜ್ ಬ್ಯಾನರಿನಲ್ಲಿ ಈಗಷ್ಟೇ ಆರಂಭವಾಗಿರುವ 'ನಾಡೋಡಿಗಳ್' ಚಿತ್ರದ ರಿಮೇಕ್‌ನಲ್ಲಿ ಪುನೀತ್ ಜೊತೆ ಶ್ರೀನಗರ ಕಿಟ್ಟಿ ಮತ್ತು ಲೂಸ್ ಮಾದ ನಟಿಸುತ್ತಿದ್ದಾರೆ. ಈ ಸಿನಿಮಾವನ್ನು ಕನ್ನಡಕ್ಕೆ ತರುವ ಆಲೋಚನೆ ಬಂದಾಗಲೇ ರಾಘವೇಂದ್ರ ರಾಜ್‌ಕುಮಾರ್ ಈ ಪಾತ್ರಕ್ಕೆ ಲೂಸ್ ಮಾದನನ್ನೇ ಹಾಕಿಕೊಳ್ಳಬೇಕು ಎಂದು ತೀರ್ಮಾನಿಸಿದ್ದರು. ಲೂಸು ಕೂಡಾ ಖುಷ್‌ಖುಷಿಯಾಗಿ ಒಪ್ಪಿದ್ದ. ಆದರೆ ದಾವಣಗೆರೆ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಕುಡಿದು ಟೈಟಾಗಿ ರಾದ್ಧಾಂತ ಮಾಡಿಕೊಂಡ ಲೂಸ್, ಅಂದು ರಾಘಣ್ಣನ ಹೆಗಲ ಮೇಲೆ ಕೈಹಾಕಿ ಬಾಯಿಗೆ ಬಂದಂತೆ ಮಾತಾಡಿದ್ದ. ಇದರಿಂದ ಬೇಸರಗೊಂಡ ರಾಜ್ ಫ್ಯಾಮಿಲಿ ತಮ್ಮ ಸಿನಿಮಾದಿಂದ ಲೂಸ್‌ನನ್ನು ದೂರವಿಡುವ ಪ್ರಯತ್ನ ಮಾಡಿತ್ತು. ಆದರೆ ಲೂಸ್ ಮಾದ "ದಯವಿಟ್ಟು ಕ್ಷಮಿಸಿ, ನಾನು ಪುನೀತ್ ಜೊತೆ ನಟಿಸಲೇಬೇಕು... ಇನ್ನೊಂದು ಸಾರಿ ಅಸಭ್ಯವಾಗಿ ವರ್ತಿಸಲ್ಲ" ಎಂದು ಕಾಡಿ, ಬೇಡಿ, ಅತ್ತೂ, ಕರೆದೂ ಮತ್ತೆ ಛಾನ್ಸು ಗಿಟ್ಟಿಸಿಕೊಂಡಿದ್ದಾನೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...